Arya Matha Sanjivini Series, 1.

ಆರ್ಯಮತಸಂಜೀವಿನಿ.

# ಶ್ರೀ ವಿಷ್ಣುಪುರಾಣ

ಪಾಠಶಾಲೆಗಳ ಉಪಯೋಗಕ್ಕಾಗಿ
ವಿರಚಿತವಾದದ್ದು.

Edited and published
*by*
M. A. RAMANUJA IYENGAR,
HOSA AGRAHARAM, MYSORE.

ಮೈಸೂರು: ಸದ್ವಿದ್ಯಾಮಂದಿರಮುದ್ರಾಶಾಲೆಯಲ್ಲಿ
ಮುದ್ರಿಸಲ್ಪಟ್ಟಿತು
೧೮೯೦.

# ಶ್ರೀವಿಷ್ಣುಪುರಾಣ.

ಶುಕ್ಲಾಮ್ಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾನ್ತಯೇ ॥

§ ತತ್ತ್ವೇನ ಯಶ್ಚಿದಚಿದೀಶ್ವರ ತತ್ಸ್ವಭಾವ ಭೋಗಾಪವರ್ಗತದು
ಪಾಯಗತೀರುದಾರಃ । ಸನ್ದರ್ಶಯನ್ನಿರಮಿಮೀತ ಪುರಾಣರತ್ನಂ
ತಸ್ಮೈ ನಮೋ ಮುನಿವರಾಯ ಪರಾಶರಾಯ ॥ * ॥

ಶ್ರಿಯಶ್ಶ್ರೀಯಸ್ಸ್ಥಾನಂ ದಿವ್ಯಂ ಹೃದಯಪಙ್ಕಜಮ್ ।
ಬೋಧಿತಂ ಯೇನ ತಂ ವನ್ದೇ ಪರಾಶರದಿವಾಕರಮ್ ॥ * ॥

ಶ್ರೀಪರಾಶರಮಹರ್ಷಿಗಳು ಲೋಕ ಹಿತಕ್ಕಾಗಿ ತಮ್ಮ ಶಿಷ್ಯರಾದ ಮೈತ್ರೇಯ ಋಷಿಯನ್ನು ನಿಮಿತ್ತೀಕರಿಸಿ, ಶ್ರೀವಿಷ್ಣುತತ್ತ್ವಪ್ರತಿಪಾದಕವಾದ ಪುರಾಣವನ್ನು ಷಡಂಗಗಳಿಂದ ಕೂಡಿದ ವೇದದಂತೆ ಷಡಂಶಗಳಾಗಿ ಹೇಳಿದರು; ಅದೇನೆಂದರೆ :—

ಸರ್ವಜ್ಞರಾದ ಪರಾಶರಮುನೀಶ್ವರರು ಪೌರ್ವಾಹ್ಣಿಕಕ್ರಿಯೆಗಳನ್ನು ನೆರವೇರಿಸಿ ಪ್ರಸನ್ನರಾಗಿ ಕುಳಿತಿರಲು, ಆತ್ಮಗುಣಸಂಪನ್ನ-

---

§ ಅವ್ಯಾಜಕರುಣಾನಿಧಿಗಳಾಗಿ, ಚಿತ್ಸ್ವರೂಪವನ್ನೂ ಅಚಿತ್ಸ್ವರೂಪವನ್ನೂ ಈಶ್ವರಸ್ವರೂಪವನ್ನೂ ಆತ್ಮಗಳಿಂದನುಭವಿಸಬೇಕಾದ ವಿಷಯಸುಖಗಳನ್ನೂ ಮತ್ತು **ಮೋಕ್ಷಸುಖವನ್ನೂ ಅವು**ಗಳ ಸಾಧನ ಭೇದಗಳನ್ನೂ ತಾವು ತಿಳಿದಹಾಗೆ **ಅಜ್ಞರಾದ** ಜನಗಳಿಗೆ ತಿಳಿಸಬೇಕೆಂದಾಶೆಯುಳ್ಳವರಾಗಿ, **ದುರವಗಾಹವಾದ** ವೇದಾರ್ಥಗಳನ್ನು ಪುರಾಣರೂಪವಾಗಿ **ಮಾಡಿದಂಥಾ, ಋಷಿಗಳಿಗೆಲ್ಲಾ** ಸರ್ವೋತ್ಕೃಷ್ಟರಾದ ಪರಾಶರರಿಗೆ **ನಮಸ್ಕಾರಾ.**

* **ಲಕ್ಷ್ಮೀದೇವಿಗೆ ನಿತ್ಯವಾಸಸ್ಥಾನವಾದ** ನಾರಾಯಣನ ಹೃದಯಕಮಲವನ್ನು ವಿಕಾಸಮಾಡಿದಂಥ ಪರಾಶರರೆಂಬ ಸೂರ್ಯನಿಗೆ **ನಮಸ್ಕಾರಾ.**

ರಾದ ಪರಮಾಪ್ತಶಿಷ್ಯರಾದ ಮೈತ್ರೇಯಋಷೀಶ್ವರರು ಅಭಿವಾದನಪೂರ್ವಕ ನಮಸ್ಕರಿಸಿ ಇಂತೆಂದರು.

"ಎಲೈ ಗುರುಗಳಾದ ಪರಾಶರಮಹರ್ಷಿಗಳೆ! ತಮ್ಮ ಕೃಪೆಯಿಂದ ಸಕಲವೇದಾಧ್ಯಯನವು ಸ್ವೀಕರಿಸಲ್ಪಟ್ಟಿತು. ಅದೇಪ್ರಕಾರ ಶಿಕ್ಷಾದಿ ಷಡಂಗಗಳೂ ಮನ್ವಾದಿ ಧರ್ಮಶಾಸ್ತ್ರಗಳೂ ಯಥಾಕ್ರಮವಾಗಿ ಸ್ವೀಕರಿಸಲ್ಪಟ್ಟವು. ಸ್ವಾಮಿಾ, ಮಾನ್ಯರುಗಳು ನನ್ನನ್ನು ಸರ್ವಶಾಸ್ತ್ರಗಳಲ್ಲಿಯೂ ಪರಿಶ್ರಮವುಳ್ಳವನೆಂದು ಹೇಳಿಕೊಳ್ಳುವರು. ಆದ್ದರಿಂದ ಅನನ್ಯಶರಣನಾಗಿರುವ ನಾನು ನಿಮ್ಮ ಕೃಪೆಯಿಂದ ತತ್ವಜಿಜ್ಞಾಸುವಾಗಿ ಕೇಳಲಪೇಕ್ಷಿಸುವದೇನೆಂದರೆ :— ಸ್ಥಾವರಜಂಗಮಾತ್ಮಕವಾದ ಈಜಗತ್ತೆಲ್ಲವು ಹ್ಯಾಗುಂಟಾಯಿತು? ಯಾವಪ್ರಕಾರ ಮುಂದಿರುವದು? ತಿರಿಗಿ ಹ್ಯಾಗಾಗುವದು? ಮತ್ತು ಈ ಜಗತ್ತಿಗೆ ಯಾವುದು *ಉಪಾದಾನಕಾರಣವಾಗಿರುವದು? ಯಾತರಿಂದ ರಕ್ಷಿತವಾಗಿದೆ? ಈ ಚರಾಚರಾತ್ಮಕವಾದ ಪ್ರಪಂಚವು ಯಾತರಿಂದ ನಿರ್ಮಿಸಲ್ಪಟ್ಟಿತು? ಪೂರ್ವದಲ್ಲಿ ಯಾವದರಲ್ಲಿ ಲಯವನ್ನು ಹೊಂದಿತ್ತು? ಮುಂದೆಲ್ಲಿ ವಿಲಯವನ್ನು ಹೊಂದುವದು? ಪೃಥ್ವ್ಯಾದಿ ಭೂತಗಳು ಪ್ರತ್ಯೇಕಪ್ರತ್ಯೇಕ ಎಷ್ಟು ಪ್ರಮಾಣವುಳ್ಳವುಗಳು? ದೇವಾಸುರ ನರತಿರ್ಯಗಾದಿಗಳ ಉತ್ಪತ್ತಿಯು ಹ್ಯಾಗುಂಟಾಯಿತು? ಯಾವಪ್ರಕಾರ ಸಮುದ್ರ ಪರ್ವತಾದಿಗಳಿಗೂ, ಭೂಮಿಗೂ ಸ್ವರೂಪಸ್ವಭಾವವುಂಟಾಯಿತು? ಚಂದ್ರಸೂರ್ಯ ಗ್ರಹ ನಕ್ಷತ್ರಗಳ ಸಂಸ್ಥಾನವು ಹ್ಯಾಗೆ, ಅವುಗಳ ಪ್ರಮಾಣವೆಷ್ಟು? ದೇವಾಸುರ ವಂಶಗಳನ್ನೂ, ಮನುಗಳನ್ನೂ, ಮನ್ವಂತರಗಳನ್ನೂ, ಕಲ್ಪಗಳನ್ನೂ, ವಿಕಲ್ಪಗಳನ್ನೂ, ಕೃತತ್ರೇತಾದಿ ವಿಶೇಷದಿಂದುಂಟಾದ ಅವಾಂತರಕಲ್ಪಗಳನ್ನೂ, ಪ್ರಳಯಸ್ವರೂಪ ಸ್ವಭಾವಗಳನ್ನೂ, ಕೃತತ್ರೇತಾದಿ ಚತುರ್ಯುಗಗಳ ವಿಶೇಷಧರ್ಮಗಳನ್ನೂ ಸಾಕಲ್ಯವಾಗಿ ತಿಳಿಯಲಿಚ್ಛೈಸುತ್ತೇನೆ. ದೇವರ್ಷಿ ರಾಜರ್ಷಿಚರಿತ್ರಗಳನ್ನೂ, ಋಗ್ಯಜುಸ್ಸಾಮಾಥರ್ವಣರೂಪವಾದ ವೇದಶಾಖೆಗಳನ್ನೂ, ಕೃತತ್ರೇ

* ಘಟಕ್ಕೆ ಮಣ್ಣು ಉಪಾದಾನಕಾರಣ. ಅದರಂತೆ

ತಾದಿ ಚತುರ್ಯುಗಗಳ ಕಾಲಪ್ರಮಾಣವನ್ನೂ, ಬ್ರಹ್ಮಕ್ಷತ್ರಾದಿಚಾತುರ್ವರ್ಣ್ಯಧರ್ಮಗಳನ್ನೂ, ಬ್ರಹ್ಮಚರ್ಯಾದ್ಯಾಶ್ರಮ ನಿಯತಧರ್ಮಗಳನ್ನೂ, ಹಾಗೆಯೇ *ಅನುಲೋಮ ವಿಲೋಮಾದಿ ಸಂಕೀರ್ಣಜಾತಿಯವರಿಗೆ ವಿಹಿತವಾದ ಸಾಮಾನ್ಯ ವಿಶೇಷಧರ್ಮಗಳನ್ನೂ ತಮ್ಮನುಗ್ರಹದಿಂದ ಕೇಳಲಪೇಕ್ಷಿಸುತ್ತೇನೆ. ಎಲೈ ಬ್ರಹ್ಮಜ್ಞರಾದ ಮಹಾಮುನೀಶ್ವರರೇ! ಯಾವ ಉಪದೇಶದಿಂದ ಪೂರ್ವೋಕ್ತವಾದ ಸಕಲಧರ್ಮಗಳನ್ನೂ ತಿಳಿದು ಧನ್ಯನಾಗುವೆನೋ, ಹಾಗೆ ತಮ್ಮ ಚಿತ್ತವನ್ನು ನನ್ನಲ್ಲಿ ಅನುಗ್ರಹವುಳ್ಳದ್ದಾಗಿ ಮಾಡಬೇಕು'' ಎನ್ನಲಾಗಿ ಪರಾಶರರು ಹೇಳುವರು.

“ಎಲೈ ಸರ್ವಜ್ಞನಾದ ಮೈತ್ರೇಯನೆ! ನೀನುಮಾಡಿದಪ್ರಶ್ನೆಯು ಬಹುಚೆನ್ನಾಯಿತು. ನಿನ್ನಪ್ರಶ್ನೆಗಳಿಂದ, ನಿಮ್ಮತಂದೆಗೆ ತಂದೆಯಾದ ಪೂಜ್ಯರಾದ ವಸಿಷ್ಠಮಹರ್ಷಿಯು ನಮ್ಮಲ್ಲಿ ಅನುಗ್ರಹದಿಂದುಪದೇಶಮಾಡಿದ ವೃತ್ತಾಂತವನ್ನು ಸ್ಮರಿಸಿದೆವು. ಆವೃತ್ತಾಂತವೇನೆಂದರೆ :— ಪೂರ್ವಕಾಲದಲ್ಲಿ ವಿಶ್ವಾಮಿತ್ರಮಹರ್ಷಿಯಿಂದ ಪ್ರೇರಿತನಾಗಿಬಂದ ರಾಕ್ಷಸನು ನಮ್ಮತಂದೆಯಾದ ಶಕ್ತಿಮಹರ್ಷಿಯನ್ನು ಭಕ್ಷಿಸಿದನೆಂದು ಕೇಳಿದೆವು. ಅದರಿಂದ ನಮಗೆ ಮಹತ್ತಾದ ಕೋಪವುಂಟಾಯಿತು. ನಾವು ಕೋಪೋದ್ರೇಕಪರವಶರಾಗಿ ರಾಕ್ಷಸರ ವಿನಾಶಕ್ಕೆ ಯಜ್ಞವನ್ನಾರಂಭಿಸಿದೆವು. ಅದರಲ್ಲಿ ಬಹುಮಂದಿ ರಾಕ್ಷಸರು ಭಸ್ಮೀಕೃತರಾಗಲು, ಅದನ್ನು ಕಂಡು ನಮ್ಮ ಪಿತಾಮಹರಾದ ವಸಿಷ್ಠಮಹರ್ಷಿಯು ನಮ್ಮನ್ನು ಕುರಿತು — ಅಪ್ಪಾ, ಮಗುವೆ, ಅತಿ ಕೋಪಮಾಡಬಾರದು. ಈಯಾಗವನ್ನು ಬಿಡು. ಈ ರಾಕ್ಷಸರು ತಪ್ಪುಮಾಡಿದವರಲ್ಲ. ನಿಮ್ಮ ತಂದೆಗೆ ಕಾಲಗತಿ ಹಾಗಿತ್ತು. ಮೂಢರಿಗಲ್ಲದೆ ಜ್ಞಾನಿಗಳಿಗೆ ಈಪ್ರಕಾರ ಕೋಪ ಹುಟ್ಟದು, ಅವರಿಗೆ ಕೋಪವೆಲ್ಲಿಂದಬಂತು? ಮಗುವೇ, ಪುರು

* ಉತ್ತಮಬೀಜದಿಂದ ನೀಚಕ್ಷೇತ್ರದಲ್ಲಿ ಹುಟ್ಟಿದಜಾತಿ— ಅನುಲೋಮಜಾತಿ, ನೀಚಬೀಜದಿಂದ ಉತ್ತಮಕ್ಷೇತ್ರದಲ್ಲಿ ಹುಟ್ಟಿದ ಜಾತಿ— ವಿಲೋಮಜಾತಿ ಯೆನ್ನಿಸಿಕೊಳ್ಳುವವು.

ಷನು ತಾನು ಹಿಂದೆಮಾಡಿದ ಕರ್ಮಫಲವನ್ನನುಭವಿಸುತ್ತಾನಾದ್ದರಿಂದ ಯಾವನಿಂದ ಯಾವನು ಕೊಲ್ಲಲ್ಪಡುವನು? ಕೇಳೈಯ್ಯಾ ಪರಾಶರನೇ! ಹಿಂದೆ ಕಷ್ಟಪಟ್ಟು ಸಂಪಾದಿಸಿದ ತಪಸ್ಸಿಗೂ ಕೀರ್ತಿಗೂ ಕ್ರೋಧವೇ ಅತ್ಯಂತನಾಶಕವು. ಸ್ವರ್ಗಾಪವರ್ಗವನ್ನು ಕೆಡಿಸುವ ಕೋಪವನ್ನು ಪರಮಋಷಿಗಳು ಆದ್ದರಿಂದಲೇ ನಿರಂತರದಲ್ಲೂ ಬಿಡುತ್ತಿದ್ದರು. ಆದಕಾರಣ ನೀನು ಕೋಪಕ್ಕೆ ವಶನಾಗಬೇಡ. ನಿರಪರಾಧಿಗಳಾಗಿಯೂ ದೀನರಾಗಿಯೂ ಇರುವ ರಾಕ್ಷಸರನ್ನು ದಹಿಸುವದರಿಂದ ಪ್ರಯೋಜನವೇನು? ಈರಾಕ್ಷಸಸಂಹಾರಕ್ಕೆ ಮಾಡುವ ಯಜ್ಞವು ನಿವೃತ್ತವಾಗಲಿ. ಸಜ್ಜನರು ಅಪರಾಧಿಗಳಲ್ಲಿಯೂ ಕ್ಷಮೆಯೇ ಸಾರವಾಗಿ ಉಳ್ಳವರಲ್ಲವೇ! ಎಂದರು.

ಹೀಗೆ ಸಂತವಿಸಲ್ಪಟ್ಟನಾವು ಆಕ್ಷಣದಲ್ಲೇ ಅವರ ವಾಕ್ಯಗೌರವದಿಂದ ಯಜ್ಞವನ್ನುಪಸಂಹರಿಸಿದೆವು. ಅನಂತರದಲ್ಲಿ ಸರ್ವಜ್ಞರಾದ ವಸಿಷ್ಠರು ಸಂತೋಷವನ್ನು ಹೊಂದಿದರು. ಆಸಮಯದಲ್ಲಿ ಬ್ರಹ್ಮದೇವರ ಕುಮಾರರಾದ ಪುಲಸ್ತ್ಯಮಹಾಮುನಿಯು ಬಂದು ನಮ್ಮ ಪಿತಾಮಹರಾದ ವಸಿಷ್ಠಋಷಿಗಳಿಂದ ಆಸನಪರಿಗ್ರಹವನ್ನು ಮಾಡಿ, ಅರ್ಘ್ಯಾದಿಗಳಿಂದ ಪೂಜಿತರಾಗಿ ನಮ್ಮನ್ನು ಕುರಿತು ಇಂತೆಂದರು.

“ಕೇಳೇ ಪರಾಶರನೇ! ಮಹತ್ತಾದ ವೈರವುಂಟಾದಾಗ್ಯೂ, ಗುರುವಾದ ವಸಿಷ್ಠರವಾಕ್ಯದಿಂದ ನೀವು ಕ್ಷಮೆಯನ್ನು ಆಶ್ರಯಿಸಿದವರಾದಕಾರಣ ನೀವು ಸಕಲಶಾಸ್ತ್ರವನ್ನು ಬಲ್ಲವರಾಗುತ್ತೀರಿ. ನೀವು ಕುಪಿತರಾಗಿ ಯಾವಕಾರಣದಿಂದ ನಮ್ಮಸಂತತಿಚ್ಛೇದವನ್ನು ಮಾಡಲಿಲ್ಲವೋ, ಆದ್ದರಿಂದ ನಿಮಗೆ ಮತ್ತೊಂದು ಉತ್ತಮವರವನ್ನು ಕೊಡುತ್ತೇವೆ. ಆವರವ್ಯಾವದಂದರೆ:— ನೀವು ಪುರಾಣಸಂಹಿತೆಗಳಿಗೆ ಕರ್ತರಾಗಿ ದೇವತಾ ಪಾರಮಾರ್ಥ್ಯವನ್ನು ಯಥಾರ್ಥವಾಗಿ ತಿಳಿಯುವವರಾಗುತ್ತೀರಿ. ನಮ್ಮ ಪ್ರಸಾದದಿಂದ ತ್ರಿವರ್ಗಾಪವರ್ಗಸಾಧನಕರ್ಮಗಳಲ್ಲಿ ಸಂಶಯ ವಿಪರ್ಯಯಜ್ಞಾನ ರಹಿತವಾದ ಬುದ್ಧಿಯೂ ನಿಮಗುಂಟಾಗಲಿ”

ಎಂಬ ಪುಲಸ್ತ್ಯವಾಕ್ಯಾನಂತರದಲ್ಲಿ ನಮ್ಮ ಪಿತಾಮಹರಾದ ವಸಿಷ್ಠರು, "ಎಲೈ ಪರಾಶರನೇ! ಪುಲಸ್ತ್ಯರುಕೊಟ್ಟ ವರಗಳೆಲ್ಲವೂ ನಿನಗೆ ಸಿದ್ಧಿಸಲಿ" ಎಂದು ನಮ್ಮನ್ನು ಅನುಗ್ರಹಿಸಿದರು. ಈ ಪ್ರಕಾರದಲ್ಲಿ ಪುಲಸ್ತ್ಯರು, ಮತ್ತು ವಸಿಷ್ಠರು ಹೇಳಿದ ವಾಕ್ಯಗಳೆಲ್ಲವೂ ನಿನ್ನ ಪ್ರಶ್ನೆಯಿಂದ ಜ್ಞಾಪಕಕ್ಕೆ ಬಂದವು. ಆವರಗಳ ಪ್ರಭಾವದಿಂದ ಸಕಲವನ್ನು ತಿಳಿದು ಪ್ರಶ್ನೆ ಮಾಡುವ ನಿನಗೆ ನಾವು ಸಕಲಾರ್ಥವನ್ನು ಹೇಳುತ್ತೇವೆ. ಈ ಪುರಾಣಸಂಹಿತೆಯನ್ನು ಚನ್ನಾಗಿ ತಿಳಿಯುವವನಾಗು" ಎಂದು ಹೇಳಿ ಶ್ರೋತೃಬುದ್ಧಿಸಮಾಧಾನಾರ್ಥವಾಗಿ ಪ್ರಶ್ನತಾತ್ಪರ್ಯಾನುಗುಣವಾಗಿ ಸಂಕ್ಷೇಪಿಸಿ ಶಾಸ್ತ್ರಾರ್ಥವನ್ನು ಹೇಳಿದರು.

ಅದೇನೆಂದರೆ:— ಚರಾಚರಾತ್ಮಕವಾಗಿ ಉತ್ಪತ್ತಿ ನಾಶವುಳ್ಳ ಈ ಪ್ರಪಂಚವು ಸರ್ವವ್ಯಾಪಕನಾದ, ಚಿದಚಿದ್ಭರಿತನಾದ, ವಿಷ್ಣುವಿನ ಸನ್ನಿಧಾನದಿಂದುತ್ಪನ್ನವಾಯಿತು. ಶ್ರೀ ಮಹಾ ವಿಷ್ಣುವೇ ಈ ಪ್ರಪಂಚಕ್ಕೆ ರಕ್ಷಕನು. ಆ ವಿಷ್ಣುವೇ ನಾಶಕನು. ಹೀಗೆ ಅಂತರ್ಬಹಿರ್ವ್ಯಾಪಕನಾಗಿ ತ್ರಿವಿಧಕಾರಣನಾದುದರಿಂದ ಈ ಜಗತ್ತು ಆವಿಷ್ಣುವೇ.

ಎಂಬಲ್ಲಿಗೆ ಆದಿಪುರಾಣವಾದ ಶ್ರೀ ವಿಷ್ಣು
ಪುರಾಣದಲ್ಲಿ ಪ್ರಥಮಾಂಶದ ಪ್ರಥ
ಮಾಧ್ಯಾಯವು ಮುಗಿಯಿತು.

## ಎರಡನೇ–ಅಧ್ಯಾಯ.

ಸಂಕ್ಷೇಪವಾಗಿ ನಿರೂಪಿಸಿದ ಪುರಾಣಾರ್ಥವನ್ನು ವಿಸ್ತಾರವಾಗಿ ತಿಳಿಸುವದಕ್ಕೋಸ್ಕರ ಶ್ರೀಪರಾಶರಮಹರ್ಷಿಗಳು, ನಿರ್ವಿಘ್ನ ಪರಿಸಮಾಪ್ತ್ಯರ್ಥವಾಗಿ, ವರಪ್ರದಾನದಿಂದ ಲಬ್ಧವಾದ ಜ್ಞಾನವಿಷಯನಾಗಿಯೂ, ಸ್ವಾಭೀಷ್ಟ ಸರ್ವೋತ್ಕೃಷ್ಟ ದೇವತೆಯಾಗಿಯೂ, ಇರುವ ಭಗವಂತನಿಗೆ ನಮಸ್ಕಾರರೂಪವಾದ ಮಂಗಳವನ್ನು ಆಚರಿಸುತ್ತಾರೆ.

ಸ್ವರೂಪದಿಂದ * ವಿಕಾರ ರಹಿತನಾಗಿ, ಪ್ರಾಕೃತಸಂಬಂಧವಾದ ಕ್ಲೇಶ ದೋಷಗಳಿಂದ ರಹಿತನಾಗಿ, ಕಾಲತ್ರಯದಲ್ಲಿಯೂ ಅಸಂಕುಚಿತ ಜ್ಞಾನವಾಗಿ, ಪರಾಧೀನವಲ್ಲದ ನಿಯಂತೃವಾದ ಆತ್ಮನಾಗಿ, ಸರ್ವಕಾಲದಲ್ಲಿಯೂ § ಬದ್ಧಮುಕ್ತ ನಿತ್ಯವ್ಯಾಪೃತವಾದ ದಿವ್ಯಮಂಗಳವಿಗ್ರಹದಿಂದ ಪರಿಶೋಭಿಸುವನಾಗಿ, ಸರ್ವೋತ್ಕೃಷ್ಟನಾದ ಮಹಾವಿಷ್ಣುವಿಗೆ ನಮಸ್ಕಾರವು.

---

* ಪ್ರಕೃತಿ ಸಂಬಂಧದಿಂದುಂಟಾದ ಅವಸ್ಥಾಭೇದಗಳು –ವಿಕಾರಗಳು. ಅವುಗಳು — ಇರುವಿಕೆ, ಹುಟ್ಟುವಿಕೆ, ವೃದ್ಧಿಯಾಗುವಿಕೆ, ರೂಪಾಂತರ ಹೊಂದುವಿಕೆ, ಕ್ಷೀಣವಾಗುವಿಕೆ, ನಾಶ ಹೊಂದುವಿಕೆ ಎಂಬಿವುಗಳಾಗಿವೆ. ಇವುಗಳಿಗೆ ಷಡ್ಭಾವ ವಿಕಾರಗಳೆಂದೂ ಹೆಸರು. ಆದ್ದರಿಂದ ಪೃಥಕ್ಕುವಿಶೇಷಣದಿಂದ, ಜಡಪ್ರಕೃತಿಯಿಂದ ಭಿನ್ನನು ಎಂಬ ಅರ್ಥವಾಗುತ್ತದೆ.

§ ನಿತ್ಯರು ಯಾರೆಂದರೆ – ಸಂಸಾರಸಂಬಂಧವನ್ನು ಎಂದಿಗೂ ಹೊಂದದೇ ಇರುವ, ಭಗವಂತನ ಸೇವೆಯನ್ನೇ ನಿರಂತರದಲ್ಲಿಯೂ ಮಾಡಿಕೊಂಡಿರುವ, ಶ್ರೀವೈಕುಂಠವಾಸಿಗಳಾದ ಅನಂತ ಗರುಡ ವಿಷ್ವಕ್ಸೇನಾದಿಗಳು. ಮುಕ್ತರು ಎಂದರೆ– ಸಂಸಾರವನ್ನು ಹೊಂದಿ ಅನಂತರ ನಿರ್ಹೇತುಕ ಭಗವತ್ಕೃಪೆಯಿಂದ ಮೋಕ್ಷವನ್ನು ಹೊಂದಿದ ಸನಕಾದಿಗಳು. ಬದ್ಧರಾರೆಂದರೆ– ಸಂಸಾರವನ್ನು ಹೊಂದಿ ಅದನ್ನೇ ಅಭಿವೃದ್ಧಿ ಮಾಡಿಕೊಂಡು ವರ್ತಿಸುತ್ತ ನಮ್ಮಂಥಾಜನಗಳು. ಈ ವಿಷಯವು ಅರ್ಥಪಂಚಕವೆಂಬ ಗ್ರಂಥದಲ್ಲಿ ಸ್ಪಷ್ಟವಾಗುತ್ತದೆ.

ಬ್ರಹ್ಮ ವಿಷ್ಣು ಮಹೇಶ್ವರ ರೂಪಗಳಿಂದ ಸೃಷ್ಟಿಸ್ಥಿತಿ ವಿನಾಶಕಾರಿಯಾಗಿ, ವಾಸುದೇವರೂಪದಿಂದ ಮೋಕ್ಷವನ್ನು ಈಯುವ ಸಂಸಾರೋತ್ತಾರಕನಾದ, ಭಗವಂತನಿಗೆ ನಮಸ್ಕಾರವು.

* ಕಾರಣಾವಸ್ಥೆಯಲ್ಲಿ ಏಕರೂಪನಾಗಿಯೂ, ಸೂಕ್ಷ್ಮರೂಪನಾಗಿಯೂ, ಅವ್ಯಕ್ತಸ್ವರೂಪನಾಗಿಯೂ, ಇದ್ದು; ಕಾರ್ಯಾವಸ್ಥೆಯಲ್ಲಿ ಅನೇಕರೂಪನಾಗಿಯೂ, ಸ್ಥೂಲಾತ್ಮಕನಾಗಿಯೂ, ವ್ಯಕ್ತಸ್ವರೂಪನಾಗಿಯೂ, ಇರುವ; ವ್ಯಾಪಕನಾದ, ಮುಕ್ತಿಪ್ರದನಾದ, ಭಗವಂತನಿಗೆ ನಮಸ್ಕಾರವು.

ಪ್ರಪಂಚದ ಸೃಷ್ಟಿಸ್ಥಿತಿವಿನಾಶಗಳಿಗೆ ಮೂಲಭೂತನಾಗಿಯೂ, ಜಗತ್ಸ್ವರೂಪನಾಗಿಯೂ, ಇರುವ ಪರಮಾತ್ಮನಾದ, ಶ್ರೀ ಮಹಾವಿಷ್ಣುವಿಗೆ ನಮಸ್ಕಾರವು.

ಮತ್ತು, ಸಕಲ ಜಗದಾಧಾರ ಭೂತನಾಗಿಯೂ; ಸೂಕ್ಷ್ಮವಸ್ತುಗಳಲ್ಲಿಯೂ ಸೂಕ್ಷ್ಮಸ್ವರೂಪನಾಗಿಯೂ; ನಾಶರಹಿತನಾಗಿಯೂ; ಸರ್ವಭೂತಾಂತರ್ಯಾಮಿಯಾದರೂ ವಿಕಾರ ಶೂನ್ಯನಾಗಿಯೂ, ಪುರುಷೋತ್ತಮನಾಗಿಯೂ; ಸ್ವಭಾವದಿಂದ ಜ್ಞಾನಸ್ವರೂಪನಾಗಿಯೂ; ಅತ್ಯಂತ ನಿರ್ಮಲನಾಗಿಯೂ; ದೇಹಾತ್ಮಭ್ರಾಂತಿಯುಳ್ಳ ದೇಹಿಗಳಿಗೆ, ದೃಶ್ಯರೂಪನಾಗಿಯೂ ಇರುವ, ಜಗದೀಶನಾದ, ಸರ್ಗಸ್ಥಿತಿಪ್ರಳಯಪ್ರಭುವಾದ, ಜನ್ಮಕ್ಷಯಾದಿವಿಕಾರರಹಿತನಾದ, ಶ್ರೀ ಮಹಾವಿಷ್ಣುವಿಗೆ ನಮಸ್ಕಾರವು.

ಕೇಳು ಮೈತ್ರೇಯ! ದಕ್ಷಾದಿಗಳಿಂದ ಪ್ರಶ್ನೆ ಮಾಡಲ್ಪಟ್ಟ ಸೃಷ್ಟ್ಯಾದಿ ತತ್ವಜ್ಞಾನದ ಬಹ್ಮನು ದಕ್ಷಾದಿಗಳಿಗೆ ಉಪದೇಶವನ್ನು ಮಾಡಿದನು. ಆ ಅರ್ಥವಿಶೇಷವನ್ನು ನರ್ಮದಾತೀರದಲ್ಲಿ ಪುರುಕುತ್ಸನಿಗೆ ಅವರು ಉಪದೇಶವನ್ನು ಮಾಡಲು; ಪುರುಕುತ್ಸನು ಸಾರಸ್ವತನಿಗೆ ಅದನ್ನು ಉಪದೇಶಿಸಲು; ಸಾರಸ್ವತನಿಂದ ನಮಗೆ

---

* ಕಾರ್ಯೋತ್ಪತ್ತಿಗೆ ಪೂರ್ವಸ್ಥಿತಿಯು ಕಾರಣಾವಸ್ಥೆಯು. ಇಲ್ಲಿ ಕಾರಣಾವಸ್ಥೆಯು— ಜಗತ್ಸ್ವರೂಪವಾಗಿ ತೋರುವದಕ್ಕೆ ಮೊದಲಿನ ಅವಸ್ಥೆಯು.

ಉಪದಿಷ್ಟವಾದ, ಈ ಅರ್ಥವನ್ನು ನಾವು ಯಥಾಶ್ರುತವಾಗಿ ನಿನಗೆ ಉಪದೇಶಮಾಡುತ್ತೇವೆ.

† ಪರಮಾತ್ಮನು ೧ ಚಿದಚಿದ್ವಿಲಕ್ಷಣನಾಗಿ ೨ ಗುಣಾಧೀನ ಪ್ರವೃತ್ತಿಯುಳ್ಳ ಬ್ರಹ್ಮಾದಿ ದೇವತೆಗಳಿಗೂ ಶ್ರೇಷ್ಠನಾಗಿ, ತಾನು ತನಗಿಂತ ಅತಿಶಯವಾದ ಆತ್ಮಾಂತರ ರಹಿತನಾಗಿ, ತನ್ನಲ್ಲಿ ತಾನೇ ಇರುವನು.

‡ ಈ ಪರಮಾತ್ಮನು ನಾಮ ರೂಪ ಜಾತಿ ವಿಶೇಷಗಳಿಂದ ರಹಿತನಾಗಿಯೂ; ಜನ್ಮ ಪರಿಣಾಮ ವೃದ್ಧಿ ಅಪಕ್ಷಯ ವಿನಾಶಗಳೆಂಬ ಪಂಚವಿಧ ವಿಕಾರವರ್ಜಿತನಾಗಿಯೂ; ಸರ್ವಕಾಲದಲ್ಲಿಯೂ "ಅಸ್ತಿ" ಎಂಬದಾಗಿಯೇ ಹೇಳಲು ಶಕ್ಯನು.

* ಮತ್ತು ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ವ್ಯಾಪಕನಾಗಿ ವಾಸವನ್ನು ಮಾಡುವದರಿಂದ, ಈ ಪರಮಾತ್ಮನನ್ನು ವಾಸುದೇವನೆಂದು ಹೇಳುವರು.

ಆ ಪರಬ್ರಹ್ಮವು ಉತ್ಪತ್ತಿ ವಿನಾಶರಹಿತವಾದದರಿಂದ, ನಿರಂತರದಲ್ಲಿಯೂ ಏಕರೂಪವಾಗಿಯೂ; ಅವಿದ್ಯಾದಿ ದೋಷರಹಿತವಾದದರಿಂದ ನಿರ್ಮಲಸ್ವರೂಪವಾಗಿಯೂ ಇರುವದು.

---

† ಇದರಿಂದ ಪರಮಾತ್ಮನಿಗೆ ಕಾಲದೇಶವಸ್ತ್ವಪರಿಚ್ಛಿನ್ನ ಭಾವವು ನಿರೂಪಿಸಲ್ಪಟ್ಟಿತು. ೧ ಚಿತ್ತು ಎಂಬುವದು ಆತ್ಮವು, ಅಚಿತ್ತು ಎಂಬುವದು ಜಡಪ್ರಕೃತಿಯು. ೨ ಇಲ್ಲಿ ಗುಣಶಬ್ದದಿಂದ ಸತ್ವರಜಸ್ತಮೋಗುಣಗಳು ಹೇಳಲ್ಪಡುವದು. ಬ್ರಹ್ಮಾದಿಸಮಸ್ತ ಜೀವಕೋಟಿಗಳ ಪ್ರವೃತ್ತಿಯು ಸತ್ವರಜಸ್ತಮೋಗುಣಗಳಿಗೆ ವಶವಾಗಿರುವದು. ಪರಮಾತ್ಮನದು ಅವುಗಳಿಗೆ ಅಧೀನವಲ್ಲ. ಅಂದರೆ, ಪರಮಾತ್ಮನು ಪ್ರಕೃತಿಯನ್ನು ಜೈಯಿಸಿರುವನೆಂಬಭಿಪ್ರಾಯವು.

‡ ಇದರಿಂದ ಕಾಲಾವಚ್ಛೇದರಾಹಿತ್ಯವು ನಿರೂಪಿತವಾಯಿತು.

* ವಾಸುದೇವಶಬ್ದ ನಿರ್ವಚನದಿಂದ ದೇಶಾನವಚ್ಛೇದವು ನಿರೂಪಿಸಲ್ಪಟ್ಟಿತು. ವಾಸುದೇವ ಶಬ್ದಕ್ಕೆ,- ಸಮಸ್ತ ಪ್ರಪಂಚವು ಪರಮಾತ್ಮನಲ್ಲಿರುವದು ಮತ್ತು ಆ ಪರಮಾತ್ಮನು ಎಲ್ಲಾ ಪದಾರ್ಥಗಳಲ್ಲಿಯೂ ವಾಸವಾಗಿ ಇರುವನು, ಎಂಬುವದು ಅವಯವಾರ್ಥವು.

ಈ ಪರಬ್ರಹ್ಮವು ಅವ್ಯಕ್ತಸ್ವರೂಪವಾಗಿಯೂ, ಪುರುಷಸ್ವರೂಪವಾಗಿಯೂ, ವ್ಯಕ್ತಸ್ವರೂಪವಾಗಿಯೂ, ಕಾಲಸ್ವರೂಪವಾಗಿಯೂ, ಈ ನಾಲ್ಕು ಪ್ರಕಾರವಾಗಿ, ಸೃಷ್ಟಿಸ್ಥಿತಿ ಪ್ರಳಯಗಳಿಗೆ ಕಾರಣವಾಗಿ ಇರುವದು.

ಈ ಪ್ರಧಾನಪುರುಷವ್ಯಕ್ತಕಾಲಗಳಿಗೆ ಮೂಲಭೂತವಾದ ಆ ಪರಬ್ರಹ್ಮದ ಶುದ್ಧಸ್ವರೂಪವೇ, ಅವ್ಯಾಕೃತ ದಿವ್ಯದೇಶವೆಂಬ ಪರಮಪದದಲ್ಲಿ ನಿತ್ಯದಲ್ಲಿಯೂ ನಿತ್ಯಸೂರಿಗಳಿಂದ, ಸೇವಿಸಲ್ಪಡುತ್ತಲಿರುವದು.

ಎಲೈ, ಮೈತ್ರೇಯನೇ! ಈ ಪ್ರಧಾನಪುರುಷವ್ಯಕ್ತಸ್ವರೂಪಗಳಿಂದ ನಡೆಸುತ್ತಲಿರುವ ಆ ವಿಷ್ಣುವಿನ ಸೃಷ್ಟಿಸ್ಥಿತಿಪ್ರಳಯಗಳನ್ನು ಬಾಲಕ್ರೀಡೆಯಂತೆ ಅನಾಯಾಸವಾದ ವಿನೋದ ಲೀಲೆಯಿಂದು ತಿಳಿಯುವನಾಗು.

* ಯಾವದು ಅವ್ಯಕ್ತವೋ ಆ ವಸ್ತುವನ್ನೇ ಮುನ್ಯಾದಿಗಳು ಪ್ರಕೃತಿಯೆಂದೂ ಪ್ರಧಾನವೆಂದೂ ಹೇಳಿದರು. ಆ ಪ್ರಧಾನವು ಚೇತನಾಚೇತನಾತ್ಮಕವಾಗಿಯೂ, ಅನನ್ಯಾಧಾರವಾಗಿಯೂ, ಅಜರವಾಗಿಯೂ, ಸ್ಥಿರವಾಗಿಯೂ, ಶಬ್ದಸ್ಪರ್ಶರೂಪಾದಿ ವಿಶೇಷಗುಣವಿಹೀನವಾಗಿಯೂ, ಸೂಕ್ಷ್ಮವಾಗಿಯೂ, ಆದ್ಯಂತಶೂನ್ಯವಾಗಿಯೂ, ಸತ್ವರಜಸ್ತಮೋಗುಣಗಳ ಸಾಮ್ಯವುಳ್ಳದ್ದಾಗಿಯೂ, ಇರುವದು. ಈ ಪ್ರಧಾನಪುರುಷರುಗಳು ಆ ಪರಬ್ರಹ್ಮದಲ್ಲಿ, ಪೂರ್ವಪ್ರಳಯಾನಂತರದಲ್ಲಿ ಸೃಷ್ಟಿಗೆ ಪೂರ್ವದಲ್ಲಿ, ಉದಕದಲ್ಲಿ ಲವಣದಂತೆ, ಬೆರದಿರುವವು.

ಎಲೈ, ಸರ್ವಜ್ಞನಾದ ಮೈತ್ರೇಯನೇ! ಕೇಳು: ವೇದಮಾರ್ಗಾನುಗುಣವಾದ ನ್ಯಾಯಶಾಸ್ತ್ರದಲ್ಲಿ ನಿಪುಣರಾಗಿ ವೇದಾರ್ಥದಲ್ಲಿ ಅಭಿಲಾಷೆಯುಳ್ಳವರಾದ ಬ್ರಹ್ಮಜ್ಞಾನಿಗಳು ನಾವು ಹೇಳಿದ ಅರ್ಥಕ್ಕೆ

* ಅನಂತರ ಸೃಷ್ಟಿಯನ್ನು ಹೇಳುವ ನಿಮಿತ್ತ ಪ್ರಳಯಾನಂತರದಲ್ಲಿರುವ ಪ್ರಧಾನ ಪುರುಷಾದಿಗಳ ಸ್ವರೂಪವು ನಿರೂಪಿಸಲ್ಪಡುವದು.

ಅನುಗುಣವಾಗಿಯೆ ಶಾಸ್ತ್ರಗಳನ್ನು ಪ್ರತಿಪಾದಿಸುವರು. "ಯಾವ ಕಾಲದಲ್ಲಿ ಹಗಲು ಇರಳು ಭೂಮಿ ಅಂಧಕಾರ ಜ್ಯೋತಿರ್ಗಣಗಳೂ ಮತ್ತು ಅಹಂಕಾರಾದಿತತ್ವಗಳೂ ಇಲ್ಲವ್ರೋ, ಅಂಥಾ ಪ್ರಳಯಕಾಲದಲ್ಲಿ ಶ್ರೋತ್ರಾದಿ ಜ್ಞಾನೇಂಧ್ರಿಯಗಳಿಗೆ ‖ ಅಗೋಚರವಾದ ಪ್ರಧಾನವ್ರೂ, ಪುರುಷನೂ, ಪರಬ್ರಹ್ಮವ್ರೂ— ಈ ಮೂರು ತತ್ವಗಳೂ ಒಂದೇ ಆಗಿದ್ದವು"

ಕೇಳು, ಮೈತ್ರೇಯನೇ! ಈ ಪ್ರಕೃತಿಪುರುಷರಗಳೆರಡು ಸೃಷ್ಟಿಕಾಲದಲ್ಲಿ ಆಪರಮಾತ್ಮನಾದ ಮಹಾವಿಷ್ಣುವಿನಿಂದ ಬೇರೆಯಾದವು. ಆ ಪರಮಾತ್ಮನ ಶರೀರಗಳಾದ ಈ ಎರಡೂ ಸೃಷ್ಟಿಕಾಲದಲ್ಲಿ ಯಾತರಿಂದ ಸೇರಿಸಲ್ಪಡುವವ್ರೋ, ಪ್ರಳಯಕಾಲದಲ್ಲಿ ಬೇರೆಮಾಡಲ್ಪಡುವವ್ರೋ, ಪರಮಾತ್ಮನ ಆ ರೂಪಾಂತ್ರರವೇ ಕಾಲವೆಂಬ ಹೆಸರುಳ್ಳದ್ದು.

ಅತೀತ ಪ್ರಳಯದಲ್ಲಿ ವ್ಯಕ್ತಸ್ವರೂಪವಾದ ಈ ಸಕಲ ಪ್ರಪಂಚವು ಮೂಲಪ್ರಕೃತಿಯಲ್ಲಿ ಲೀನವಾದದುದರಿಂದ, ಅದು ಪ್ರಾಕೃತಪ್ರಳಯವೆಂದೆನಿಸಿಕೊಳ್ಳುದು. ಅನಾದಿಯಾದ ಈಕಾಲಸ್ವರೂಪಕ್ಕೆ ನಾಶವಿಲ್ಲವಾದ ಕಾರಣ, ಸೃಷ್ಟಿಸ್ಥಿತಿಪ್ರಳಯಗಳು ಪ್ರವಾಹರೂಪದಿಂದ ನಿತ್ಯಗಳಾಗಿರುವವು. ಸತ್ವರಜಸ್ತಮೋಗುಣಗಳ ಸಾಮ್ಯಾವಸ್ಥೆಯನುಳ್ಳ ಪ್ರಧಾನವ್ರೂ, ಪುರುಷನೂ ಬೇರೆಬೇರೆ ಇರುವದರಿಂದ; ಅವುಗಳನ್ನು, ಜೀವಕರ್ಮಾನುಗುಣವಾಗಿ ಸೃಷ್ಟ್ಯನುಕೂಲವಾಗಿ ಮಾಡುವದಕ್ಕೋಸ್ಕರ ಕಾಲಸ್ವರೂಪವು ಪ್ರವರ್ತಿಸುವದು.

ಅನಂತರದಲ್ಲಿ ಸೃಷ್ಟಿಕಾಲವು ಸಂಪ್ರಾಪ್ತವಾಗಲು ; ವೇದಾಂತ ಪ್ರತಿಪಾದ್ಯನಾಗಿಯೂ, ಮಹಾಪದಾರ್ಥಗಳಿಗೂ ಮಹೀಯನಾಗಿಯೂ, ಸೂಕ್ಷ್ಮವಾದ ವಸ್ತುಗಳಲ್ಲಿ ಸೂಕ್ಷ್ಮನಾಗಿಯೂ, ಸಕಲ ಜಗತ್ಸ್ವರೂಪನಾಗಿಯೂ, ಜಗನ್ನಿಯಾಮಕನಾಗಿಯೂ, ಸರ್ವಾನುಪ್ರವೇಶವುಳ್ಳವನಾಗಿಯೂ, ಸರ್ವಭೂತಗಳಿಗೂ ನಿಯಾಮ

‖ ಶಬ್ದಾದಿರಾಹಿತ್ಯದಿಂದ.

ಕನಾಗಿಯೂ, ಸರ್ವವಸ್ತುಗಳಿಗೂ ಆಧಾರನಾಗಿಯೂ, ಜಗದೀಶ್ವರನಾಗಿಯೂ, ಬ್ರಹ್ಮಾದಿಗಳಿಗೂ ನಿಯಂತೃನೂ, ಆದ ಶ್ರೀಹರಿಯು ಸ್ವಸಂಕಲ್ಪದಿಂದಲೇ ಸವಿಕಾರ ನಿರ್ವಿಕಾರಗಳಾದ ಪ್ರಧಾನ ಪುರುಷರುಗಳ ಅಂತಃಪ್ರವೇಶವನ್ನು ಮಾಡಿ, ಪ್ರಧಾನ ಪುರುಷರಗಳಿಗೆ, ಯಥಾಕ್ರಮವಾದ ಗುಣವಿಶೇಷ ಸಂಸ್ಕಾರೋದ್ಬೋಧನವನ್ನು ಮಾಡುವನು.

ಹೀಗೆ ಪ್ರಕೃತಿಪುರುಷಕ್ಷೋಭಹೇತುವಾದ ಈ ಪರಮಾತ್ಮನು ತಾನು ಅವಿಕಾರನು. ಅದು ಹ್ಯಾಗಂದರೆ :— ಕಸ್ತೂರಿಕಾಗಂಧವು ಅದರ ಸಂಸ್ಪರ್ಶವಿಲ್ಲದಿದ್ದರೂ ಸನ್ನಿಧಿಮಾತ್ರದಿಂದಲೇ ಮನಸ್ಸಿಗೆ ಸುಖದುಃಖಾದಿ ರೂಪವಿಕಾರವನ್ನು ಹುಟ್ಟಿಸುವದು. ಅದರ ಹಾಗೆ ಪರಮಾತ್ಮನು ಕ್ಷೋಭಕನಾದರೂ ಅವಿಕಾರನು.

ಆ ಪರಮಾತ್ಮನು ಕ್ಷೋಭಕನಾಗಿರುವದರಿಂದ, ಕುಲಾಲನು ತನಗೆ ಬಹಿರ್ಭೂತವಾದ ಮೃತ್ಪಿಂಡಕ್ಕೆ ನಿಮಿತ್ತ ಕಾರಣವಾದಂತೆ, ನಿಮಿತ್ತಕಾರಣನಾಗಿಯೂ, ಕ್ಷೋಭ್ಯಗಳಾದ ಪ್ರಕೃತಿ ಪುರುಷರುಗಳು ತನಗೆ ಶರೀರವಾಗಿರುವದರಿಂದ ಉಪಾದಾನ ಕಾರಣವಾಗಿಯೂ ಇರುವನು. ಉಪಾದಾನ ಕಾರಣವಾಗಿ ಇರುವದು ಹ್ಯಾಗಂದರೆ :— ಸರ್ವನಿಯಾಮಕರಾದ ಬ್ರಹ್ಮಾದಿಗಳಿಗೂ ನಿಯಂತೃನಾದ ಪರಮಾತ್ಮನು ಸ್ವಶರೀರಭೂತ ಪ್ರಧಾನಪುರುಷಾತ್ಮಕ ಪ್ರಪಂಚವು ತಾನೇ ಅದ್ದರಿಂದಲೂ, ಮತ್ತು ಸಮಷ್ಟಿ ವ್ಯಷ್ಟಿರೂಪ ಬ್ರಹ್ಮಾದಿಗಳೊಡನೆ ಯುಕ್ತವಾಗಿ, ವ್ಯಕ್ತವಾದ ಕಾರ್ಯಸ್ವರೂಪ ಪ್ರಪಂಚವು ತಾನೇ ಆದ್ದರಿಂದಲೂ, ಉಪಾದಾನಕಾರಣವು.

ಈ ಪ್ರಕಾರವಾಗಿ ಪರಾಶರಮಹರ್ಷಿಗಳು ಸಂಕ್ಷೇಪವಾಗಿ ಸೃಷ್ಟಿಯನ್ನು ಪ್ರತಿಪಾದಿಸಿ ಮುಂದೆ ವಿಸ್ತಾರವಾಗಿ ನಿರೂಪಿಸುವರು. ಅದು ಹ್ಯಾಗಂದರೆ :—

ಕಾಲ ಕ್ಷೋಭಾನಂತರದಲ್ಲಿ ಜೀವಾತ್ಮರಗಳ ಕರ್ಮಪರಿಪಾಕಪ್ರೇರಿತ ಗುಣಸಾಮ್ಯಾವಸ್ಥೆಯನ್ನು ಹೊಂದಿದ ಪ್ರಕೃತಿತತ್ವದ ದೆಸೆಯಿಂದ

ವೈಷಮ್ಯವುಳ್ಳ ಮಹತ್ತತ್ತ್ವವು ಆವಿರ್ಭವಿಸಿತು. ಉದ್ಭೂತವಾದ ಮ
ಹತ್ತತ್ತ್ವವು ಅದಕ್ಕೆ ಕಾರಣಭೂತವಾದ ಪ್ರಧಾನ ತತ್ತ್ವದಿಂದ,
ತ್ವಕ್ಕಿನಿಂದ ಬೀಜವು ಹ್ಯಾಗೋ, ಹಾಗೆ ಆವರಿಸಲ್ಪಟ್ಟಿತು. ಆ ಮ
ಹತ್ತತ್ತ್ವವು ಸಾತ್ವಿಕ ರಾಜಸ ತಾಮಸ ಭೇದಗಳಿಂದ ಮೂರು ಅಹಂ
ಕಾರಗಳಾಗಿ ಪರಿಣಮಿಸಿತು. ಅಭಿವ್ಯಕ್ತವಾದ ಸತ್ವರಜಸ್ತಮೋ
ಗುಣಗಳ ಸಂಬಂಧದಿಂದ ಮೂರುವಿಧವಾಗಿ ಪರಿಣಮಿಸಿದ, ವೈಕಾರಿ
ಕ ತೈಜಸ ಭೂತಾದಿಗಳೆಂದೂ ಕರೆಯಲ್ಪಡುವ, ಆ ಅಹಂಕಾರತತ್ವವು
ಪಂಚಭೂತಗಳಿಗೂ ಏಕಾದಶೇಂದ್ರಿಯಗಳಿಗೂ ಕಾರಣವಾಗಿರುವದು.

ಪ್ರಧಾನತತ್ವದಿಂದ ಮಹತ್ತತ್ವವು ಹ್ಯಾಗೆ ಆವರಿಸಲ್ಪಟ್ಟಿ
ತೊ, ಹಾಗೆಯೇ ಮಹತ್ತತ್ವದಿಂದ ಅಹಂಕಾರತತ್ವವು ಆವರಿಸಲ್ಪ
ಟ್ಟಿತು. ಅನಂತರ ಭೂತಾದಿಯೆಂಬ ತಾಮಸಾಹಂಕಾರತತ್ವವು ಕ್ಷು
ಬ್ಧವಾಗಿ ಅನಭಿವ್ಯಕ್ತಶಬ್ದಗುಣಕವಾದ ತತ್ವವನ್ನು ಹುಟ್ಟಿಸಿತು.
ಆ ಶಬ್ದತನ್ಮಾತ್ರವು ಸಹಕಾರದಿಂದ ಶಬ್ದಗುಣಕವಾದ ಆಕಾಶವನ್ನು
ಸೃಷ್ಟಿಸಿತು. ಭೂತಾದಿಗೆ ಆಕಾಶೋತ್ಪತ್ತಿಕಾಲದಲ್ಲಿ ರಾಜಸಾ
ಹಂಕಾರವು ಸಹಕಾರಿಯಾಯಿತು; ಸಾತ್ವಿಕಾಹಂಕಾರಕ್ಕೆ ಇಂದ್ರಿ
ಯೋತ್ಪತ್ತಿಯಕಾಲದಲ್ಲಿಯೂ ಸಹಕಾರಿಯಾಯಿತು.

ಆ ಭೂತಾದಿಯಾದ ತಾಮಸಾಹಂಕಾರವು ಶಬ್ದತನ್ಮಾತ್ರವನ್ನೂ
ಹಾಗೆಯೇ ಆಕಾಶವನ್ನೂ ಆವರಿಸಿತು. ಆಕಾಶತನ್ಮಾತ್ರವು ವಿಕಾರ
ವನ್ನೈದುತ್ತಬಂದು ಸ್ಪರ್ಶತನ್ಮಾತ್ರವನ್ನು, (ಅದರಿಂದ) ಸ್ಥೂಲ
ವಾಯುವನ್ನು ಸೃಜಿಸಿತು. ಆ ವಾಯುವು ಬಲವತ್ತಾಗಿ, ವ್ಯಕ್ತಸ್ಪ
ರ್ಶಗುಣವುಳ್ಳದ್ದಾಯಿತು.

ಆಕಾಶವೂ, ಶಬ್ದತನ್ಮಾತ್ರವೂ ಸ್ಪರ್ಶತನ್ಮಾತ್ರವನ್ನು ಆವರಿ
ಸಿದವು. ಆ ಸ್ಪರ್ಶತನ್ಮಾತ್ರದಿಂದ, ರೂಪವೂ, ವ್ಯಕ್ತಗುಣ ರೂಪ
ವುಳ್ಳ ತೇಜಸ್ಸೂ ಉದ್ಭವಿಸಿದವು. ಸ್ಪರ್ಶತನ್ಮಾತ್ರವೂ ವಾಯು
ವೂ ಸಹ ರೂಪತನ್ಮಾತ್ರವನ್ನು ಆವರಿಸಿದವು. ಆ ರೂಪತನ್ಮಾತ್ರ
ದಿಂದ ರಸತನ್ಮಾತ್ರವೂ, ವ್ಯಕ್ತರಸಗುಣವುಳ್ಳ ಅಪ್ಪು ಉದ್ಭವಿಸಿದ
ವು. ಆ ರೂಪತನ್ಮಾತ್ರವೂ ತೇಜಸ್ಸೂ ರಸತನ್ಮಾತ್ರವನ್ನು ಆವರಿ

ಸಿದವು. ಆರಸತನ್ಮಾತ್ರದಿಂದ ಅವ್ಯಕ್ತಗಂಧಗುಣಕವಾದ ಗಂಧತನ್ಮಾತ್ರವು, ಅದರಿಂದ ವ್ಯಕ್ತಗಂಧಗುಣವುಳ್ಳ ದೃಢವಾದ ಪೃಥವಿಯು ಹುಟ್ಟಿತು.

ಆಯಾ ಸೂಕ್ಷ್ಮ ತತ್ವಗಳಲ್ಲಿ ಆಯಾ ಸೂಕ್ಷ್ಮ ಗುಣ ವಿಶೇಷಗಳು ಇರಲಾಗಿ, ಸೂಕ್ಷ್ಮತತ್ವಗಳಿಗೆ ತನ್ಮಾತ್ರ ತನ್ಮಾತ್ರ ಎಂದು ಹೆಸರಾಯಿತು. ಆ ತನ್ಮಾತ್ರಗಳಲ್ಲಿ, ವಿಶೇಷ ಗುಣಗಳು (ಅಂದರೆ ಅದರಲ್ಲಿರುವಶಬ್ದಾದಿಗುಣಗಳು) ಇಲ್ಲದರಿಂದ ಅವುಗಳು ಅವಿಶೇಷಗಳೆನಿಸಿ ಕೊಂಬವು. ಮತ್ತು ಈ ಸೂಕ್ಷ್ಮಗಳಾದ ಪಂಚ ತನ್ಮಾತ್ರಗಳಲ್ಲಿ ಸತ್ವರಜಸ್ತಮೋಜನ್ಯಗಳಾದ ಶಾಂತತ್ವ ಘೋರತ್ವ ಮೂಢತ್ವವೆಂಬ ವಿಶೇಷಗುಣ ವಿಲ್ಲವಾದಕಾರಣದಿಂದಲೂ, ಅವಿಶೇಷಗಳೆಂದು ಹೆಸರುಳ್ಳದ್ದಾದವು.

ಹೀಗೆ ತಾಮಸಾಹಂಕಾರದಿಂದ ಪಂಚತನ್ಮಾತ್ರಗಳೂ ಪಂಚಭೂತಗಳೂ ಉಕ್ತಕ್ರಮದಲ್ಲಿ ಹುಟ್ಟಿದವು. ಇಂದ್ರಿಯಗಳು ತೈಜಸಾಹಂಕಾರಕಾರ್ಯಗಳೆಂದು ಕೆಲವರು ಹೇಳುವರು; ಕೆಲವರು ದೇವಶಬ್ದವಾಚ್ಯಂಗಳಾದ, ಮನಸ್ಸು ಸಹ ಏಕಾದಶ ಇಂದ್ರಿಯಗಳು ಸಾತ್ವಿಕಾಹಂಕಾರಜನ್ಯಗಳೆಂದು ಹೇಳುವರು. ಈ ಉಭಯಪಕ್ಷದಲ್ಲಿ ಸಾತ್ವಿಕಾಹಂಕಾರ ಜನ್ಯವೆಂಬುವದೇ ನಮ್ಮ ಸಿದ್ಧಾಂತವು. ಇಂದ್ರಿಯಗಳು ದೇವತಾಧಿಷ್ಠಾನಗಳಾದಕಾರಣ, ದೇವಶಬ್ದವಾಚ್ಯಗಳು. ಸಾತ್ವಿಕಾಹಂಕಾರದಿಂದ ಹುಟ್ಟಿದ ತ್ವಗಿಂದ್ರಿಯ ಚಕ್ಷುರಿಂದ್ರಿಯ ಘ್ರಾಣೇಂದ್ರಿಯ ಶ್ರೋತ್ರೇಂದ್ರಿಯ ಜಿಹ್ವೇಂದ್ರಿಯಗಳೆಂಬ ಜ್ಞಾನೇಂದ್ರಿಯಗಳೈದೂ ಅಂತರಿಂದ್ರಿಯವಾದ ಮನಸ್ಸಿನೊಡನೆ ಕೂಡಿಕೊಂಡು ಶಬ್ದಾದಿಗಳನ್ನು ಗ್ರಹಿಸುವದು. ವಾಕ್ಪಾಣಿಪಾದಪಾಯೂಪಸ್ಥಗಳು ಎಂಬ ಕರ್ಮೇಂದ್ರಿಯಗಳೈದೂ ಮನಸ್ಸಂಯುಕ್ತಗಳಾಗಿ ವಾಕ್ಕು ಶಿಲ್ಪ ಗಮನ ಮಲವಿಸರ್ಗ ಮೂತ್ರವಿಸರ್ಗಗಳು ಎಂಬ ಐದು ಕೃತ್ಯಗಳನ್ನು ಮಾಡುವವು.

ಕೇಳು, ಮೈತ್ರೇಯಾ! ಸ್ಥೂಲರೂಪಗಳಾದ ಆಕಾಶ ವಾಯು ತೇಜಸ್ಸು ಸಲಿಲ ಪೃಥವೀ ಎಂಬ ಪಂಚ ಮಹಾಭೂತಗಳು ಉತ್ತರೋತ್ತರ ತತ್ವಗಳಲ್ಲಿ ಅಧಿಕ ಗುಣಗಳಿಂದ ಕೂಡಿ ಇರುವವು.

ಅದು ಹ್ಯಾಗಂದರೆ :— ಆಕಾಶವು ಶಬ್ದವೆಂಬ ಒಂದೇ ಗುಣವುಳ್ಳದ್ದು. ವಾಯುವು ಶಬ್ದಸ್ಪರ್ಶವೆಂಬ ಎರಡು ಗುಣಗಳನ್ನು ಉಳ್ಳದು. ತೇಜಸ್ಸು ಶಬ್ದಸ್ಪರ್ಶ ರೂಪಗಳೆಂಬ ಮೂರು ಗುಣಗಳನ್ನು ಉಳ್ಳದು. ಅಪ್ಪು ಶಬ್ದಸ್ಪರ್ಶ ರೂಪ ರಸಗಳೆಂಬ ನಾಲ್ಕು ಗುಣಗಳನ್ನು ಉಳ್ಳದು. ಪೃಥಿವಿಯು ಶಬ್ದಸ್ಪರ್ಶ ರೂಪ ರಸ ಗಂಧಗಳೆಂಬ ಐದು ಗುಣಗಳನ್ನು ಉಳ್ಳದು. ಈ ರೀತಿಯ ಪಂಚ ಮಹಾ ಭೂತಗಳಲ್ಲಿ, ಪೃಥಿವಿಯೂ ಅಪ್ಪೂ ಸ್ವತಃ ಶಾಂತಗಳಾಗಿ ಇರುವವು; ತೇಜೋವಾಯುಗಳು ಸ್ವತಃ ಘೋರಗಳಾಗಿ ಇರುವವು ; ಆಕಾಶವುಮಾತ್ರ ಮೂಢವಾಗಿರುವದು. ಇವುಗಳು ಅನ್ಯೋನ್ಯ ಸಂಪರ್ಕದಿಂದ ಶಾಂತಗುಣ ಘೋರಗುಣ ಮೂಢಗುಣಗಳುಳ್ಳವುಗಳಾಗಿ ಇರುವವು. *

ಎಲೈ ಮೈತ್ರೇಯನೇ! ಕೇಳು. ಪಂಚಮಹಾಭೂತಗಳು, ಅವಕಾಶ ಶೋಷಣ ದಾಹನ ಕ್ಲೇದನ ಧಾರಣ ರೂಪವಾದ ಭಿನ್ನ ಭಿನ್ನ ಶಕ್ತಿಯುಕ್ತಗಳಾಗಿ ಒಂದಕ್ಕೊಂದು ಸಂಬಂಧವಿಲ್ಲದ್ದರಿಂದ, ಸ್ವಪ್ಟಕಾರ್ಯದಲ್ಲಿ ಅಸಮರ್ಥಗಳಾದವು. ಆದಕಾರಣ ಈ ಭೂತಗಳು ಅಂಡಾದಿರೂಪ ಪ್ರಯೋಜನಕ್ಕಾಗಿ, ಪರಸ್ಪರ ಸಂಬಂಧಯುಕ್ತಗಳಾಗಿ ತಾವು ಐಕ್ಯಭಾವವನ್ನು ಹೊಂದಿ, ಅವ್ಯಕ್ತ ಪುರುಷರುಗಳ ಅನುಪ್ರವೇಶದಿಂದ ಅಂಡವನ್ನು ಸೃಷ್ಟಿಸುತ್ತಿರುವವು. ಹೀಗೆ ಭೂತಗಳಿಂದ § ಸೃಷ್ಟವಾದ ಅಂಡವು ¶ ಜಲಬುದ್ಬುದಪ್ರಕಾರದಲ್ಲಿ ಅಭಿ

---

* ಈ ಪಂಚಮಹಾ ಭೂತಗಳಿಗೆ ಪಂಚೀಕರಣ ಪ್ರಕ್ರಿಯೆಯು ಹ್ಯಾಗಂದರೆ? ಪೃಥ್ವಿಯಲ್ಲಿ ಅರ್ಧಭಾಗವು ಪೃಥ್ವೀ ತತ್ವವಾಗಿಯೂ, ಎಂಟರಲ್ಲಿ ಒಂದು ಭಾಗವು ಅಬ್ತತ್ವವಾಗಿಯೂ, ಎಂಟರಲ್ಲಿ ಒಂದು ಭಾಗವು ತೇಜಸ್ತತ್ವವಾಗಿಯೂ, ಎಂಟರಲ್ಲಿ ಒಂದು ಭಾಗವು ವಾಯುತತ್ವವಾಗಿಯೂ, ಮತ್ತು ಎಂಟರಲ್ಲಿ ಒಂದು ಭಾಗವು ಆಕಾಶತತ್ವವಾಗಿಯೂ ಇವೆ. ಹೀಗೆಯೇ ತೇಜಸ್ಸೇ ಮೊದಲಾದ ಭೂತಗಳ ಅರ್ಧಾಂಶವು ಇತರ ಭೂತಗಳ ಅಷ್ಟಾಂಶವಾಗಿರುವದು.

§ ಇದರಿಂದ ಸೃಷ್ಟಿಯಲ್ಲಿ ಭೂತಗಳಿಗೆ ಪ್ರಾಧಾನ್ಯವು ಹೇಳಲ್ಪಟ್ಟಿತು. ¶ ಇಲ್ಲಿ ಬುದ್ಬುದಸಾಮ್ಯದಿಂದ ಅಂಡಕ್ಕೆ ಅಸ್ಥಿರತ್ವವು

ವೃದ್ಧಿಯನ್ನು ಹೊಂದಿ ಜಲದಲ್ಲಿ ತೇಲಿಕೊಂಡು, ಬ್ರಹ್ಮಸ್ವರೂಪಿಯಾಗಿದ್ದ ನಾರಾಯಣನಿಗೆ * ಪ್ರಾಕೃತವಾದ ಸ್ಥಾನವಾಗಿರುವದು. ಜಗತ್ಪತಿಯಾದ ವಿಷ್ಣುವು ಪೂರ್ವದಲ್ಲಿ ಹೇಳಿದ ಪ್ರಕಾರ ಅವ್ಯಕ್ತನಾಗಿದ್ದು, ಈ ಅಂಡದೊಳಗೆ ಬ್ರಹ್ಮರೂಪನಾಗಿ ವ್ಯಕ್ತನಾಗಿರುವನು. ಆ ಬ್ರಹ್ಮನಿಗೆ ಮೇರುಪರ್ವತವು ಗರ್ಭಾಶಯವಾಯಿತು; ಕುಲಾಚಲಗಳು ಜರಾಯುವಾದವು; ಸಮುದ್ರೋದಕವು ಗರ್ಭೋದಕವಾಯಿತು. ಪರ್ವತಗಳೂ, ದ್ವೀಪಗಳೂ, ಸಮುದ್ರಗಳೂ, ಜ್ಯೋತಿಶ್ಚಕ್ರವೂ, ದೇವಾಸುರ ಮನುಷ್ಯಾದಿಪದಾರ್ಥಗಳು- ಇವುಗಳುಳ್ಳ ಲೋಕಗಳೆಲ್ಲವೂ ಅಂಡದಲ್ಲಿ ಸೃಷ್ಟಗಳಾದವು. ಈ ಚತುರ್ದಶಭುವನಾತ್ಮಕವಾದ ಬ್ರಹ್ಮಾಂಡ ಕಟಾಹವನ್ನು ವಾರಿ ವಹ್ನಿ ಅನಿಲ ಆಕಾಶಗಳೆಂಬ ಭೂತಗಳು ಬಾಹ್ಯಪ್ರದೇಶದಲ್ಲಿ ಬಂದುಕೊಂಡು ಹತ್ತುಮಡಿ ಹೆಚ್ಚಾಗಿ ಆವರಿಸಿದವು. ಆ ಭೂತಗಳನ್ನು ಭೂತಾದಿಯು ಆವರಿಸಿಕೊಂಡಿತು. ಆ ಭೂತಾದಿಯು ಮಹತ್ತತ್ವದಿಂದ ಆವರಿಸಲ್ಪಟ್ಟಿತು. ಹಾಗೆಯೇ ಷಡಾವರ್ಣಗರ್ಭವಾದ ಮಹತ್ತತ್ವವು ದಶಗುಣವಾದ ಪ್ರಕೃತಿಯಿಂದ ಆವರಿಸಲ್ಪಟ್ಟಿತು. ಹೀಗೆ ಸಪ್ತಾವರಣಗಳಿಂದ ಆವರಿಸಲ್ಪಟ್ಟ ಬ್ರಹ್ಮಾಂಡವು ನಾರಿಕೇಳಫಲದೊಳಗಿರುವ ಬೀಜದಹಾಗೆ ಒಪ್ಪುತ್ತಿತ್ತು.

ಆ ಅಂಡದಲ್ಲಿ ಸರ್ವೇಶ್ವರನಾದ ಶ್ರೀಹರಿಯು ರಜೋಗುಣಯುಕ್ತನಾಗಿ ಬ್ರಹ್ಮರೂಪಿಯಾಗಿ ಆ ಜಗತ್ತಿನ ವಿವಿಧ ಚರಾಚರಾದಿಸೃಷ್ಟಿವ್ಯಾಪಾರದಲ್ಲಿ ಪ್ರವರ್ತಿಸುತ್ತಿರುವನು. ಎಲೈ ಮೈತ್ರೇಯ! ಷಡ್ಗುಣೈಶ್ವರ್ಯ ಪರಿಪೂರ್ಣನಾದ ಆ ಶ್ರೀಹರಿಯೇ ವಿಷ್ಣುರೂಪನಾಗಿ ಸತ್ವಗುಣವನ್ನು ಉದ್ಧರಿಸಿ, ವಿರೋಧಿ ನಿರಸನಶೀಲನಾಗಿ, ಸೃಷ್ಟವಾದ ಜಗತ್ತನ್ನು ಪ್ರತಿಯುಗಗಳಲ್ಲಿಯೂ ಬ್ರಹ್ಮದೇವನ ದಿವಸಾವಸಾನಪರ್ಯಂತರವೂ ರಕ್ಷಿಸುತ್ತಿರುವನು. ಮತ್ತು ಆತನೇ ಕಲ್ಪಾಂತದಲ್ಲಿ ರುದ್ರರೂಪಿಯಾಗಿ, ತಮೋಗುಣವನ್ನು ಧರಿಸಿ, ಅತಿಭಯಂಕರನಾಗಿ, ಸಕಲ ಭೂತಾತ್ಮಕವಾದ ಜಗತ್ತನ್ನು ಭಕ್ಷಿಸುವ

---

ಹೇಳಿತು. * ಇದರಿಂದ ಆ ಪರಮಾತ್ಮನಿಗೆ ಅಪ್ರಾಕೃತವಾದ ಬೇರೆ ಒಂದು ಸ್ಥಾನವಿರುವದೆಂದು ಸೂಚಿಸಲ್ಪಟ್ಟಿತು.

ನು. ಈ ಪರಮಾತ್ಮನೇ ಸರ್ವಭೂತಗಳನ್ನು ಭಕ್ಷಿಸಿದಮೇಲೆ, ಲೋಕವೆಲ್ಲವೂ ಏಕಾರ್ಣವವಾಗಲು, ಆ ಜಲದಲ್ಲಿ ಶೇಷಪರ್ಯಂಕಶಯನನಾಗಿ, ಪವಡಿಸಿ ಇದ್ದು, ಕಲ್ಪಾದಿಯಲ್ಲಿ ಎಚ್ಚತ್ತು, ಚತುರ್ಮುಖ ಬ್ರಹ್ಮರೂಪಿಯಾಗಿ, ಮತ್ತು ಸೃಷ್ಟಿಯನ್ನು ಮಾಡುತ್ತಲಿರುವನು. ಈ ಪ್ರಕಾರದಲ್ಲಿ ಚಿದಚಿಚ್ಛರೀರಕನಾಗಿ, ಜಗತ್ಕಾರಣಭೂತನಾದ ಆ ಜನಾರ್ದನನು ಸೃಷ್ಟಿಸ್ಥಿತಿ ಅಂತ್ಯಕಾಲಗಳಲ್ಲಿ ಬ್ರಹ್ಮವಿಷ್ಣುಶಿವಾತ್ಮಕನಾಗಿ, ತತ್ತನ್ನಾಮಗಳನ್ನು ಐದುತ್ತಲಿರುವನು. ಇನ್ನು ಅಘಟಿತಘಟನಾಸಮರ್ಥನಾದ ಆ ವಿಷ್ಣುವು, ತಾನೇ ಸೃಷ್ಟಿಕಾಲದಲ್ಲಿ ಚಿದಚಿದಾತ್ಮಕ ಪ್ರಪಂಚ ಶರೀರಕನಾಗಿ, ರಕ್ಷಿಸತಕ್ಕ ಜಗತ್ತನ್ನು ಆ ಕಾಲದಲ್ಲಿ ರಕ್ಷಿಸಿ, ಪ್ರಳಯ ಕಾಲದಲ್ಲಿ ಸಂಹಾರಶಕ್ತಿಯುಕ್ತನಾಗಿ ಸಂಹರಿಸುತ್ತಲಿರುವನು: ಆದಕಾರಣ ಆತನೇ ಜಗತ್ಕಾರಣಭೂತನೆಂಬುವದು ಸಿದ್ಧವು. ಪೃಥಿವಿಯೇ ಮೊದಲಾದ ಪಂಚಮಹಾಭೂತಗಳೂ, ಜ್ಞಾನೇಂದ್ರಿಯಗಳೂ, ಕರ್ಮೇಂದ್ರಿಯಗಳೂ, ಮನಸ್ಸೂ, ಸ್ಥಾವರ ಜಂಗಮಾತ್ಮಕವಾದ ಜೀವಕೋಟಿಯೂ, ಮತ್ತು ಪ್ರಕೃತಿ ಪ್ರಾಕೃತ ವಿಕಾರಗಳೂ, ಸರ್ವಸ್ವರೂಪನಾದ ಆ ಪರಮಾತ್ಮನೇ: ಸಮಸ್ತಪ್ರಪಂಚವು ಆತನಗೆ ಶರೀರವಾಗಿ, ತಾನು ಶರೀರಿಯಾಗಿರುವಕಾರಣದಿಂದ, ಬ್ರಹ್ಮಾದಿ ಚೇತನಾಚೇತನನಿಷ್ಠವಾದ ಸರ್ಗಾದಿ ವ್ಯಾಪಾರಗಳೆಲ್ಲವು ಲೀಲಾವತಾರರೂಪಿಯಾದ ಆತನಿಗೆ, ಶರೀರವ್ಯಾಪಾರವು ಶರೀರಿಗೆ ಹ್ಯಾಗೊ, ಹಾಗೆ ಉಪಕಾರಕರವು.

ಬ್ರಹ್ಮರುದ್ರಾದಿಗಳಿಗೆ ಶ್ರೇಷ್ಠನಾಗಿಯೂ ಅವರುಗಳಿಗೆ ಇಷ್ಟಪ್ರಾಪಕವಾಗಿಯೂ ಇರುವ ಆ ಶ್ರೀಮಹಾವಿಷ್ಣುವೇ ಬ್ರಹ್ಮಾದ್ಯವಸ್ಥೆಗಳಿಂದ ಅಶೇಷವನ್ನು ಮೂರ್ತಿಯಾಗಿ ಉಳ್ಳವನಾದಕಾರಣ, ಸೃಷ್ಟಿಕರ್ತನು ಆತನೆ: ಸೃಜ್ಯವಸ್ತುವು ಆತನೆ: ರಕ್ಷಕನೂ ಆತನೆ: ರಕ್ಷ್ಯವಸ್ತುವೂ ಆತನೆ: ಸಂಹಾರಕರ್ತನೂ ಆತನೆ: ಸಂಹಾರ್ಯವಸ್ತುವೂ ಆತನೆ.

ಎಂಬಲ್ಲಿಗೆ ವಿಷ್ಣುಪುರಾಣದಲ್ಲಿ ಪ್ರಥಮಾಂಶದ
ದ್ವಿತೀಯಾಧ್ಯಾಯವು ಮುಗಿಯಿತು.

## ಮೂರನೆ – ಅಧ್ಯಾಯ.

---

ಮೈತ್ರೇಯರು ಕೇಳುತ್ತಾರೆ.

“ಎಲೈ, ಪರಾಶರ ಮಹರ್ಷಿಯೆ! ಸತ್ವಾದಿಗುಣರಹಿತನಾಗಿಯೂ, ಅಪರಿಚ್ಛಿನ್ನಸ್ವರೂಪಸ್ವಭಾವನಾಗಿಯೂ, ಕರ್ಮವಶ್ಯನಾಗದೆಯೂ, ಕರ್ಮಸಂಬಂಧರಹಿತನಾಗಿಯೂ, ಇರುವಂಥ ಪರಬ್ರಹ್ಮನಿಗೆ ಹ್ಯಾಗೆ ಸೃಷ್ಟ್ಯಾದಿ ಕರ್ತೃತ್ವವು ಹೇಳಲ್ಪಡುತ್ತಲಿರುವದು?” ಎಂದು ಪ್ರಶ್ನೆಯನ್ನು ಮಾಡಿದ ಮೈತ್ರೇಯರಿಗೆ ಪರಾಶರರು ಇಂತೆಂದು ನುಡಿದರು.

“ತಪಸ್ವಿಗಳಲ್ಲಿ ಶ್ರೇಷ್ಠನಾದ ಮೈತ್ರೇಯನೇ! ಕೇಳು, ಲೋಕದಲ್ಲಿ ಸಕಲಪದಾರ್ಥಗಳಿಗೂ ತತ್ತತ್ಕಾರ್ಯೋತ್ಪಾದಕವಾದ ಶಕ್ತಿಯು ಹ್ಯಾಗೆ ಉಂಟೋ, ಹಾಗೆ ಪರಬ್ರಹ್ಮಕ್ಕೂ ಸರ್ಗ ಸ್ಥಿತಿ ಸಂಹಾರಾದಿಗಳಿಗೆ ಕಾರಣಭೂತವಾದ ಸಾಮರ್ಥ್ಯರೂಪ ಗುಣಗಳು, ಸ್ವಸಾಧಕಪ್ರಮಾಣದಿಂದ, ಉಂಟು. ಅದು ಹ್ಯಾಗಂದರೆ:– ಅಗ್ನಿಗೆ ಸ್ವಭಾವಸಿದ್ಧವಾದ ಔಷ್ಣ್ಯಗುಣವು ಹ್ಯಾಗೊ, ಹಾಗೆ ಪರಬ್ರಹ್ಮಕ್ಕೂ ಆ ಗುಣಗಳುಂಟೆಂದು ತಿಳಿ. ಮಹಾವಿಷ್ಣುವಿನ ಸೃಷ್ಟ್ಯಾದಿವ್ಯಾಪಾರಗಳನ್ನು ಪ್ರತಿಪಾದಿಸುತ್ತೇವೆ; ಅದನ್ನು ತಿಳಿದುಕೊಳ್ಳುವನಾಗು. ಆ ವಿಷ್ಣುವು ಚತುರ್ಮುಖ ಶರೀರಕನಾಗಿ ಜನಿಸಿದನು. ಉತ್ಪತ್ತಿ ಹೇಳುವಲ್ಲಿ, ಆತನ ಉತ್ಪತ್ತಿಯು ಔಪಚಾರಿಕವು; ಆತನು ನಿತ್ಯನೇ. ಆತನ ಕಾಲಪರಿಮಾಣದಿಂದಲೆ, ಆತನಿಗೆ ಆಯುಸ್ಸು ನೂರು ವರುಷವೆಂದು ಹೇಳಲ್ಪಟ್ಟಿತು. ಅದು ಸಕಲವಾದ ಆಯುಸ್ಸುಗಳಲ್ಲಿಯೂ ಶ್ರೇಷ್ಠವಾದದ್ದು. ಅದರಲ್ಲಿ ಅರ್ಧವು ಪರಾರ್ಧವೆನಿಸಿಕೊಳ್ಳುವದು. ಕಾಲಸ್ವರೂಪವು ಚಿದಚಿದ್ವಸ್ತುಗಳಿಗೆ ಆಧಾರವಾಗಿಯೂ, ಉತ್ಪತ್ತಿ ವಿನಾಶರಹಿತವಾಗಿಯೂ, ಸರ್ವವ್ಯಾಪಕನಾದ ವಿಷ್ಣುವಿಗೆ ಶರೀರವಾಗಿಯೂ, ಇರುವದೆಂದು ಮೊದಲೇ ನಿನಗೆ ಉಪಪಾದಿಸಲಿಲ್ಲವೆ? ಆ ಕಾಲದಿಂದಲೆ ಬ್ರಹ್ಮನಿಗೆ ಆಯುಃಪರಿಮಿತೆವೆಂದು ತಿಳಿ. ಚರಾಚರಾತ್ಮಕವಾದ ಜಂತುಗಳಿಗೂ, ಭೂಮಿ ಪರ್ವತ ಸಾಗರಾದಿಗಳ

ಗೂ, ಸಮಸ್ತವಾದ ವಸ್ತುಗಳಿಗೂ ಕಾಲದಿಂದಲೇ ಪರಿಣಾಮವು ಉಂಟಾಯಿತು. ಆ ಕಾಲದ ಸ್ವರೂಪವು ಹ್ಯಾಗಂದರೆ? ಕೇಳು, ಮೈತ್ರೇಯ! ಹದಿನೈದು ನಿಮೇಷಗಳಿಗೆ ಕಾಷ್ಠೆ ಯಂದುಹೆಸರು. ಆ ಕಾಷ್ಠೆ ಮೂವತ್ತಾದರೆ, ಒಂದು ಕಲೆ. ಅಂಥಾ ಕಲೆಗಳು ಮೂವತ್ತಾದರೆ, ಒಂದು ಮುಹೂರ್ತ. ಆ ಮುಹೂರ್ತಗಳು ಮೂವತ್ತಾದರೆ, ಒಂದು ಅಹೋರಾತ್ರ ವೆನಿಸಿಕೊಳ್ಳುವದು. ಅಂಥಾ ಅಹೋರಾತ್ರಿಗಳು ಮೂವತ್ತಾದರೆ, ಪಕ್ಷದ್ವಯಾತ್ಮಕವಾದ ಒಂದುಮಾಸ. ಅಂಥಾ ಮಾಸ ಆರಕ್ಕೆ ಒಂದು ಅಯನ. ಅಂಥಾ ದಕ್ಷಿಣಾಯನ ಉತ್ತರಾಯಣವೆಂಬ ಎರಡು ಆದರೆ, ಒಂದು ವರುಷ. ದೇವತೆಗಳಿಗೆ ದಕ್ಷಿಣಾಯನವೇ ರಾತ್ರಿಯು, ಉತ್ತರಾಯಣವೇ ಹಗಲು. ಅಂಥಾ ದಿವ್ಯ ವರುಷಗಳಲ್ಲಿ ಹನ್ನೆರಡು ಸಾವಿರವರುಷಗಳಿಗೆ ಕೃತತ್ರೇತಾದಿ ಸಂಜ್ಞಕವಾದ ಚತುರ್ಯುಗವೆಂದು ಹೆಸರು. ಆ ಚತುರ್ಯುಗಗಳ ಪ್ರಕಾರವನ್ನು ಕೇಳು. ಕೃತಯುಗಕ್ಕೆ ದಿವ್ಯವರ್ಷಗಳಲ್ಲಿ ನಾಲ್ಕು ಸಾವಿರವೂ, ತ್ರೇತಾಯುಗಕ್ಕೆ ಮೂರು ಸಾವಿರವೂ, ದ್ವಾಪರ ಯುಗಕ್ಕೆ ಎರಡು ಸಾವಿರವೂ, ಮತ್ತು ಕಲಿಯುಗಕ್ಕೆ ಒಂದು ಸಾವಿರ ವರುಷವೂ ಪ್ರಮಾಣವೆಂದು ಪೂರ್ವಿಕರು ಹೇಳಿದರು. ಇದೂ ಅಲ್ಲದೆ, ಕೃತಯುಗದ ಪೂರ್ವ ಸಂಧ್ಯೆ ನಾನೂರುವರುಷ; ಉತ್ತರಸಂಧ್ಯೆ ನಾನೂರು ವರುಷ. ತ್ರೇತಾಯುಗಕ್ಕೆ ಪೂರ್ವ ಸಂಧ್ಯೆ, ಮುನ್ನೂರು ವರುಷ; ಅಪರ ಸಂಧ್ಯೆ ಮುನ್ನೂರು ವರುಷ. ದ್ವಾಪರ ಯುಗಕ್ಕೆ ಮೊದಲ ಸಂಧ್ಯೆ ಇನ್ನೂರು ವರುಷ; ಮುಂದಣ ಸಂಧ್ಯೆ ಇನ್ನೂರು ವರುಷ. ಕಲಿಯುಗಕ್ಕೆ ಪ್ರಾತಸ್ಸಂಧ್ಯೆ ನೂರುವರುಷ; ಸಾಯಂಸಂಧ್ಯೆ ನೂರುವರುಷ. ಈ ಸಂಧ್ಯಾಂಶ ಸಹಿತವಾದ ಚತುರ್ಯುಗವು ಸಾವಿರಭಾರಿ ತಿರಿಗಿ ಬಂದರೆ, ಬ್ರಹ್ಮದೇವನಿಗೆ ಒಂದು ಹಗಲು. ಆ ಬ್ರಹ್ಮದೇವನ ಒಂದು ಹಗಲಿನಲ್ಲಿ ಹದಿನಾಲ್ಕು ಮನುಗಳು ಆಗುವರು. ಆ ಮನುಗಳ ಕಾಲಕೃತವಾದ ಪರಿಣಾಮಸಂಖ್ಯೆಯನ್ನು ಕೇಳು, ಮೈತ್ರೇಯ! ಈ ಮನುಗಳಲ್ಲಿ ಸ್ವಾಯಂಭುವನೆಂಬ ಬಬ್ಬ ಮನುವೂ, ಸಪ್ತರ್ಷಿಗಳೂ, ದೇವೇಂದ್ರನೂ, ದೇವತೆಗಳೂ, ಆ ಮನುವಿನ ವಂಶಕ್ಕೆ ಸೇರಿದ ರಾಜರುಗಳೂ ಸಹ ಏಕಕಾಲದಲ್ಲಿ ಸೃಷ್ಟಿ

ಸಲ್ಪಟ್ಟು, ಸಂಹರಿಸಲ್ಪಡುತ್ತಲಿರುವರು. ಈಪ್ರಕಾರವಾದ ಬಂದೊಂದು ಮನ್ವಂತರದ ಪ್ರಮಾಣವೇನೆಂದರೆ: — ಎಪ್ಪತ್ತೊಂದು ಸಲ ಚತುರ್ಯುಗವೂ, ದಿವ್ಯವರ್ಷಗಳಲ್ಲಿ ಐದುಸಾವಿರದ ನೂರ ನಲವತ್ತೆರಡೂ ಹತ್ತುಮಾಸವು, ಎಂಟು ದಿವಸವೂ, ನಾಲ್ಕುಯಾಮವೂ, ಎರಡು ಮುಹೂರ್ತವೂ, ಎಂಟುಕಲೆಯೂ, ಎಂಟು ನಿಮೇಷವೂ, ಮತ್ತು ನಿಮೇಷದಲ್ಲಿ ಸಪ್ತಮಾಂಶವು. ಈ ಕಾಲವು ಆ ಮನುವಿಗೂ ದೇವಾದಿಗಳಿಗೂ ಸರಿ. ಅಂತು ವರ್ಷಸಂಖ್ಯೆಗಳೆಷ್ಟು? ಎಂದರೆ, ದೇವವರುಷದಲ್ಲಿ ಎಂಟುಲಕ್ಷದ ಐವತ್ತೇಳು ಸಾವಿರವೂ ಮತ್ತು ಸ್ವಲ್ಪಕಾಲವೂ ಅಧಿಕವಾಗಿ ಇರುವದು. ಈ ಮನ್ವಂತರದ ಕಾಲವು ಮಾನುಷವರುಷಪ್ರಮಾಣದಲ್ಲಿ, ಮೂವತ್ತು ಕೋಟಿವರುಷವೂ ಅರವತ್ತೇಳು ಲಕ್ಷದ ಇಪ್ಪತ್ತುಸಾವಿರವೂ ಚಿಲವಾನು ಉಳ್ಳದು. ಇಂಥಾ ಮನ್ವನ್ತರಕಾಲವು ಹದಿನಾಲ್ಕು ಮಡಿಯಾದರೆ, ಬ್ರಹ್ಮದೇವನಿಗೆ ಬಂದು ಹಗಲು. ಆ ಹಗಲಿನ ಅವಸಾನ ಸಮಯದಲ್ಲಿ ಬ್ರಹ್ಮದೇವನ ನಿದ್ರಾನಿಮಿತ್ತದಿಂದ, ಉಂಟಾಗುವ ಪ್ರಳಯವು ನೈಮಿತ್ತಿಕ ಪ್ರಳಯವೆನಿಸಿಕೊಳ್ಳುವದು. ಆ ಪ್ರಳಯಕಾಲದಲ್ಲಿ ಭೂ ಭುವ ಸ್ವರ್ಗವೆಂಬ ಮೂರು ಲೋಕವೂ ದಹಿಸಲ್ಪಡುವವು. ಆ ಉಷ್ಣದಿಂದ ತಪ್ತರಾಗಿ ಮಹರ್ಲೋಕ ನಿವಾಸಿಗಳು ಜನೋಲೋಕಕ್ಕೈದುವರು. ಬ್ರಹ್ಮದೇವನ ಇಂಥಾ ರಾತ್ರೀ ಪ್ರಳಯದಲ್ಲಿ ತ್ರೈಲೋಕ್ಯವೂ ಏಕಾರ್ಣವವಾಗಿ, ಜಲಮಯವಾಗಿ ಇರುವಲ್ಲಿ; ಶ್ರೀಮನ್ನಾರಾಯಣನೇ ಅಂತರ್ಯಾಮಿಯಾಗಿ ಉಳ್ಳ, ಪದ್ಮಸಂಭವನಾದ ಬ್ರಹ್ಮದೇವನು ಅನಂತಭೋಗ ಶಯನದಲ್ಲಿ, ತ್ರೈಲೋಕ್ಯಗ್ರಾಸದಿಂದ ಬೆಳದು ಜನಲೋಕದಲ್ಲಿರುವ ಯೋಗಿಗಳಿಗೂ ಚಿಂತನೀಯನಾಗಿ, ಪವಡಿಸುತ್ತಲಿರುವನು. ಬ್ರಹ್ಮದೇವನ ಆ ನಿದ್ರಾಕಾಲವಾದ ರಾತ್ರಿಯು ಪ್ರಮಾಣವು ಆತನ ಅಹಃಪ್ರಮಾಣಕ್ಕೆ ಸಮನಾಗಿರುವದು. ರಾತ್ರಿಯ ಅವಸಾನದಲ್ಲಿ ಆತನು ಎಚ್ಚತ್ತು, ತ್ರೈಲೋಕ್ಯವನ್ನು ಪುನಸ್ಸೃಷ್ಟಿಸುವನು. ಇಂಥಾ ದಿನ ಹದಿನೈದು, ಬಂದು ಪಕ್ಷ, ಅಂಥಾ ಎರಡು ಪಕ್ಷ ಬಂದು ಮಾಸ, ಅಂಥಾ ಮಾಸಹನ್ನೆರಡಕ್ಕೆ ಬಂದುವರುಷ, ಅಂಥಾ ವರುಷಗಳು ನೂರಾದರೆ, ಬ್ರಹ್ಮದೇವನ ಪರಮಾಯುಸ್ಸು. ಹೀಗೆ

ಪರಿಮಿತವಾದ ಬ್ರಹ್ಮದೇವನ ನೂರುವರುಷಗಳಲ್ಲಿ ಪರಾರ್ಧವೆಂಬ ಐವತ್ತು ವರುಷ ಕಳೆದು ಹೋಗಿ; ಉಪರಿ ಪದ್ಮಕಲ್ಪವೆಂಬ ಒಂದು ದಿನವೂ ಸಂದು; ಎರಡನೆಯ ದಿನವಾದ ವರಾಹ ಕಲ್ಪವೆಂಬ, ವರ್ತಮಾನವಾದ ದ್ವಿತೀಯ ಪರಾರ್ಧದ ದ್ವಿತೀಯ ದಿನವು, ನಡೆಯುತ್ತಲಿರುವದು. ಎಂದು ಪರಾಶರರು ಮೈತ್ರೇಯರಿಗೆ ನಿರೂಪಿಸಿದರು.

ಎಂಬ ಬಳಿಗೆ ಶ್ರೀವಿಷ್ಣುಪುರಾಣದಲ್ಲಿ ಪ್ರಥಮಾಂಶದ ತೃತೀಯಾಧ್ಯಾಯವು ಮುಗಿಯಿತು.

## ನಾಲ್ಕನೆ – ಅಧ್ಯಾಯ.

ಮೈತ್ರೇಯರು ಪ್ರಶ್ನೆಯನ್ನು ಮಾಡುತ್ತಾರೆ.

"ಎಲೈ, ಪರಾಶರರೆ; ನಾರಾಯಣನೆಂದು ಪ್ರಸಿದ್ಧನಾದ ಬ್ರಹ್ಮದೇವನು ಷಡ್ಗುಣೈಶ್ವರ್ಯ ಪರಿಪೂರ್ಣನಾಗಿ, ಕಲ್ಪಾದಿಯಲ್ಲಿ ಸಕಲ ಭೂತಗಳನ್ನು ಹ್ಯಾಗೆ ಸೃಷ್ಟಿಸಿದನು ? ಅದನ್ನು ನಿರೂಪಿಸಬೇಕೆನ್ನಲಾಗಿ; ಶ್ರೀಪರಾಶರ ಮಹರ್ಷಿಗಳು, ಹೇಳುತ್ತಾರೆ.

"ಕೇಳು ಮೈತ್ರೇಯನೆ! ಷಡ್ಗುಣೈಶ್ವರ್ಯ ಪರಿಪೂರ್ಣನಾಗಿ, ಆ ಬ್ರಹ್ಮನಿಗೂ ನಿಯಾಮಕನಾದ ನಾರಾಯಣನನ್ನು ಅಂತರ್ಯಾಮಿಯಾಗಿ ಉಳ್ಳ, ಬ್ರಹ್ಮದೇವನು, ಹ್ಯಾಗೆ ಸೃಷ್ಟಿಮಾಡಿದನೊ ಆ ಸೃಷ್ಟಿಪ್ರಕಾರವನ್ನು ಕೇಳು. ಹಿಂದೆ ಹೋದಪದ್ಮಕಲ್ಪದ ಅವಸಾನದಲ್ಲಿ ನಿದ್ರಾಸಕ್ತನಾಗಿದ್ದು, ಪ್ರಾತಃಕಾಲದಲ್ಲೆದ್ದಂಥಾವನಾಗಿ, ಸತ್ವಗುಣಪ್ರಧಾನನಾಗಿ ಶೂನ್ಯವಾದ ಲೋಕವನ್ನು ನೋಡಿದವನಾದನು. ನಾರಾಯಣಾತ್ಮಕನಾದ ಚತುರ್ಮುಖನು ಎಂಬಲ್ಲಿ ಈ ಬ್ರಹ್ಮನಿಗೆ ಮಾತ್ರವೆ ನಾರಾಯಣಾತ್ಮಕತ್ವವು ಅಲ್ಲ; ಸಕಲವಾದ ರುದ್ರೇಂದ್ರಾದಿಗಳಿಗೂ ಆತನೆ ಪ್ರಭುವು. ಆದಕಾರಣ ಬ್ರಹ್ಮರೂಪಿಯಾದ ನಾರಾಯಣನು ಆದಿರಹಿತನು ಮತ್ತು ಸಮಸ್ತವಾದ ಚರಾಚರಗಳಿಗೂ ಉತ್ಪತ್ತಿ ಸ್ಥಾನವು. ಈ ಬ್ರಹ್ಮನಿಗೆ ಪೂರ್ವದಲ್ಲಿಯೆ ಇದ್ದ ಪೃಥಿ

ಥ್ವ್ಯಾದಿ ತತ್ವಗಳಿಗೂ * ನಾರಾಯಣಾತ್ಮಕತ್ವವೆಂದು, ಈ ಯರ್ಥದಲ್ಲಿ ಮನ್ವಾದಿಮಹರ್ಷಿಗಳು ನಾರಾಯಣಪದನಿರ್ವಚನವಾಗಿ ಹೇಳಿರುವ ಶ್ಲೋಕವನ್ನು ಕೇಳುವನಾಗು. (ಆ ಶ್ಲೋಕಾರ್ಥವೇನೆಂದರೆ) "ಅಪ್ತತ್ವವು ನಾಶರಹಿತವಾಗಿರುವದರಿಂದ, ನರಶಬ್ದವಾಚ್ಯವಾದುದು; ತಾದೃಶ ಅಪ್ಪುಮೊದಲಾದ ಸಕಲಭೂತಗಳೂ ಅವನನ್ನಾಶ್ರಯಿಸಿರುವದರಿಂದ ಆ ವಿಷ್ಣುವಿಗೆ ನಾರಾಯಣನೆಂದು ಹೆಸರಾಯಿತು. ಇನ್ನು ನಿತ್ಯವಸ್ತುಗಳಿಗೂ ಅಯನನಾದ್ದರಿಂದ ನಾರಾಯಣನೆಂಬ ಹೆಸರು." ಪ್ರಳಯಜಲದಲ್ಲಿ ಲೀನವಾದ ಭೂಮಿಯನ್ನು, ತೇಲುತ್ತಿದ್ದ ಪುಷ್ಕರಪರ್ಣವನ್ನು ನೋಡಿ, ಅನುಮಾನಪ್ರಮಾಣದಿಂದ ತಿಳಿದು, ಆ ಭೂಮಿಯನ್ನು ಉದ್ಧರಿಸಬೇಕೆಂದು ಇಚ್ಛೆಯುಳ್ಳವನಾಗಿ, ಸರ್ವಾಂತರಾತ್ಮಕನಾಗಿದ್ದರೂ ಪೂರ್ವದಲ್ಲಿ ಮತ್ಸ್ಯಾದ್ಯವತಾರಗಳನ್ನು ಹ್ಯಾಗೆ ಅಂಗೀಕರಿಸಿದನೋ, ಆಪ್ರಕಾರದಲ್ಲಿ ಈ ಸಮಯದಲ್ಲಿ ನಾರಾಯಣನು ವರಾಹಾವತಾರವನ್ನು ಆಶ್ರಯಿಸಿದವನಾದನು. ವೇದಯಜ್ಞರೂಪನಾಗಿ ಸಕಲಜಗತ್ತಿನ ಸ್ಥಿತಿಯಲ್ಲಿ ಸ್ಥಿತಚಿತ್ತನಾಗಿ, ಸರ್ವಾಂತರಾತ್ಮಕನಾಗಿ, ಪರಮಾತ್ಮನಾದ, ವರಾಹಸ್ವಾಮಿಯು ಜನಲೋಕನಿವಾಸಿಗಳಾದ ಯೋಗಿಗಳಿಂದ ಸ್ತೋತ್ರಮಾಡಲ್ಪಡುವನಾಗಿ, ಪ್ರಳಯಜಲವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಪಾತಾಳತಳವನ್ನು ಪ್ರವೇಶಿಸಿದ ವರಾಹರೂಪಿಯಾದ ಪರಮಾತ್ಮನನ್ನು ನೋಡಿ ಭೂದೇವಿಯು ಭಕ್ತಿಯಿಂದ ನಮ್ರವಾದ ಶಿರಸ್ಸುಳ್ಳವಳಾಗಿ ಸ್ತೋತ್ರಮಾಡಿದವಳಾದಳು. ಅದೇನೆಂದರೆ:— ಪುಂಡರೀಕಾಕ್ಷನಾದ ಸ್ವಾಮಿಯೆ! ನಿನಗೆ ನಮಸ್ಕಾರವು. ಶಂಖಚಕ್ರಗದಾಧರನಾದ ಸ್ವಾಮಿಯೇ ಈ ಪ್ರಳಯಸ

---

* ಈ ಅಚೇತನವರ್ಗಗಳಿಗೆ ನಾರಾಯಣಾತ್ಮಕತ್ವ ನಿರೂಪಣದಿಂದ ಬ್ರಹ್ಮದೇವನಿಗೆ ನಾರಾಯಣಾಧಿಷ್ಠಿತತ್ವವು ಉಂಟೆಂಬುವದು ಸಿದ್ಧವು. ಮೇಲಿನ ವಾಕ್ಯಗಳಲ್ಲಿ ಬ್ರಹ್ಮದೇವನಿಗೂ ನಾರಾಯಣನಿಗೂ ಸ್ವರೂಪಭೇದವಿಲ್ಲವೆಂಬ ಶಂಕೆಯುಂಟಾಗುವದು. ಅದರ ಪರಿಹಾರಕ್ಕಾಗಿ ನಾರಾಯಣಶಬ್ದನಿರ್ವಚನವು ಮಾಡಲ್ಪಟ್ಟಿತು. ಇದರಿಂದ ಬ್ರಹ್ಮದೇವನಿಗೂ ಪರಬ್ರಹ್ಮಕ್ಕೂ ಕಾರ್ಯಕಾರಣಭಾವದಿಂದ ಭೇದವುಂಟೆಂದು ತೋರಿಸಲ್ಪಟ್ಟಿತು.

ಮುದ್ರದ ದೆಶೆಯಿಂದ ನನ್ನನ್ನು ಉದ್ಧರಿಸು. ಪೂರ್ವದಲ್ಲಿಯೂ ನಿನ್ನಿಂ
ದಲೆ ಉತ್ಪನ್ನಳಾದವಳು; ನಿನ್ನಿಂದಲೇ ಪ್ರಳಯಜಲದಿಂದ ಉದ್ಧರಿಸ
ಲ್ಪಟ್ಟವಳು; ನಿನ್ನನ್ನೇ ಉಪಾದಾನಕಾರಣವಾಗುಳ್ಳವಳು. ಈ ಪ್ರ
ಕಾರದಲ್ಲಿ ಆಕಾಶಾದಿ ಸಮಸ್ತಭೂತಗಳೂ ನಿನ್ನನ್ನೇ ಕಾರಣವಾಗಿ ಉ
ಳ್ಳವು. ಪರಮಾತ್ಮನಾಗಿ ಮತ್ತು ಅಂತರಾತ್ಮಕನಾಗಿ ಇರುವ ಸ್ವಾಮೀ
ನಿನಗೆ ನಮಸ್ಕಾರವು. ಜೀವಕೋಟಿಗಳಿಗೆ ಅಂತರಾತ್ಮನೇ! ನಿನಗೆ
ನಮಸ್ಕಾರವು. ಸಕಲಜಗತ್ಕಾರಣಭೂತನಾದ ಪ್ರಕೃತಿಸ್ವರೂಪನೇ !
ನಿನಗೆ ನಮಸ್ಕಾರವು. ತತ್ಕಾರ್ಯಭೂತಪ್ರಪಂಚಸ್ವರೂಪಿಯಾಗಿ ಕಾಲ
ರೂಪಿಯಾದವನೇ! ನಿನಗೆ ನಮಸ್ಕಾರ. ಸ್ವಾಮೀ, ನೀನೇ ಸಕಲಜಗ
ತ್ತಿಗೂ ಕರ್ತನು, ನೀನೇ ಸಕಲಭೂತಗಳಿಗೂ ರಕ್ಷಕನು, ನೀನೇ ಪ್ರ
ಳಯಕಾಲದಲ್ಲಿ ಸಂಹಾರಕನು. ಸಕಲಜಗತ್ಸ್ವಾಮಿಯೆ! ಕೇಳು, ಸೃ
ಷ್ಟಿಸ್ಥಿತಿಸಂಹಾರಗಳಲ್ಲಿ ಬ್ರಹ್ಮ ವಿಷ್ಣು ರುದ್ರರೂಪಗಳಾದ ಮೂರ್ತಿ
ತ್ರಯವನ್ನು ಧರಿಸಿದವನು ನೀನೇ. ಸ್ವಾಮೀ, ಪ್ರಳಯದಲ್ಲಿ ಸಕಲಪ್ರ
ಪಂಚವನ್ನು ಸಂಹರಿಸಿ ಕುಕ್ಷಿಯಲ್ಲಿ ಇರಿಸಿಕೊಂಡು, ಏಕಾರ್ಣ್ಣವವಾ
ದ ಪ್ರಳಯ ಜಲದಲ್ಲಿ, ಸಕಲ ವೇದ ವೇದ್ಯನಾಗಿ ಮಹರ್ಷಿಗಳಿಂದ
ಧ್ಯಾನಿಸಲ್ಪಟ್ಟವನಾಗಿ, ಪವಡಿಸುತಲಿದ್ದೆ. ನಿನ್ನ ಯಾವದೊಂದು ಪ
ರವಾಸುದೇವ ಮೂರ್ತಿಯುಂಟೋ ಅದನ್ನು ಒಬ್ಬನೂ ಅರಿಯನು;
ಆದ್ದರಿಂದ ನಿನ್ನ ಅವತಾರಮೂರ್ತಿಗಳನ್ನು ಸಮಸ್ತದೇವತೆಗಳೂ
ಪೂಜಿಸುತ್ತಲಿರುವರು. ಕೇಳು, ಸ್ವಾಮಿ! ಪರಬ್ರಹ್ಮಸ್ವರೂಪವಾ
ದುದರಿಂದ ನಿನ್ನ ಮೂರ್ತಿಯನ್ನು ಆರಾಧಿಸಿ, ಮೋಕ್ಷದಲ್ಲಿ ಇಚ್ಛೆ
ಯುಳ್ಳವರು ಮುಕ್ತಿಯನ್ನೈದಿದರು. ಪರವಾಸುದೇವನನ್ನು ಆರಾಧಿ
ಸದೆ, ಯಾವನು ತಾನೆ ಮೋಕ್ಷವನ್ನು ಪಡೆಯುವನು? ಸ್ವಾಮೀ! ಮ
ನಸ್ಸಿನಿಂದ ಗ್ರಹಿಸಲ್ಪಡುವ ಸುಖಾದಿಗಳು ಯಾವದುಂಟೋ, ಚ
ಕ್ಷುರಾದಿಗಳಿಂದ ಗ್ರಹಿಸಲ್ಪಡುವ ರೂಪಾದಿಗಳು ಯಾವದುಂಟೊ,
ಬುದ್ಧಿ ಸ್ವರೂಪಗಳಾದ ಅನುಮಾನಾದಿ ಪ್ರಮಾಣಾದಿಗಳಿಂದ ಗ್ರಹಿ
ಸಲ್ಪಡುವದು ಯಾವದುಂಟೋ, ಆ ಸಮಸ್ತವು ನಿನಗೆ ಶರೀರವಾಗಿ
ರುವವು. ಸ್ವಾಮೀ ನಾನು ನಿನ್ನನ್ನೆ ಕಾರಣವಾಗಿ ಉಳ್ಳವಳು; ನಿನ್ನಿಂ
ದ ಸೃಜಿಸಲ್ಪಟ್ಟವಳು; ನಿನ್ನನೆ ಅನುವರ್ತಿಸಿ ಕೊಂಡಿರ್ರುವಳು. ಆದ್ದ
ರಿಂದ ಲೋಕವು ನನ್ನನ್ನು ಮಾಧವಿ ಯಂದು ನುಡಿಯುತ್ತಲಿರುವದು.

ಸರ್ವವಿಷಯವಾದ ಜ್ಞಾನವುಳ್ಳವನೆ! ಕಾರ್ಯಭೂತವಾದ ಜಗತ್ತೇ ಮೂರ್ತಿಯಾಗುಳ್ಳವನೆ! ಜಗದ್ವಿಕಾರರಹಿತನಾದವನೆ! ಸರ್ವೋತ್ಕೃಷ್ಟನಾಗಿ ಇರು. ದೇಶಕಾಲ ವಸ್ತುಗಳಿಂದ ಅಪರಿಚ್ಛೇದ್ಯನಾದವನೆ! ಸರ್ವೋತ್ಕೃಷ್ಟನಾಗಿ ವರ್ತಿಸು. ಪ್ರಕೃತಿ ಸ್ವರೂಪನಾದವನೆ! ಮಹದಾದಿ ವ್ಯಕ್ತಸ್ವರೂಪನೆ! ಉತ್ಕೃಷ್ಟ ಸ್ವರೂಪನೆ! ಸಮಸ್ತ ಪ್ರಪಂಚ ಸ್ವರೂಪನೆ! ಸರ್ವೋತ್ಕೃಷ್ಟನಾಗಿವರ್ತಿಸು. * ಸಕಲ ಯಜ್ಞಕರ್ಮಾರಾಧ್ಯನೆ! ಹೇಯಪ್ರತ್ಯನೀಕನಾದವನೆ! ಕೇಳು ನೀನೇ ಯಜ್ಞಸ್ವರೂಪನು; ನೀನೇ ಯಜ್ಞಸಾಧನವಾದ ಮಂತ್ರಸ್ವರೂಪನು; ಓಂಕಾರಸ್ವರೂಪನು ನೀನೇ; ಆಹವನೀಯ ಗಾರ್ಹಪತ್ಯ ದಕ್ಷಿಣಾಗ್ನಿತ್ರಯಸ್ವರೂಪನು ನೀನೇ; ಸಕಲವೇದಸ್ವರೂಪನು ನೀನೇ; ವೇದಾಂಗಗಳಾದ ಶಿಕ್ಷಾದಿಗಳ ಸ್ವರೂಪನು ನೀನೇ; ಯಜ್ಞಾಧಿಷ್ಠಾನದೇವತೆಯು ನೀನೇ. ಸ್ವಾಮೀ! ಕಾಲಚಕ್ರಪ್ರವರ್ತಕರಾದ ಸೂರ್ಯಾದಿ ಗ್ರಹಗಳು ನೀನೇ. ದೃಶ್ಯಾದೃಶ್ಯ ಮೂರ್ತಾಮೂರ್ತ ಪದಾರ್ಥಗಳೂ ನೀನೇ. ಇಲ್ಲಿ ಹೇಳಲ್ಪಟ್ಟದ್ದು, ಮತ್ತು ಹೇಳಲ್ಪಡದೆ ಇರುವದು ಯಾವದುಂಟೋ ಆ ಸಮಸ್ತವೂ ಸರ್ವನಿಯಾಮಕನಾದ ನೀನೇ. ಆದ್ದರಿಂದ ನಿನಗೆ ಅನಂತ ಪ್ರಣಾಮವನ್ನು ಗೈಯುತ್ತಲಿರುವೆನು ಸ್ವಾಮೀ! ಎಂದು ಭೂದೇವಿಯಿಂದ ಸ್ತುತಿಸಲ್ಪಟ್ಟ, ಭೂಧಾರಕನಾದ ಸರ್ವೇಶ್ವರನು ಸಾಮಸ್ವರಕ್ಕೆ ಸದೃಶವಾದ ಧ್ವನಿಯಿಂದ ಘರ್ಜಿಸಿದನು. ಅನಂತರ ಸ್ತೋತ್ರವನ್ನು ಕೇಳೋಣದರಿಂದ ಉಂಟಾದ ಹರ್ಷದಿಂದ ಕಮಲದಂತೆ ವಿಕಸಿತವಾದ ನೇತ್ರವುಳ್ಳವರಾದ, ಕನ್ನೈದಿಲೆಯ ಹಾಗೆ ನುಣುಪಾದ ಶ್ಯಾಮಲವರ್ಣವುಳ್ಳ, ವರಾಹಸ್ವಾಮಿಯವರು ಭೂದೇವಿಯನ್ನು ತಮ್ಮ ಕೋರೆಯ ತುದಿಯಮೇಲೆ

---

* ಇದರಿಂದ ಸರ್ವೇಶ್ವರನು ಸಕಲವೇದಪ್ರತಿಪಾದ್ಯನಾಗಿಯೂ, ಸಕಲಧರ್ಮಸ್ವರೂಪನಾಗಿಯೂ, ಸಕಲಕರ್ಮಾರಾಧ್ಯನಾಗಿಯೂ, ಸಕಲಪ್ರಪಂಚಸ್ವರೂಪನಾಗಿಯೂ, ಮೋಕ್ಷಪ್ರದನಾಗಿಯೂ, ಮುಕ್ತಪ್ರಾಪ್ಯನಾಗಿಯೂ, ಸರ್ವೋಪಾಸ್ಯನಾಗಿಯೂ, ಸೃಷ್ಟ್ಯಾದಿಕರ್ತೃವಾಗಿಯೂ, ಪರ ವ್ಯೂಹ ವಿಭವಾದಿ ವಿಗ್ರಹವಿಶಿಷ್ಟನೆಂಬುವದೀಗ ತಾತ್ಪರ್ಯವು.

ತಾಗಿ ಉದ್ಧರಿಸಿಕೊಂಡು, ದೊಡ್ಡದಾದ ನೀಲಾಚಲದಂತೆ ಪಾತಾಳದಿಂದ ಎದ್ದಂಥಾವರಾದರು. ಆ ವರಾಹಸ್ವಾಮಿಯ ನಿಟ್ಟುಸುರು ಪಾತಾಳದಲ್ಲಿ ಶಬ್ದ ಪರಂಪರೆಯನ್ನು ಉಂಟು ಮಾಡಿದ್ದಲ್ಲದೆ ರಸಾತಳವನ್ನೂ ಪ್ರವೇಶಿಸಿತು. ಆ ಸ್ವಾಮಿಯ ಉಚ್ಛ್ವಾಸದಿಂದಲೂ, ಖುರಪುಟದಶಬ್ದದಿಂದಲೂ, ಆರ್ತರಾದ ಆ ಲೋಕವಾಸಿಗಳಾದ ಸಿದ್ಧರು ಜನಲೋಕವನ್ನೈದಿದರು. ಭೂದೇವಿಯನ್ನು ಎತ್ತಿಕೊಂಡು, ವೇದಮಯವಾದ ತನ್ನ ಶರೀರವನ್ನು ಕೊಡಹುತ್ತಾ, ಮೇಲಕ್ಕೆ ಎದ್ದುಬರುತ್ತಿರುವ ಜಲಾರ್ದ್ರಕುಕ್ಷಿಯಾದ ಕೃಪಾದೃಷ್ಟಿಯುಳ್ಳ ವರಾಹ ಸ್ವಾಮಿಯನ್ನು, ಆ ವರಾಹಸ್ವಾಮಿಯ ಮುಖಾನಿಲೋದ್ಗತವಾದ ಉದಕದ ಸಂಸ್ಪರ್ಶದಿಂದ ಪವಿತ್ರರಾಗಿ ಮಾಡಲ್ಪಟ್ಟ, ಮತ್ತು ಜನಲೋಕ ಪರ್ಯಂತ ವ್ಯಾಪಿಸುತ್ತಿದ್ದ ಆ ಸ್ವಾಮಿಯ ರೋಮಾಂತರಾಳ ಸ್ಥಿತರಾದ ಜನಲೋಕ ವಾಸಿಗಳಾದ ಸನಂದನಾದಿಯೋಗೀಶ್ವರರು, ಸಂತೋಷಭರಿತವಾದ ಮನಸ್ಸುಳ್ಳವರಾಗಿಯೂ, ಭಕ್ತಿಯಿಂದ ನಮ್ರಶಿರಸ್ಕರಾಗಿಯೂ, ಸ್ತೋತ್ರವನ್ನು ಮಾಡಿದರು. ಅದೇನೆಂದರೆ:— ಲೋಕಕ್ಕೆ ಸ್ವಾಮಿಗಳಾದ ಬ್ರಹ್ಮೇಶಾನರುಗಳಿಗೆ ನಿಯಾಮಕನಾಗಿ, ಶಂಖಚಕ್ರಗದಾಶಾರ್ಙ್ಗಧರನಾಗಿ, ಸರ್ವಸ್ವಾಮಿಯಾದ ನೀನೇ ಸರ್ಗಸ್ಥಿತಿ ಸಂಹಾರಕರ್ತನು; ಬೇರೊಬ್ಬರಿಲ್ಲ. ಪರಮ ಪ್ರಾಪ್ಯನು ನೀನೇ. ಎಲೈ, ವರಾಹರೂಪಿಯಾದ ಸ್ವಾಮಿಯೇ! ಋಗಾದಿ ನಾಲ್ಕು ವೇದಗಳು ನಿನಗೆ ಪಾದಗಳು, ಯೂಪಸ್ತಂಭಗಳೇ ನಿನಗೆ ದಂಷ್ಟ್ರಗಳು, ಅಗ್ನಿಷ್ಟೋಮಾದಿಯಜ್ಞಗಳೇ ದಂತಗಳು, ಚಯನವೇ ಮುಖ, ಅಗ್ನಿಯೇ ನಾಲಿಗೆ, ಯಜ್ಞಸಾಧನಗಳಾದ ದರ್ಭೆಗಳೇ ರೋಮಗಳು, ಯಜ್ಞಾರಾಧ್ಯನಾದ ಪುರುಷೋತ್ತಮನೇ ನೀನು, ದಿವಾರಾತ್ರಿ ಕರ್ತೃಗಳಾದ ಚಂದ್ರಸೂರ್ಯರು ನಿನಗೆ ನೇತ್ರಗಳು, ಸರ್ವಾಶ್ರಯನಾಗಿ ಪೂಜ್ಯನಾಗಿ ಇರುವ ಬ್ರಹ್ಮನೇ ಶಿರಸ್ಸು, ವಿಷ್ಣುಸೂಕ್ತ ಶ್ರೀಸೂಕ್ತ ಭೂಸೂಕ್ತಾದಿಗಳು ನಿನ್ನ ಹೆಕ್ಕತ್ತಿನ ರೋಮಗಳು, ಸಮಸ್ತವಾದ ಹವಿಸ್ಸು ನಿನಗೆ ನಾಸಿಕವು, ಸ್ರುಕ್ಕು ಮುಸುಡಿ, ಸಾಮಸ್ವರವು ನಿನ್ನ ಗಂಭೀರವಾದ ಧ್ವನಿಯು, *ಪ್ರಾಗ್ವಂಶವು ನಿನ್ನ ಶರೀರವು, ಸಕಲ

* ಪ್ರಾಗ್ವಂಶ – ಯಜ್ಞಶಾಲೆಯ ಪೂರ್ವಭಾಗವು.

ಸತ್ರ ಯಾಗಗಳು ಅವಯವ ಸಂಧಿಬಂಧಗಳು, § ಇಷ್ಟಪೂರ್ತಕರ್ಮಗಳು ಕಿವಿಗಳು, ಪುರಾಣ ಪುರುಷನಾದಸ್ವಾಮಿಯೇ! ಭೂಮಿಯನ್ನು ಪಾದ ವಿಕ್ಷೇಪದಿಂದ ಆಕ್ರಮಿಸಿದವನೂ, ದೇಶಕಾಲವಸ್ತು ಪರಿಚ್ಛೇದರಹಿತನೂ, ನಾಶರಹಿತನೂ, ಸರ್ವಶರೀರಕನೂ, ಪ್ರಪಂಚಕ್ಕೆ ಮುಖ್ಯಕರ್ತನೂ ನೀನೇ ಎಂದೂ; ಇದು ಅಲ್ಲದೆ ಪರಬ್ರಹ್ಮವೇ ನೀನು, ಚರಾಚರಕ್ಕೆ ಕರ್ತೃವ್ಯಾಪಕನು ನೀನೇ ಎಂದೂ ತಿಳಿಯುತ್ತಲಿದ್ದೇವೆ ಸ್ವಾಮೀ! ಪ್ರಸನ್ನನಾಗು. ಸ್ವಾಮೀ! ನಿನ್ನ ದಂಷ್ಟ್ರಾಗ್ರದಲ್ಲಿ ಇರಿಸಲ್ಪಟ್ಟ ಭೂಮಂಡಲವು, ಪದ್ಮಸರಸ್ಸನ್ನು ಕ್ರೀಡಾರ್ಥವಾಗಿ ಪ್ರವೇಶಿಸಿದ ಗಜೇಂದ್ರನ ದಂಷ್ಟ್ರಾಗ್ರದಲ್ಲಿ ಸಂಬಂಧಿಸಿಕೊಂಡ ಪಂಕಸಹಿತವಾದ ಪದ್ಮಪತ್ರದಹಾಗೆ, ಪ್ರಕಾಶಿಸುತ್ತಿರುವದು. ಮಹಾಮಹಿಮೆಯುಳ್ಳ ಸ್ವಾಮಿಯೇ! ನಿನ್ನ ಶರೀರದಿಂದ ಭೂಲೋಕ ಸ್ವರ್ಲೋಕಗಳ ಅಂತರಾಳರೂಪವಾದ ಅಂತರಿಕ್ಷವು ವ್ಯಾಪಿಸಲ್ಪಟ್ಟಿತು. ಸಕಲಜಗತ್ತನ್ನೂ ವ್ಯಾಪಿಸುವ ಕಾಂತಿಯುಳ್ಳ ನೀನು ಜಗತ್ತಿಗೆ ಹಿತವನ್ನುಂಟುಮಾಡುವವನಾಗಿ ಆಗು. ಜಗತ್ಪತಿಯಾದ ಸ್ವಾಮೀ! ನೀನೊಬ್ಬನೇ ಸತ್ಯಸ್ವರೂಪಸ್ವಭಾವವುಳ್ಳವನು. ಯಾವದೊಂದು ಜಗದ್ವ್ಯಾಪನ ಶಕ್ತಿಯಿಂದ ಚರಾಚರಾತ್ಮಕವಾದ ಜಗತ್ತು ವ್ಯಾಪ್ತವಾಯಿತೊ, ಅದು ನಿನ್ನ ಮಹಿಮೆಯು. ಏತಾದೃಶ ಮಹಿಮೆಯುಳ್ಳ ಪುರುಷನು ಬೇರೊಬ್ಬನಿಲ್ಲ. ಜ್ಞಾನಾತ್ಮಕನಾದ ನಿನ್ನಿಂದ ವ್ಯಾಪ್ತವಾಗಿರುವ ನಿನಗೆ ಶರೀರ ಭೂತವಾದ ಈ ಜಗತ್ತನ್ನು ಯೋಗರಹಿತರು ಭ್ರಾಂತಿಜ್ಞಾನದಿಂದ ದೇವ ಮನುಷ್ಯಾದಿ ರೂಪವೆಂದು ತಿಳಿಯುತ್ತಾರೆಯೇ ಹೊರತು ತ್ವದಾತ್ಮಕವೆಂದು ತಿಳಿಯುವದಿಲ್ಲವು. * ಜ್ಞಾನಸ್ವರೂಪವಾದ ಸಕಲ ಜಗತ್ತನ್ನೂ ಅರ್ಥಸ್ವರೂಪವೆಂದು ತಿಳಿಯುತ್ತಾ ಅಜ್ಞಾನಿಗಳು ಮೋಹಸಮುದ್ರದಲ್ಲಿ ತಿರುಗುತ್ತಲಿದ್ದಾರೆ. ಸದಸದ್ವಿವೇಚನ ಚತುರತೆಯಿಂದ ಪರಿಶುದ್ಧವಾದ ಮನಸ್ಸುಳ್ಳವರು ಜ್ಞಾನಸ್ವರೂಪವಾದ ಸಕಲಜಗತ್ತನ್ನೂ ನಿನ್ನ

---

§ ಇಷ್ಟಕರ್ಮ– ಕ್ರತುಕರ್ಮ, ಯಜ್ಞ ಯಾಗಾದಿ ಶ್ರೌತಕರ್ಮಗಳು. ಪೂರ್ತಕರ್ಮ– ಖಾತಾದಿಕರ್ಮ, ಕೆರೆ ಕೊಳ ಮುಂತಾದ್ದನ್ನು ಕಟ್ಟಿಸುವ ಧರ್ಮಕೆಲಸಗಳು. * ಜೀವಾತ್ಮರ ಸಮೂಹವು.

ಶರೀರವನ್ನಾಗಿ ತಿಳಿಯುತ್ತಾರೆ. ಸರ್ವಾತ್ಮಕನಾಗಿ ಸರ್ವಶರೀರಕನಾದ ಸ್ವಾಮಿಯೇ! ಈಜಗತ್ತಿನ ಸದ್ಭಾವಕ್ಕೋಸ್ಕರ ಪ್ರಸನ್ನನಾಗು. ಅನುತ್ತಮಹಿಮೆಯುಳ್ಳ ಸ್ವಾಮಿಯೇ! ಭೂಮಿಯನ್ನುದ್ಧರಿಸು, ನಮಗೆ ಸುಖವನ್ನು ಕೊಡು. ಷಡ್ಗುಣೈಶ್ವರ್ಯ ಪರಿಪೂರ್ಣನಾದವನೇ, ಜಗದುಪಕಾರನೇ, ಕಮಲನಯನನೇ! ಜಗತ್ಸೃಷ್ಟಿವ್ಯಾಪಾರವು ಸಕಲಜಗತ್ತಿಗೂ ಉಪಕಾರಕವಾಗಿರುವದರಿಂದ, ಭೂಮಿಯನ್ನು ಉದ್ಧರಿಸು; ನಮಗೆ ಸುಖವನ್ನು ಕೊಡು; ನಿನಗೆ ನಮಸ್ಕಾರವಾಡುವೆವು. ಎಂದು ಈ ಪ್ರಕಾರ ಸಿದ್ಧರಿಂದ ಸ್ತುತಿಸಲ್ಪಟ್ಟ ವರಾಹ ರೂಪಿಯಾದ ಪರಮಾತ್ಮನು ಈ ಸಮಸ್ತವಾದ ಭೂಮಂಡಲವನ್ನು ಉದ್ಧರಿಸಿ, ಪ್ರಳಯಾರ್ಣವ ಜಲದ ಮೇಲೆ ಶೀಘ್ರವಾಗಿ ಇರಿಸಲಾಗಿ; ಆ ಭೂಮಿಯು ಆತನ ಸಂಕಲ್ಪದಿಂದ ದೊಡ್ಡದಾದ ಓಡೆಯಹಾಗೆ, ತೇಲುತ್ತಾ ಇತ್ತು. ಭೂಮಿಯ ವಿಸ್ತಾರವು ಬಹಳ ದೊಡ್ಡದಾದ್ದರಿಂದ ಅದು ಮುಳಗಲಿಲ್ಲವು. ಅನಂತರದಲ್ಲಿ ಆ ಅನಾದಿಯಾದ ಪರಮೇಶ್ವರನು ಆ ಭೂಮಿಯನ್ನು ಸಮವಾಗಿ ಮಾಡಿ, ಮೇರು ಮೊದಲಾದ ಪರ್ವತಗಳನ್ನು ಆಯಾಯ ಸ್ಥಳಗಳಲ್ಲಿ ಇರಿಸಿದನು; ಮತ್ತು ಆ ಭೂಮಿಯ ಮೇಲೆ ಯುಗಾಂತರದಲ್ಲಿ ದಗ್ಧವಾದ ಸಕಲ ಪರ್ವತಗಳನ್ನೂ, ಜಂಬೂ ಮೊದಲಾದ ದ್ವೀಪಗಳನ್ನೂ, ಭಾರತವುಂತಾದ ವರ್ಷಗಳನ್ನೂ, ಭೂರ್ಭುವಸ್ಸುವರ್ಮಹಲ್ಲೋಕಗಳನ್ನೂ, ತನ್ನ ಅಮೋಘವಾದ ಸಂಕಲ್ಪದಿಂದಲೆ ಯಥಾಪ್ರಕಾರ ಸೃಜಿಸಿದವನಾದನು.

ಕೇಳು, ಮೈತ್ರೇಯಾ ಬ್ರಹ್ಮರೂಪಧರನಾದ ವಿಷ್ಣುವು ರಜೋಗುಣದಿಂದ ಆವೃತನಾಗಿ, ಸೃಷ್ಟಿಯಂ ಮಾಡಿದವನಾದನು. ಸೃಜ್ಯವಸ್ತುಗಳ ಸೃಷ್ಟಿಕಾರ್ಯದಲ್ಲಿ ಬ್ರಹ್ಮದೇವನು ನಿಮಿತ್ತಮಾತ್ರವು. ಸೃಜ್ಯ ವಸ್ತುಗಳಿಗೆ ಅನಾದಿಕರ್ಮವಾಸನೆಗಳೇ ಪ್ರಧಾನ ಕಾರಣವು. ದೇವಾದಿ ಪದಾರ್ಥಗಳು ತಮ್ಮ ಕರ್ಮಬಲದಿಂದಲೆ ದೇವಾಸುರಾದಿ ಪದಾರ್ಥತ್ವವನ್ನು ಹೊಂದುವದರಿಂದ, ಬ್ರಹ್ಮನಿಗೆ ನಿಮಿತ್ತಕಾರಣತ್ವವನ್ನು ಬಿಟ್ಟು ಮತ್ತೊಂದು ಕಾರಣವು ಸಲ್ಲುವದಿಲ್ಲವು."

ಎಂದು ಪರಾಶರರು ಮೈತ್ರೇಯರಿಗೆ ನಿರೂಪಿಸಿದರು.

ಎಂಬ ಬಳಿಗೆ ವಿಷ್ಣುಪುರಾಣದ ಪ್ರಥಮಾಂಶದ

ಚತುರ್ಥೋಽಧ್ಯಾಯವು ಮುಗಿಯಿತು.

## ಐದನೇ-ಅಧ್ಯಾಯ

### ಮೈತ್ರೇಯರು ವಿಶೇಷಸರ್ಗ ಪ್ರಶ್ನೆಯನ್ನು ಮಾಡುತ್ತಾರೆ.

" ಎಲೈ, ಪರಾಶರ ಮಹರ್ಷಿಯೆ ! ಈ ಬ್ರಹ್ಮರೂಪಿಯಾದ ವಿಷ್ಣುವು ದೇವರ್ಷಿಪಿತೃದಾನವರನ್ನೂ, ಮನುಷ್ಯತಿರ್ಯಗ್ವೃಕ್ಷಾದಿಗಳನ್ನೂ, ಭೂವ್ಯಾಕಾಶಸಲಿಲಾದಿಭೂತಗಳಲ್ಲಿರುವ ಪ್ರಾಣಿಗಳನ್ನೂ ಹ್ಯಾಗೆ ಸೃಷ್ಟಿಸಿದನೋ ಅದನ್ನು ವಿಸ್ತಾರವಾಗಿ ನಿರೂಪಿಸಬೇಕು " ಎಂದ ಮೈತ್ರೇಯರನ್ನು ಕುರಿತು ಇಂತೆಂದರು.

ಅದೇನೆಂದರೆ :—

" ಕೇಳು, ಮೈತ್ರೇಯ ! ಚತುರ್ಮುಖ ಬ್ರಹ್ಮರೂಪಿಯಾದ ವಿಷ್ಣುವು ದೇವತಿರ್ಯಙ್ಮನುಷ್ಯಾದಿಗಳನ್ನು ಸೃಷ್ಟಿಸಿದ ಕ್ರಮವನ್ನು ಹೇಳುವೆನು, ಸಮಾಧಾನವಾಗಿ ಕೇಳುವನಾಗು. ಪೂರ್ವಸೃಷ್ಟಿಯಲ್ಲಿ ಹ್ಯಾಗೋ ಹಾಗೆ ಸೃಷ್ಟಿಕರ್ಮವನ್ನು ಧ್ಯಾನಮಾಡುತ್ತಿದ್ದ ಬ್ರಹ್ಮದೇವನ ದೆಶೆಯಿಂದ, ಅವನಿಗೂ ತಿಳಿಯದಹಾಗೆ, ತಮಃ ಪ್ರಚುರವಾದ ಅವಿದ್ಯಾಸರ್ಗವು ಆವಿರ್ಭವಿಸಿತು. ಅದು ಹ್ಯಾಗೆಂದರೆ – ಆ ಬ್ರಹ್ಮನ ದೆಶೆಯಿಂದ ತಮಸ್ಸು, ಮೋಹವು, ಮಹಾಮೋಹವು, ತಾಮಿಸ್ರವು, ಅಂಧತಾಮಿಸ್ರವು ಎಂದು ಹೆಸರಿನಿಂದ ಐದು ಪ್ರಕಾರವುಳ್ಳ ಅವಿದ್ಯೆಯು ಉಂಟಾಯಿತು. ಆಸಮಯದಲ್ಲಿ ಧ್ಯಾನವನ್ನು ಮಾಡುತ್ತಿದ್ದಂಥ ಬ್ರಹ್ಮದೇವನ ದೆಶೆಯಿಂದ * ಪಂಚಧಾ ವಸ್ಥಿತವಾಗಿಯೂ, ತಾನೆಂದು ಅರಿಯದಂಥಾದ್ದಾಗಿಯೂ, ಬಾಹ್ಯಾಂತಸ್ಸುಖ ದುಃಖ ಜ್ಞಾನಶೂನ್ಯವಾಗಿಯೂ, ತಮಃ ಪ್ರಚುರವಾದ, ಸ್ಥಾವರಾತ್ಮಕವಾದ ಸೃಷ್ಟಿಯು ಆವಿರ್ಭವಿಸಿತು. ಸೃಷ್ಟಿಯಲ್ಲಿ ಸ್ಥಾವರ ಸೃಷ್ಟಿಯೇ ಮುಖ್ಯವಾದ್ದರಿಂದ, ಸ್ಥಾವರ ಸೃಷ್ಟಿಯೇ ಮುಖ್ಯ ಸೃಷ್ಟಿಯೆನಿಸಿ ಕೊಳ್ಳುವದು. ಬ್ರಹ್ಮದೇವನು ಈ ಸೃಷ್ಟಿಯನ್ನು ನೋಡಿ, ಜಡವಿಷಯವಾದ ಕಾರಣ ಅಪ್ರಯೋಜಕವೆಂದು ಬೇರೆ ಸೃಷ್ಟಿಯನ್ನು ಚಿಂತಿಸಿದನು. ಹೀಗೆ ಧ್ಯಾನದಲ್ಲಿದ್ದ ಬ್ರಹ್ಮದೇವನಿಗೆ ತಿರ್ಯಕ್ಸ್ರೋತಸ್ಸೆಂಬ ಸರ್ಗವು ಪ್ರಾದುರ್ಭವಿಸಿತು. ಇದ

* ವೃಕ್ಷ ಪೊದೆ ಲತೆ ಗಿಡ ಹುಲ್ಲು ಎಂದು ಐದು ವಿಧವಾಗಿರುವ

ಕ್ಕೆ, ತಿರ್ಯಕ್ಪ್ರವೃತ್ತಿಯುಂಟಾದ್ದರಿಂದ ತಿರ್ಯಕ್ಸ್ರೋತಸ್ಸೆಂದು ಹೆಸರಾಯಿತು. ಅದು ಯಾವದೆಂದರೆ— ಪಶುಪಕ್ಷಿ ಮೊದಲಾದ ತಿರ್ಯಗ್ಜಾತಿಗಳು. ಅವು ಕೇವಲ ತಾಮಸ ಸ್ವರೂಪಗಳು, ವಿವೇಕಶೂನ್ಯವಾದವುಗಳು, ಭಕ್ಷ್ಯಾಭಕ್ಷ್ಯ ನಿಯಮವಿಲ್ಲದವುಗಳು, ಒಳ್ಳೇ ಜ್ಞಾನವಿಲ್ಲದಿದ್ದರೂ ತಾವು ಒಳ್ಳೇ ಜ್ಞಾನವುಳ್ಳವುಗಳೆಂದು ಭಾವಿಸುವವು, ಅಹಂಕಾರವುಳ್ಳವುಗಳಾಗಿ ಅಹಂಕಾರಕಾರಣವಾದ ದೇಹಾತ್ಮ ಭ್ರಾಂತಿಯುಳ್ಳವುಗಳು, ಮತ್ತು ಇಪ್ಪತ್ತೆಂಟು ವಿಧವಾದ *ವಧೆಯುಳ್ಳವುಗಳು. ಇವೆಲ್ಲವು ಅಂತಃ ಜ್ಞಾನವುಳ್ಳವುಗಳು, ಬಾಹ್ಯಜ್ಞಾನಶೂನ್ಯಗಳು, ಮತ್ತು ಪರಸ್ಪರವಾಗಿ ಪತಿಪತ್ನ್ಯಾದಿನಿಯಮವಿಲ್ಲದವುಗಳು. (*ಆ ವಧೆಗಳು ಯಾವವುದರೆ— ಇಂದ್ರಿಯಗಳ ವಧೆ, ೧೧; ತುಷ್ಟಿಗಳ ವಧೆ, ೯; ಅಷ್ಟಸಿದ್ಧಿಗಳವಧೆ, ೮; ಅಂತು ವಧೆಗಳಿಪ್ಪತ್ತೆಂಟು. ಇದಕ್ಕೆ ವಿವರ. ಅಂಧತ್ವ, ಬಧಿರತ್ವ, ನಿರಸನತ್ವ, ನಿರ್ಘ್ರಾಸಿಕತ್ವ, ತ್ವಗ್ದೋಷ, ಮೂಕತ್ವ, ಕುಣಿತ್ವ, ಪಂಗುತ್ವ, ಷಂಡತ್ವಗಳೇ ಏಕಾದಶ ಇಂದ್ರಿಯವಧೆಗಳು. ಪಶುಪಕ್ಷಿಮುಂತಾದವುಗಳಿಗೆ ಏಕಾದಶೇಂದ್ರಿಯವಧೆಯೆಂದರೆ, ಅವುಗಳಿಗೆ ಆ ಇಂದ್ರಿಯಗಳ ಮುಖ್ಯ ಪ್ರಯೋಜನವು ಕಡಮೆ ಎಂಬುವದೀಗ ತಾತ್ಪರ್ಯವು. ತುಷ್ಟಿಗಳಲ್ಲಿ, ಆಧ್ಯಾತ್ಮ ತುಷ್ಟಿಗಳು ನಾಲ್ಕು, ಬಾಹ್ಯ ತುಷ್ಟಿಗಳೈದು. ಅಂಭಾ ಸಲಿಲಾ ಆಪಾ ವೃಷ್ಟೀ— ಇವು ನಾಲ್ಕು ಆಧ್ಯಾತ್ಮ ತುಷ್ಟಿಗಳು. ಸುತಾರ ಸುಪಾರ ಸುನೇತ್ರ ಮಾರೀಚಕ ಉತ್ತಮಾಂಭ ಇವೈದು ಬಾಹ್ಯ ತುಷ್ಟಿಗಳು. ಅಂಭಾ ತುಷ್ಟಿಯೆಂದರೆ, ಅಷ್ಟವಿಧಪ್ರಕೃತಿಯಲ್ಲಿ ಚಿತ್ತಲಯದ್ದೆಶೆಯಿಂದ ಮುಕ್ತನಾಗಿಬೇನೆಯೆಂದು ತಿಳಿಯುವದು. ಸನ್ಯಾಸಸ್ವೀಕಾರದಿಂದಲೇ ಕೃತಾರ್ಥನಾಗಿಥೇನೆಂದು ತಿಳಿಯುವದು ಸಲಿಲಾತುಷ್ಟಿ, ಕಾಲಾಂತರದಲ್ಲಿ ಸಿದ್ಧಿಸುವದೆಂದಿರುವದು ಆಪಾತುಷ್ಟಿ, ಅದೃಷ್ಟದಿಂದ ತಾನೇ ಸಿದ್ಧಿಸುವದು ಎಂದು ಇರುವದು ವೃಷ್ಟಿತುಷ್ಟಿ. ವಿಷಯಗಳ ಸಂಪಾದನೆಯಲ್ಲೂ, ಕಾಪಾಡುವಿಕೆಯಲ್ಲೂ, ನಾಶದಲ್ಲೂ, ಅನುಭವದಲ್ಲೂ, ಅನುಭವದಲ್ಲಿನ ಅತೃಪ್ತಿಯಲ್ಲೂ, ದುಃಖವುಂಟಾಗುವದರಿಂದ ಅವುಗಳನ್ನು ತ್ಯಜಿಸಿ, ಮುಕ್ತನಾಗಿಥೇನೆ ಯಂಬುವದೇ ಬಾಹ್ಯ ತುಷ್ಟಿಗಳು.

ಅಷ್ಟ ಸಿದ್ಧಿಗಳೆಂದರೆ— ತಾರೆ, ಸುತಾರೆ, ತಾರಾಯಂತೀ, ಮೋದ, ಪ್ರಮೋದ, ಮೋದಮಾನ, ಅಧಿಗಮ್ಯ, ಸದಾಪ್ರಮುದಿತವೆಂಬಿವುಗಳೇ ಅಷ್ಟಸಿದ್ಧಿಗಳು. ಇವುಗಳಲ್ಲಿ, ಅನುಪದಿಷ್ಟವಾದ ಅರ್ಥವನ್ನು ತಿಳಿದು ಕೊಳ್ಳುವದು, ತಾರೆ; ಪ್ರಾಸಂಗಿಕವಾದ ಶಬ್ದದ ಶ್ರವಣದಿಂದಲೂ, ಲೋಕಯಾತ್ರಾದರ್ಶನದಿಂದಲೂ ಉಂಟಾಗುವ ಪರಿಚಯವು, ಸುತಾರೆ; ಗುರುವಿನ ಉಪದೇಶದಿಂದ ವಿಶೇಷಾರ್ಥವನ್ನು ತಿಳಿದು ಕೊಳ್ಳುವದು, ತಾರಾಯಂತೀ; ಆಧ್ಯಾತ್ಮಿಕ ಆಧಿಭೌತಿಕ ಆಧಿದೈವಿಕಗಳಾದ ತಾಪ ತ್ರಯಗಳ ಜಯವು, ಮೋದ ಪ್ರಮೋದ ಮೋದಮಾನಗಳು; ಸ್ನೇಹಿತನ ಸಹಾಯದಿಂದ ಅರ್ಥಪ್ರಾಪ್ತಿಯುಂಟಾದರೆ, ಅಧಿಗಮ್ಯ; ವಿದ್ವಾಂಸರ ಸೇವೆಯಿಂದಲೂ ತಪಸ್ವಿಗಳ ಶಿಶ್ರೂಷೆಯಿಂದಲೂ ಉಂಟಾಗುವ ಲಾಭವು, ಸದಾಪ್ರಮುದಿತವು. 'ಇಪ್ಪತ್ತೆಂಟು ವಧೆ' ಎಂಬುವ ಕಡೆಯಲ್ಲಿ ಇಪ್ಪತ್ತೆಂಟು ಜಾತಿಯುಳ್ಳವು ಎಂದು ಪಾಠಾಂತರವುಂಟು. ಅದಕ್ಕೆ ವಿವರ— ಒಂದು ಗೊರಸುಳ್ಳ ಮೃಗವು ಆರು ಜಾತಿ, ಎರಡು ಗೊರಸುಗಳುಳ್ಳವು ಒಂಭತ್ತು ಜಾತಿ, ಪಂಚ ನಖವುಳ್ಳವುಗಳು ಹದಿಮೂರು ಜಾತಿ, ಅಂತು ಕೂಡಿ ಇಪ್ಪತ್ತೆಂಟು ಜಾತಿಯಾಯಿತು. ಇಲ್ಲಿ ಕುದುರೆ, ಕತ್ತೆ, ಹೇಸರಕತ್ತೆ, ಗೌರಮೃಗ, ಶರಭ, ಚೌರೀಮೃಗ – ಇವುಗಳು ಏಕಶಫಗಳು. ಹಸು, ಆಡು, ಎಮ್ಮೆ, ಏರಳೆ, ಹಂದಿ, ಗವಯ, ಜಿಂಕೆ, ಕುರಿ, ಒಂಟೆ– ಇವು ಒಂಭತ್ತೂ ದ್ವಿಶಫಗಳು. ನಾಯಿ, ನರಿ, ತೋಳ, ಹುಲಿ, ಮೊಲ, ಮುಳ್ಳು ಹಂದಿ, ಸಿಂಹ, ಕೋತಿ, ಆನೆ, ಆಮೆ, ಉಡು, ಮೊಸಳೆ– ಇವುಗಳು ಪಂಚನಖಗಳು. ಈಪ್ರಕಾರವಾಗಿರುವ ತಿರ್ಯಗ್ಜಾತಿಗಳು ಅಂತಜ್ಞಾನವುಳ್ಳವು, ಬಾಹ್ಯಜ್ಞಾನಶೂನ್ಯಗಳೆಂಬುವದೀಗತಾತ್ಪರ್ಯ. ) ಆದಕಾರಣ ಬ್ರಹ್ಮದೇವನು ಈ ಸೃಷ್ಟಿಯನ್ನು ಅಸಾಧಕವೆಂದು ತಿಳಿದು ಬೇರೆ ಧ್ಯಾನಚಿತ್ತನಾದನು. ಆ ಧ್ಯಾನದಿಂದ ಬೆರೊಂದು ಸೃಷ್ಟಿಯಾಯಿತು. ಅದು ಅಸ್ಪೃಷ್ಟಭೂಮಿಯುಳ್ಳದ್ದಾಗಿ, ಸಾತ್ವಿಕ ಗುಣಕಾರ್ಯವಾಗಿ, ಊರ್ಧ್ವ ಲೋಕದಲ್ಲಿರುವಂಥಾದ್ದಾಯಿತು. ಆ ತೃತೀಯ ಸರ್ಗದಲ್ಲಿ ಉತ್ಪನ್ನರಾದ ದೇವತೆಗಳು ಬಹುಸುಖಪ್ರೀತಿಯುಳ್ಳವರಾಗಿ, ಬಾಹ್ಯಾಂತರಗಳಲ್ಲಿ ಜ್ಞಾನನಿರೋಧವಿಲ್ಲದವರಾಗಿ, ಅಂತರ್ಬಾಹ್ಯಗಳಲ್ಲಿ ವಸ್ತುಜ್ಞಾನವುಳ್ಳವರಾಗಿ, ಮುಖ್ಯ ಸರ್ಗದಲ್ಲಿ ಉ

ತ್ಪನ್ನರು ಎಂದು ಹೇಳಲ್ಪಟ್ಟವರಾದರು. ಅವರುಗಳು ಸಂತುಷ್ಟಮನಸ್ಸುಳ್ಳವರು. ಇಂಥಾಸೃಷ್ಟಿಯಲ್ಲಿ ಬ್ರಹ್ಮದೇವನಿಗೆ ಪ್ರೀತಿಯುಂಟಾಯಿತು. ಅನಂತರದಲ್ಲಿ ಬ್ರಹ್ಮದೇವನು ಮುಖ್ಯಸರ್ಗದಲ್ಲಿ ಉತ್ಪನ್ನರಾದ ದೇವತೆಗಳು ಅಸಾಧಕರೆಂದೆಣಿಸಿ, ಉತ್ತಮಸಾಧಕವಾದ ಸರ್ಗವನ್ನು ಧ್ಯಾನಿಸಿದನು. ಪರಮಾತ್ಮನಲ್ಲಿ ಧ್ಯಾನವನುಳ್ಳದ್ದರಿಂದ ಸತ್ಯಸಂಕಲ್ಪನಾಗಿ, ಮತ್ತು ಆಸಮಯದಲ್ಲಿ ಸರ್ಗಚಿಂತೆಯನ್ನು ಮಾಡುವಂಥಾ ಬ್ರಹ್ಮದೇವನು ತಾನೇ ಪಾಂಚಭೌತಿಕಶರೀರವನ್ನು ಅನುಪ್ರವೇಶಿಸಿ ಅರ್ವಾಕ್ಸ್ರೋತಸ್ಸೆಂಬ ಸಾಧಕವಾದ ಸರ್ಗವನ್ನು ಉಂಟುಮಾಡಿದನು. ಆಸೃಷ್ಟಿಯಲ್ಲಿ ಉತ್ಪನ್ನರಾದ ಮನುಷ್ಯರು, ಭೂಮಿಯಲ್ಲಿ ಸಂಭವಿಸಿದ್ದರಿಂದ, ಅರ್ವಾಕ್ಸ್ರೋತಸ್ಸುಗಳೆನಿಸಿಕೊಂಡು, ಬಹುಜ್ಞಾನವುಳ್ಳವರಾಗಿ, ಉದ್ರಿಕ್ತವಾದ ರಜಸ್ತಮೋಗುಣಗಳುಳ್ಳವರಾಗಿ, ಆದ್ದರಿಂದಲೇ ದುಃಖ ಬಾಹುಳ್ಯವುಳ್ಳವರಾಗಿ, ಆಗಾಗ್ಯೆ ಸುಕೃತ ದುಷ್ಕೃತ ಕರ್ಮಗಳನ್ನು ಮಾಡುವವರಾಗಿ, ಬಾಹ್ಯಾಂತರಗಳಲ್ಲಿ ಪ್ರಕೃಷ್ಟಜ್ಞಾನವುಳ್ಳವರಾಗಿ, ಯಜ್ಞಾದಿ ಕರ್ಮಾನುಷ್ಠಾನಗಳಂದ ಸಾಧಕರಾಗಿ ಇರುವರು. ಈ ಪ್ರಕಾರದಲ್ಲಿ ಷಡ್ವಿಧವಾದ ಸರ್ಗಗಳೂ ಇಲ್ಲಿ ಹೇಳಲ್ಪಟ್ಟತು. ಅದರಲ್ಲಿ ಪ್ರಥಮ ಸರ್ಗವು ಮಹತ್ತತ್ತ್ವದ ಸರ್ಗವು. ತನ್ಮಾತ್ರ ಸೃಷ್ಟಿಯು ಭೂತ ಸರ್ಗವೆನಿಸಿಕೊಂಡು, ದ್ವಿತೀಯ ಸರ್ಗವಾಯಿತು. ಸಾತ್ವಿಕಾಹಂಕಾರದಲ್ಲಿ ಹುಟ್ಟಿದ ಇಂದ್ರಿಗಳ ಸರ್ಗವು ಮೂರನೇ ಸರ್ಗವಾಯಿತು. ಈ ಪ್ರಕಾರದಲ್ಲಿ ಈ ಮೂರು ಸರ್ಗವು ಪ್ರಕೃತಿಯಿಂದ ಉತ್ಪನ್ನವಾಗಿ, ಪರಬ್ರಹ್ಮ ಕರ್ತೃಕವಾಗಿ ಇರುವದು. ಕೇಳು, ಮೈತ್ರೇಯ! ಮುಖ್ಯ ಸರ್ಗವು ನಾಲ್ಕನೇ ಸರ್ಗವು. ಸ್ಥಾವರಗಳು ಮೊದಲು ಸೃಷ್ಟಿಸಲ್ಪಟ್ಟದ್ದಾದಕಾರಣ ಮುಖ್ಯಗಳೆನಿಸಿಕೊಳ್ಳುವವು. ತಿರ್ಯಗ್ಯೋನಿಗಳಲ್ಲಿ ಉತ್ಪನ್ನವಾಗಿ ಯಾವ ಸೃಷ್ಟಿಯು ಹೇಳಲ್ಪಟ್ಟಿತೋ, ಅದು ಐದನೇ ಸರ್ಗವೆನಿಸಿಕೊಂಡಿತು. ಊರ್ಧ್ವಸ್ರೋತಸ್ಸುಗಳಾದ ಆದೇವತೆಗಳಸೃಷ್ಟಿಯು ಆರನೇ ಸರ್ಗವು. ಅರ್ವಾಕ್ಸ್ರೋತಸ್ಸುಗಳಾದ ಮನುಷ್ಯರುಗಳ ಸೃಷ್ಟಿಯು ಏಳನೇ ಸರ್ಗವು. ಅವಿದ್ಯಾತ್ಮಕವಾಗಿ, ವಧಾತ್ಮಕವಾಗಿ, ತುಷ್ಟಿಸಿದ್ಧ್ಯಾತ್ಮಕವಾದ ತಿರ್ಯಕ್ಸ್ರೋತಸ್ಸೆಂಬ ಅವಾಂತರ

ಸರ್ಗವು ಎಂಟನೇ ಸರ್ಗವು. ಆ ಸರ್ಗವು ತಾಮಸ ಸಾತ್ವಿಕಗುಣಕಾರ್ಯವಾಗಿ, ಈ ಪೂರ್ವೋಕ್ತವಾದ ಸರ್ಗಗಳಿಗೆ ಅನುಗ್ರಾಹಕವಾಗಿರುವದು. ಕೇಳು, ಮೈತ್ರೇಯ! ಹಿಂದೆ ಹೇಳಲ್ಪಟ್ಟ ಐದು ಸರ್ಗಗಳು ವಿಕೃತಿಗಳಾದ ಪಂಚ ಮಹಾಭೂತಗಳಿಂದ ಉತ್ಪನ್ನಗಳಾದಕಾರಣ ವೈಕೃತಗಳೆನಿಸಿಕೊಂಡವು. ಅದಕ್ಕೆ ಮುಂಚಿತವಾಗಿ ಹೇಳಲ್ಪಟ್ಟ ಮಹದಾದಿ ಸರ್ಗಗಳು ಪ್ರಾಕೃತ ಸೃಷ್ಟಿಯೆನಿಸಿಕೊಂಡವು. ಮತ್ತು ಪ್ರಾಕೃತಸರ್ಗ ವೈಕೃತಸರ್ಗವೆನಿಸಿಕೊಂಡ ಕೌಮಾರ ಸರ್ಗವು ಒಂಭತ್ತನೇ ಸರ್ಗವೆನಿಸಿಕೊಂಡಿತು. ಆದಿಸೃಷ್ಟಿಯಲ್ಲಿ ಬ್ರಹ್ಮದೇವನಿಂದ ಸೃಷ್ಟಿಸಲ್ಪಟ್ಟ ಸನಕಾದಿಗಳ ಸೃಷ್ಟಿಯು ಪ್ರಾಕೃತಕೌಮಾರ ಸರ್ಗವು, ದೈನಂದಿನಕಲ್ಪಗಳಲ್ಲಿ ಸೃಷ್ಟಿಸಲ್ಪಟ್ಟ ನೀಲಲೋಹಿತಾದಿ ರುದ್ರಸೃಷ್ಟಿಯು ವೈಕೃತಕೌಮಾರ ಸರ್ಗವೆಂಬುವದು. ಪ್ರಾಕೃತ ವೈಕೃತ ಕೌಮಾರ ರೂಪಗಳಾಗಿ, ಜಗತ್ಸೃಷ್ಟಿಗೆ ಮೂಲಕಾರಣವಾದ ಈ ಒಂಭತ್ತು ಸರ್ಗಗಳು ಜಗತ್ಸೃಷ್ಟಿಯಲ್ಲಿ ಇಚ್ಛೆಯುಳ್ಳವನಾಗಿ, ಜಗನ್ನಿಯಾಮಕನಾದ ಪರಮಾತ್ಮನಿಗೆ ಲೀಲೆಗಳಾಗಿ ಇರುವವು. ಈ ಪ್ರಕಾರದಲ್ಲಿ ಸೃಷ್ಟಿಕ್ರಮವನ್ನು ನಿನಗೆ ಹೇಳಿದೆವು. ಮುಂದೆ ನೀನು ಕೇಳುವ ಪ್ರಶ್ನೆಯೇನು ?" ಎಂದು ಪರಾಶರರು ಮೈತ್ರೇಯರನ್ನು ಕುರಿತು ಕೇಳಿದರು.

ಮೈತ್ರೇಯರು ಪ್ರಶ್ನೆ ಮಾಡುತ್ತಾರೆ.

"ಎಲೈ, ಮುನಿಶ್ರೇಷ್ಠರಾದ ಪರಾಶರರೇ! ಕೇಳಿ. ದೇವಾದಿಗಳ ಸೃಷ್ಟಿಯು ಸಂಕ್ಷೇಪವಾಗಿ ಹೇಳಲ್ಪಟ್ಟಿತು. ಅದನ್ನು ಇನ್ನೂ ವಿಸ್ತಾರವಾಗಿ ಕೇಳಲು ಅಪೇಕ್ಷಿಸುತ್ತಲಿಧ್ಧೇನೆ. ನೀವು ನಿರೂಪಿಸಬೇಕು" ಎಂದು ಕೇಳಿದ ಪ್ರಶ್ನೆಗೆ ಪರಾಶರರು ಉತ್ತರವನ್ನು ನಿರೂಪಿಸುತ್ತಲಿಧ್ಧಾರೆ.

"ಕೇಳು, ಮೈತ್ರೇಯ! ಜೀವಕೋಟಿಗಳು ಪೂರ್ವಕೃತ ಸುಕೃತದುಷ್ಕೃತಕರ್ಮಗಳಿಂದ ಯುಕ್ತವಾಗಿ, ಆ ಕರ್ಮವಾಸನೆಯಿಂದ ಕೂಡಿ, ಸಂಹಾರಕಾಲದಲ್ಲಿ ಉಪಸಂಹರಿಸಲ್ಪಟ್ಟು, ಪ್ರಕೃತಿಯಲ್ಲಿ ಲೀನವಾಗಿ ಇರುವವು. ¶ ಆ ಪ್ರಜೆಗಳೊಳು ದೇವಾದಿಯಾಗಿ

¶ ಜೀವಕೋಟಿಗಳು ಬ್ರಹ್ಮದೇವನ ಮನಸ್ಸು ಉದರ ಪಾರ್ಶ್ವ

ಸ್ಥಾವರಾಂತಗಳಾದ ಚತುರ್ವಿಧವಾದ ಪ್ರಜೆಗಳು ಪುನಸ್ಸೃಷ್ಟಿ ಯಲ್ಲಿ ಬ್ರಹ್ಮದೇವನ ಮನಸ್ಸಿನಿಂದ ಹುಟ್ಟಿದವು. ಅನಂತರದಲ್ಲಿ ಅಂಭಸ್ಸೆಂದು ಹೆಸರುಳ್ಳ ದೇವಾಸುರ ಪಿತೃ ಮನುಷ್ಯಭೇದದಿಂದ ನಾಲ್ಕು ವಿಧವಾದ ಪ್ರಜೆಗಳನ್ನು ಸೃಷ್ಟಿಸುವನಾಗಿ, ಬ್ರಹ್ಮದೇವನು ತನ್ನ ಆತ್ಮವನ್ನು * ಶರೀರಾಂತರದೊಡನೆ ಕೂಡಿಸಿದನು. ಹೀಗೆ ಶರೀರಾಂತರ ಪರಿಗ್ರಹವನ್ನು ಮಾಡಿ ಸೃಷ್ಟಿಸಲು ಇಚ್ಛೆಯುಳ್ಳ ಬ್ರಹ್ಮದೇವನ ಶರೀರದಿಂದ ತಮೋಗುಣಾಂಶವು ಉದ್ರಿಕ್ತವಾಯಿತು. ಆದ್ದರಿಂದ ಆ ಬ್ರಹ್ಮದೇವನ ಜಘನದಿಂದ ಅಸುರರು ಮೊದಲು ಜನಿಸಿದರು. ಅನಂತರದಲ್ಲಿ ಬ್ರಹ್ಮದೇವನು ಉದ್ರಿಕ್ತತಮೋಗುಣವುಳ್ಳ ಆ ಶರೀರವನ್ನು ಬಿಟ್ಟನು. ಆ ಶರೀರವು ರಾತ್ರಿಯಾಗಿ ಪರಿಣಮಿಸಿತು. ಮತ್ತು ಸೃಷ್ಟಿಯಲ್ಲಿ ಇಚ್ಛೆಯುಳ್ಳ ಬ್ರಹ್ಮದೇವನು ಶರೀರಾಂತರಪರಿಗ್ರಹವನ್ನು ಮಾಡಿದನು. ಸತ್ವಗುಣಾಧಿಕ್ಯದಿಂದ ಪ್ರೀತಿಯನ್ನು ಪಡೆದನು. ಆದ್ದರಿಂದ ಆತನ ಮುಖದ್ದೆಸೆಯಿಂದ ದೇವತೆಗಳು ಜನಿಸಿದರು. ಅನಂತರ ಆ ಶರೀರವು ಬ್ರಹ್ಮದೇವನಿಂದ ಬಿಡಲ್ಪಟ್ಟಿತು. ಆ ಸತ್ವಪ್ರಚುರವಾದ ಶರೀರವು ಹಗಲಾಯಿತು. ತಮೋಗುಣದಿಂದ ಅಸುರರೂ, ಸತ್ವಗುಣದಿಂದ ದೇವತೆಗಳೂ ಹುಟ್ಟಿದಕಾರಣದಿಂದಲೇ ರಾತ್ರಿಯಲ್ಲಿ ಅಸುರರು, ದಿವಸದಲ್ಲಿ ದೇವತೆಗಳು, ಬಲವಂತರಾದರು. ಅನಂತರ ಸತ್ವಗುಣಾಧಿಕ್ಯವುಳ್ಳ ಮತ್ತೊಂದು ಶರೀರವನ್ನು ಬ್ರಹ್ಮದೇವನು ಪರಿಗ್ರಹಿಸಿದನು. ಆತನ ವಾಮಪಾರ್ಶ್ವದಿಂದ ಪಿತೃದೇವತೆಗಳು ಜನಿಸಿದರು. ಆತನಿಂದ ಬಿಡಲ್ಪಟ್ಟ ಆ ಶರೀರವು ಇರುಳಿಗೂ ಹಗಲಿಗೂ ಮಧ್ಯಸ್ಥವಾದ ಸಂಧ್ಯೆಯಾಯಿತು. ತದನಂತರ ರಜೋಗುಣಾಧಿಷ್ಠಾನವಾದ ಮತ್ತೊಂದು ಶರೀರವನ್ನು ಪರಿಗ್ರಹಿಸಿದನು. ಆತನ ಆಶರೀರದಿಂದ ರಜೋದ್ರಿಕ್ತವಾದ ಮನುಷ್ಯರು ಜನಿಸಿದರು. ಅನಂತರ ಆ ಶರೀರವನ್ನು ಹಾಗೆಯೇ ಬಿಟ್ಟನು. ಆ ಬಿಡಲ್ಪಟ್ಟ ಶರೀರವು ಬೆ

---

ಮೊದಲಾದ ಸ್ಥಳಗಳಿಂದ ಚತುರ್ವಿಧವಾಗಿ ಹುಟ್ಟೋಣವು ಅವುಗಳ ಕರ್ಮಭೇದದಿಂದಲೇ ಎಂಬುವದು ಇದರಿಂದ ವ್ಯಕ್ತವಾಗುತ್ತದೆ.

* ಸೃಷ್ಟ್ಯುಪಯುಕ್ತವಾದ ಶರೀರವನ್ನು ಪರಿಗ್ರಹಿಸಿದನೆಂಬುವದರ್ಥ.

ಳ್ದಿಂಗಳೆಂದು ಹೆಸರುಳ್ಳದ್ದಾಗಿ, ಪೂರ್ವಸಂಧ್ಯೆಯಾಯಿತು. ಸತ್ವಗುಣದಿಂದ ಪಿತೃಗಳೂ, ರಜೋಗುಣದಿಂದ ಮನುಷ್ಯರೂ ಹುಟ್ಟಿದರಾದ ಕಾರಣ ಪಿತೃಗಳು ಸತ್ವಗುಣಪ್ರಧಾನರಾದರು, ಮನುಷ್ಯರು ರಜೋಗುಣಪ್ರಧಾನರಾದರು. ಅದರಲ್ಲಿ ಪಶ್ಚಿಮಸಂಧ್ಯೆಯೊಡನೆ ಕೂಡಿದ ಅಪರಾಹ್ಣಕಾಲದಲ್ಲಿ ಪಿತೃಗಳೂ, ಹಾಗೆಯೇ ಪೂರ್ವ ಸಂಧ್ಯೆಯೊಡನೆ ಕೂಡಿದ ಪೂರ್ವಾಹ್ಣಕಾಲದಲ್ಲಿ ಮನುಷ್ಯರೂ ಬಲವಂತರಾಗಿರುವರು. ಬೆಳದಿಂಗಳು, ರಾತ್ರಿ, ಅಹಸ್ಸು, ಸಂಧ್ಯೆಗಳೆಂಬ ಇವು ನಾಲ್ಕು ಬ್ರಹ್ಮದೇವನ ಶರೀರಗಳಾಗಿ ಇರುವವು. ಇವುಗಳು ಸತ್ವ ರಜಸ್ತಮೋಗುಣಾತ್ಮಕಗಳು. ಅನಂತರ ಬ್ರಹ್ಮದೇವನು ರಜೋಗುಣಾಧಿಕ್ಯವುಳ್ಳ ಶರೀರಾಂತರವನ್ನು ಪರಿಗ್ರಹಿಸಿದನು. ಆ ಪರಿಗ್ರಹಣದಿಂದ ಆತನಿಗೆ ಹಶಿವುಂಟಾಯಿತು, ಅದರಿಂದ ಅನಂತರ ಕೋಪವುಂಟಾಯಿತು. ಆಸಮಯದಲ್ಲಿ ಅಂಧಕಾರದಲ್ಲಿ ಇದ್ದುಕೊಂಡು ಬ್ರಹ್ಮದೇವನು ವಿಕಾರವಾದ ಆಕಾರವುಳ್ಳವರಾಗಿಯೂ, ವಿಶೇಷವಾಗಿ ಗಡ್ಡಮೀಶೆಯುಳ್ಳವರಾಗಿಯೂ, ಮಹತ್ತಾದ ಕ್ಷುದ್ಬಾಧೆಯುಳ್ಳ ಪ್ರಜೆಗಳನ್ನು ಸೃಷ್ಟಿಸಿದನು. ಕೂಡಲೆ ಆ ಪ್ರಜೆಗಳು ಆ ಬ್ರಹ್ಮನನ್ನೆ ಬಕ್ಷಿಸುವದಕ್ಕೆ ಅಟ್ಟಿದವರಾದರು. ಅವರೊಳಗೆ ಯಾರು– ಭಕ್ಷಿಸಬೇಡಿ, ಈತನು ರಕ್ಷಿಸಲ್ಪಡಲಿ ಎಂದುಹೇಳಿದರೋ, ಅವರು ರಾಕ್ಷಸರಾದರು, ಯಾರು– ಈತನನ್ನು ತಿಂದುಬಿಡೋಣವೆಂದು ಹೇಳಿದರೋ, ಭಕ್ಷಣಾಧ್ಯವಸಾಯಮಾಡಿದ ಅವರು ಯಕ್ಷರಾದರು. ಈ ಯಕ್ಷ ರಾಕ್ಷಸರನ್ನು ನೋಡಿದ ಬ್ರಹ್ಮ ದೇವನ ಶಿರಸ್ಸಿನ ಕೂದಲುಗಳು ಜಿಗುಪ್ಸೆಯಿಂದ ಉದರಿದವು. ಶಿರಸ್ಸಿನಿಂದ ಬಿಡಲ್ಪಟ್ಟ ಆಕೂದಲುಗಳು ಪುನಹ ಆತನ ಶಿರಸ್ಸನ್ನೇ ಹತ್ತಿದವು. ಆ ಕೇಶಗಳಿಂದ ಹುಟ್ಟಿದ ಜಂತುಗಳು ಓಡಿದ್ದರಿಂದ ಸರ್ಪಗಳಾಗಿಯೂ, ಹೀಯ್ಯವಾಗಿ ಬಿಡಲ್ಪಟ್ಟಿದ್ದರಿಂದ ಅಹಿಗಳಾಗಿಯೂ ಆದವು. ಅನಂತರದಲ್ಲಿ ಬ್ರಹ್ಮದೇವನು ಕೋಪವುಳ್ಳವನಾಗಿ ಕೋಪಿಷ್ಠರನ್ನೇ ಸೃಜಿಸಿದನು. ಆಗ ಹುಟ್ಟಿದ ಭೂತಗಳು ಹೊಂಬಣ್ಣದಿಂದ ಉಗ್ರವಾಗಿ ಮಾಂಸವನ್ನೇ ತಿನ್ನುವಂಥಾವುಗಳಾದವು. ಮತ್ತು ಸೃಷ್ಟಿಮಾಡಬೇಕೆಂದು ಧ್ಯಾನಮಾಡುತ್ತಿದ್ದ ಬ್ರಹ್ಮದೇವನ ಶರೀರದ ದಕ್ಷಿಣಭಾಗದಲ್ಲಿ ಗಾನವನ್ನು ಮಾಡಿಕೊಂಡು

ಗಂಧರ್ವರು ಜನಿಸಿದರು. ಅವರು ಗಾನವನ್ನೂ ಧ್ಯಾನವನ್ನೂ ಮಾಡಿ ಕೊಂಡು ಹುಟ್ಟಿದವರಾದಕಾರಣ, ಗಂಧರ್ವರೆಂದು ಹೆಸರನ್ನು ಪಡೆದ ರು. ಅನಂತರ ಪೂಜ್ಯನಾದ ಬ್ರಹ್ಮದೇವನು ವಿಷ್ಣುಶಕ್ತಿಯಿಂದ ಪ್ರೇ ರಿತನಾಗಿ, ಪೂರ್ವೋಕ್ತವಾದ ಪ್ರಾಣಿಗಳ ಸೃಷ್ಟಿಯನ್ನು ಮಾಡಿ, ಸ್ವತಂತ್ರನಾಗಿ ಪಕ್ಷಿಜಾತಿಯನ್ನು ತನ್ನ ಮನಸ್ಸಿನಿಂದ ಸೃಷ್ಟಿಸಿದ ನು. ಬ್ರಹ್ಮದೇವನ ವಕ್ಷಸ್ಸಿನಿಂದ ಕುರಿಗಳು ಹುಟ್ಟಿದವು. ಮುಖ ದಿಂದ ಆಡುಗಳನ್ನೂ, ಉದರದ್ದೆಶೆಯಿಂದ ಗೋಜಾತಿಗಳನ್ನೂ, ಪಾ ರ್ಶ್ವದಿಂದ ಗೋಜಾತಿವಿಭಾಗಗಳನ್ನೂ, ಪಾದಗಳ ದೆಶೆಯಿಂದ ಆನೆ ಕು ದುರೆ, ಕತ್ತೆ, ಗವಯಮೊದಲಾದ ಮೃಗಜಾತಿಗಳನ್ನೂ, ಮತ್ತು ಒಂ ಟೆ ಹೇಸರಗತ್ತೆ ಕೃಷ್ಣಮೃಗವಿಶೇಷಗಳನ್ನೂ, ಮತ್ತು ರೋಮದ ದೆಶೆಯಿಂದ ಓಷಧಿಗಳನ್ನೂ, ಫಲಗಳುಳ್ಳ ಸಸ್ಯ ವೃಕ್ಷ ಲತಾ ಗುಲ್ಮ ಮೊದಲಾದ ಮೂಲ ಜಾತಿಗಳನ್ನೂ, ಹುಟ್ಟಿಸಿದವನಾದನು. ಕೇಳು, ಮೈತ್ರೇಯ ! ತ್ರೇತಾಯುಗದ ಮೊದಲಲ್ಲಿ ಕಲ್ಪಾದಿಯಲ್ಲಿ ಪಶುಜಾತಿ ಗಳನ್ನೂ ಓಷಧಿಗಳನ್ನೂ ಸೃಷ್ಟಿಸಿದವನಾಗಿ, ಯಜ್ಞಸಾಧನಗಳಾಗಿ ವಿನಿಯೋಗಿಸಿದವನಾದನು. ಇನ್ನೂ ಪಶುಜಾತಿಗಳಲ್ಲಿ ಗೋವುಗಳು, ಪುರುಷಮೃಗವು, ಟಗರು, ಕುದುರೆ, ಹೇಸರಕತ್ತೆ– ಇವು ಮೊದ ಲಾದ ಮೃಗಗಳನ್ನು ಗ್ರಾಮ್ಯಪಶುಗಳೆಂದು ತಿಳಿ. ವ್ಯಾಘ್ರಗಳು, ಮರೆ, ಆನೆ, ವಾನರ, ಪಕ್ಷಿಮೊದಲಾದ ಐದುಜಾತಿಗಳನ್ನೂ ಅರಣ್ಯಮೃ ಗಗಳೆಂದೂ, ಮಕರ ಕೂರ್ಮ ಮತ್ಸ್ಯಾದಿ ಆರುಜಾತಿಗಳನ್ನು ಔದಂಕ ಗಳೆಂದೂ, ಸರ್ಪ, ಉಡ, ಮುಂಗುಸಿ ಮೊದಲಾದ ಏಳು ಜಾತಿಜಂತು ಗಳನ್ನು ಸರೀಸೃಪಗಳೆಂದೂ ಹೇಳುವರು. ಆಮೇಲೆ ಬ್ರಹ್ಮದೇವ ನು ಗಾಯತ್ರೀಛಂದಸ್ಸು, ಋಕ್ಕುಗಳು, ತ್ರಿವೃತ್ಸ್ತೋಮವೆಂಬ ಸಾಮವೃತ್ತಿವಿಶೇಷಗಳು, ರಥಂತರವೆಂಬ ಸಾಮಗಳು, ಯಜ್ಞಗಳಲ್ಲಿ ಅಗ್ನಿಷ್ಟೋಮಯಾಗ ಮೊದಲಾದವು ಇವುಗಳನ್ನು ತನ್ನ ಮೊದಲ ನೇ ಮುಖದಿಂದ ಸೃಷ್ಟಿಸಿದನು. ಬೃಹತ್ಸಾಮವು, ಉಕ್ಥ್ಯವು, ಯಜುರ್ವೇದವು, ತ್ರಿಷ್ಟುಪ್ ಛಂದಸ್ಸೂ, ಪಂಚದಶಸ್ತೋಮವು–ಇ ವುಗಳನ್ನು ಬ್ರಹ್ಮದೇವನು ತನ್ನ ದಕ್ಷಿಣಮುಖದಿಂದ ಸೃಷ್ಟಿಸಿದನು.

ಎಲೈ ಮೈತ್ರೇಯ! ಕೇಳು: ಸಾಮಗಳು, ಜಗತೀಛಂದಸ್ಸು, ಸಪ್ತದಶಸ್ತೋಮವು, ವೈರೂಪವು, ಅತಿರಾತ್ರಯಜ್ಞವು- ಇವುಗಳನ್ನು ಬ್ರಹ್ಮದೇವನು ತನ್ನ ಪಶ್ಚಿಮಮುಖದಿಂದಲೂ, ಮತ್ತು ಏಕವಿಂಶತಿಸ್ತೋಮವು, ಅಥರ್ವಣವೇದವು, ಅಪ್ತೋರ್ಯಾಮಯಜ್ಞವು, ಅನುಷ್ಟುಪ್ ಛಂದಸ್ಸು, ವೈರಾಜವೆಂಬ ಸಾಮವು- ಇವುಗಳನ್ನು ಉತ್ತರಮುಖದಿಂದಲೂ ಸೃಜಿಸಿದನು. ಬಳಿಕ ಉತ್ಕೃಷ್ಟಾಪಕೃಷ್ಟಗಳಾದ ಕೆಲವುಜಂತುಗಳು ಬ್ರಹ್ಮದೇವನ ನೇತ್ರಗಳಿಂದ ಹುಟ್ಟಿದವು. ಈ ಪ್ರಕಾರದಲ್ಲಿ ದೇವಾಸುರ ಮನುಷ್ಯರನ್ನು ಬ್ರಹ್ಮದೇವನು ಸೃಷ್ಟಿಸಿದವನಾಗಿ, ಅನಂತರ ಸಂಕಲ್ಪಮಾತ್ರದಿಂದ ಯಕ್ಷರು ಪಿಶಾಚರು ಅಪ್ಸರಸ್ಸುಗಳು ನರರು ಕಿನ್ನರರು ರಾಕ್ಷಸರು ಪಶುಪಕ್ಷಿಮೃಗಾದಿಗಳು-ಮುನ್ತಾದ ಚಿರಕಾಲಸ್ಥಾಯಿಯಾದ ಸ್ಥಾವರವಾಗಿಯೂ, ಸ್ವಲ್ಪಕಾಲದಲ್ಲಿ ನಾಶವನ್ನು ಹೊಂದುವ ಜಂಗಮವಾಗಿಯೂ, ಇರುವ ಈಜಗತ್ತನ್ನು ಸೃಷ್ಟಿಸಿ, ಪೂರ್ವಕಲ್ಪಸೃಷ್ಟಿಯಲ್ಲಿ ಯಾವಯಾವಪದಾರ್ಥಗಳು ಯಾವಯಾವ ಗುಣ, ಆಕಾರ, ಸ್ವರೂಪ, ಸ್ವಭಾವಗಳಿಂದ ಯಾವ ಕರ್ಮಗಳನ್ನು ಪಡೆದು ಇದ್ದವೋ ತತ್ತದನುಗುಣವಾಗಿ ಗುಣ, ಸ್ವರೂಪ, ಸ್ವಭಾವಾದಿಗಳನ್ನು ಕಲ್ಪಿಸಿದನು. ಕೇಳು ಮೈತ್ರೇಯನೇ! ಹೀಗೆ ಸೃಷ್ಟಿಸಲ್ಪಟ್ಟ ಪ್ರಾಣಿಗಳು ಹಿಂಸಾದಯಾಸತ್ಯಾನೃತಾದಿ ರೂಪವಾದ ತಮ್ಮ ಮನೋವಾಕ್ಕಾಯಕರ್ಮಗಳ ಪೂರ್ವಪೂರ್ವ ಸಂಸ್ಕಾರಗಳಿಂದ ತದನುಗುಣವಾಗಿ ಹಿಂಸೆ, ಅಹಿಂಸೆ, ಕ್ರೂರತನ, ಮೃದುತ್ವ, ಮುಂತಾದ ಗುಣಗಳನ್ನು ಸ್ವರುಚಿಪ್ರವೃತ್ತಿಯಿಂದ ಹೊಂದುತ್ತಿದ್ದವು. ಹೀಗೆಯೇ ಪೂರ್ವಕರ್ಮಾನುರೂಪವಾಗಿ ಶ್ರೋತ್ರಾದೀಂದ್ರಿಯಗಳನ್ನೂ, ಶಬ್ದಾದಿಯಾದ ಇಂದ್ರಿಯಾರ್ಥಗಳನ್ನೂ, ಭೂಮಿ ದ್ಯುಲೋಕಮುಂತಾದ ಭೋಗಸ್ಥಾನಗಳನ್ನೂ, ಅನ್ನತೃಣ ಫಲಮುಂತಾದ ಭೋಗ್ಯವಸ್ತುಗಳನ್ನೂ, ' ಈ ಜೀವನು ಈ ಭೋಗ್ಯ ಭೋಗೋಪಕರಣ ಭೋಗಸ್ಥಾನಗಳನ್ನು ಅನುಭವಿಸುವವನಾಗಿ ಈ ಈ ಕಾರ್ಯಗಳನ್ನು ಮಾಡಬೇಕು.' ಎಂಬ ಕಾರ್ಯವಿನಿಯೋಗಗಳನ್ನೂ ತತ್ತತ್ಕಾರ್ಯಾನುಗುಣವಾಗಿ ನಿಯಮಿಸಿ; ದೇವಾದಿಸ್ಥಾವರಾಂತಗಳಾದ ಭೂತಗಳಿಗೆ ಸುರ ನರ ಪಕ್ಷಿ ವೃಕ್ಷಮುಂತಾದ ಜಾತಿನಾಮಗಳನ್ನೂ, ಇಂದ್ರ ಅಗ್ನಿ ಯಮ

ಮುಂತಾದ ವಿಶೇಷನಾಮಗಳನ್ನೂ, ದ್ವಿಪಾದ ಚತುಷ್ಪಾದ ಅಶ್ವಮುಖ ಮುಂತಾದ ರೂಪಭೇದಗಳನ್ನೂ, ಹವಿರ್ಭಾಗ ಯಜ್ಞಾನುಷ್ಠಾನ ವೃಷ್ಟಿ ದಹನಮುಂತಾದ ಕಾರ್ಯನಾಮಗಳನ್ನೂ ವೇದದಲ್ಲಿ ಹೇಳಿರುವ ಶಬ್ದದಿಂದಲೇ ಕಲ್ಪಿಸಿದನು. ವಸಂತಾದಿಋತುಗಳಲ್ಲಿ ಪುಷ್ಪಫಲಾದಿಗಳು ವೃಕ್ಷಗಳಲ್ಲಿ ಜನಿಸಿ, ಆಯಾಯ ಋತುಗಳು ಕಳೆದನಂತರ ತಾವು ನಷ್ಟಗಳಾಗಿ, ತಿರಿಗಿ ಆಯಾಯ ಕಾಲಾವೃತ್ತಿಯಲ್ಲಿ ಪುನಃ ಜನಿಸಿ, ಪೂರ್ವದ ಹೆಸರುಗಳನ್ನೇ ಪಡೆಯುವಂತೆ ಇಂದ್ರಾದಿದೇವತೆಗಳೂ ವಸಿಷ್ಠಾದಿಋಷಿಗಳೂ ಸಹ ಪ್ರತಿಕಲ್ಪಗಳಲ್ಲಿ ಬೇರೆಬೇರೆಯಾಗಿದ್ದರೂ ಪೂರ್ವಕಲ್ಪದ ಸಜಾತೀಯತ್ವದಿಂದ ಆಯಾ ಹೆಸರುಗಳನ್ನೇ ಪಡೆಯುತ್ತಿದ್ದರು. ಹೀಗೆಯೇ ಬ್ರಹ್ಮದೇವನು ಕಲ್ಪಾದಿಯಲ್ಲಿ ಸೃಷ್ಟಿಮಾಡಬೇಕೆಂಬ ಇಚ್ಛೆಯೊಡನೆಯೂ ತದನುಗುಣವಾದ ಶಕ್ತಿಯೊಡನೆಯೂ ಕೂಡಿಕೊಂಡವನಾಗಿ ಪೂರ್ವಕಲ್ಪಾನುಗುಣವಾಗಿ ಸಕಲವಾದ ಜಗತ್ತನ್ನೂ ಸೃಷ್ಟಿಸಿದನು."

ಎಂದು ಪರಾಶರರು ಮೈತ್ರೇಯರಿಗೆ ನಿರೂಪಿಸಿದರು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದ
ಪಂಚಮಾಧ್ಯಾಯವು ಮುಗಿಯಿತು.

---

## ಆರನೆಯ – ಅಧ್ಯಾಯ.

---

ಮೈತ್ರೇಯರು ಕೇಳುವ ಪ್ರಶ್ನೆ:

"ಎಲೈ, ಗುರುವೇ! ಅರ್ವಾಕ್ಸ್ರೋತಸ್ಸಿನ ಸೃಷ್ಟಿಯಾದ ಮನುಷ್ಯಸೃಷ್ಟಿಯನ್ನು ಹೇಳಿದಿರಿ. ಅತಿಸಂಕ್ಷಿಪ್ತವಾದ್ದರಿಂದ ಅದನ್ನೇ ವಿಸ್ತಾರವಾಗಿ ನಿರೂಪಿಸಬೇಕು. ಮತ್ತು ಬ್ರಹ್ಮದೇವನು ಬ್ರಾಹ್ಮಣಾದಿವರ್ಣಗಳನ್ನೂ, ಆಯಾ ವರ್ಣಗಳಿಗೆ ಉಂಟಾದ ಕರ್ಮಭೇದಗಳನ್ನೂ ಕಲ್ಪಿಸಿದ್ದು ಹ್ಯಾಗೆ, ವಿಸ್ತಾರವಾಗಿ ನಿರೂಪಿಸಬೇಕು." ಎಂದು ಕೇಳಲು; ಪರಾಶರರು ಹೇಳುತ್ತಾರೆ:—

“ಕೇಳು ಮೈತ್ರೇಯನೇ, ಪೂರ್ವದಲ್ಲಿ ಬ್ರಹ್ಮನು ಪ್ರಜಾಸೃಷ್ಟಿಯನ್ನು ಮಾಡಬೇಕೆಂದು ಇಚ್ಛೈಸಿ ವೇದಗಳನ್ನು ಧ್ಯಾನಿಸುತ್ತಿರಲು ; ಕೆಲವು ಪ್ರಜೆಗಳು ಸತ್ವಗುಣ ಪ್ರಚುರರಾಗಿ ಆ ಬ್ರಹ್ಮನ ಮುಖದಿಂದಲೂ, ಕೆಲವರು ರಜೋಗುಣ ಭೂಯಿಷ್ಠರಾಗಿ ಅವನ ವಕ್ಷಸ್ಥಳದಿಂದಲೂ, ಕೆಲವರು ರಜೋಗುಣತಮೋಗುಣಸಂಮಿಳಿತರಾಗಿ ಅವನ ತೊಡೆಗಳಿಂದಲೂ, ಮತ್ತು ಕೆಲವು ಪ್ರಜೆಗಳು ಕೇವಲ ತಮೋಗುಣಪ್ರಚುರರಾಗಿ ಅವನ ಪಾದಗಳಿಂದಲೂ ಹುಟ್ಟಿದರು. ಹೀಗೆ ಬ್ರಹ್ಮನ ಮುಖ ಎದೆ ತೊಡೆ ಪಾದ ಇವುಗಳಿಂದ ಹುಟ್ಟಿದ ಪ್ರಜೆಗಳು ಕ್ರಮವಾಗಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ಹೆಸರುಗಳನ್ನು ಪಡೆದು ಈ ನಾಲ್ವರೂ ಶೇರಿ ಚಾತುರ್ವರ್ಣ್ಯವೆಂದೆನಿಸಿಕೊಂಡರು. ಇಂಥಾ ಚಾತುರ್ವರ್ಣ್ಯವನ್ನು ಬ್ರಹ್ಮನು ಯಜ್ಞಕಾರ್ಯಗಳನ್ನು ಮಾಡುವದಕ್ಕಾಗಿಯೇ ಸೃಷ್ಟಿಸಿದನು. ( ಶೂದ್ರರಿಗೆ ವೇದಾಧಿಕಾರವಿಲ್ಲವಾದ್ದರಿಂದ ಅಗ್ನ್ಯಾಧಾನವೇ ಮೊದಲಾದ ಕಾರ್ಯಗಳಿಲ್ಲದಿದ್ದರೂ, ಬ್ರಾಹ್ಮಣಶುಶ್ರೂಷೆಮುಂತಾದ ಯಜ್ಞೋಪಯೋಗಿಯಾದ ಕಾರ್ಯವುಂಟಾದ್ದರಿಂದ ಚಾತುರ್ವರ್ಣ್ಯದವರೂ ಯಜ್ಞಾದಿಸಾಧನಗಳನ್ನು ಮಾಡುವವರಾದರು. ) ಯಜ್ಞದಲ್ಲಿ ಅಗ್ನಿಯೊಳಗೆ ಹೋಮಮಾಡಿದ ಹವಿಸ್ಸು ಸೂರ್ಯನನ್ನು ಹೊಂದಿ ಅಂಥಾ ಸೂರ್ಯನಿಂದ ಲೋಕಕ್ಕೆ ವೃಷ್ಟಿಯು, ಅಂಥಾ ವೃಷ್ಟಿಯಿಂದ ಅನ್ನವು, ಅಂಥಾ ಅನ್ನದಿಂದ ಪ್ರಜೆಗಳುಂಟಾಗುವದರಿಂದ ಯಜ್ಞಗಳು ಸರ್ವಲೋಕಹಿತಕರಗಳಾಗಿಯೂ, ದೇವತೆಗಳಿಗೆ ಸಂತೋಷಕರಗಳಾಗಿಯೂ ಇರುವವು. ಈ ನಾಲ್ಕು ವರ್ಣದವರು ತಮ್ಮ ತಮ್ಮ ಉತ್ಪತ್ತಿಸ್ಥಾನಗಳಾದ ಮುಖ ವಕ್ಷಸ್ಸು ಊರು ಪಾದಗಳಿಗೆ ಉಚಿತಗಳಾಗಿಯೂ ಸಾಧ್ಯಗಳಾಗಿಯೂ ಇರುವ ಅಧ್ಯಾಪನ ಪಾಲನ ವಾಣಿಜ್ಯ ಪರಿಚರಣಮುಂತಾದ ತತ್ತದನುಗುಣವಾದ ಕಾರ್ಯಗಳಿಂದ ಜೀವಿಸುವವರಾಗಿಯೂ, ಶ್ರುತಿಸ್ಮೃತಿ ವಿಹಿತಗಳಾದ ಸ್ವಧರ್ಮಗಳನ್ನು ಆಚರಿಸುವವರಾಗಿಯೂ, ಶಾಸ್ತ್ರನಿಷಿದ್ಧವಾದ ಕರ್ಮಗಳನ್ನು ಬಿಡತಕ್ಕವರಾಗಿಯೂ, ದೇವತಾಸಂತೋಷಕರಗಳಾದ ಯಜ್ಞಯಾಗಾದಿಗಳ ಮಾಡುತ್ತಾಇದ್ದು, ತತ್ತತ್ಕರ್ಮಾನುಗುಣವಾಗಿ ಸ್ವರ್ಗಾದಿಪುರುಷಾರ್ಥಗಳನ್ನೂ ತಮಗೆ ಅಭಿಮತವಾದ ಸತ್ಯಲೋಕಾಂತವಾದ ಸ್ಥಾನ

ಗಳನ್ನೂ ಪಡೆಯಬಲ್ಲವರಾಗಿದ್ದಾರೆ. ಈ ಚಾತುರ್ವರ್ಣ್ಯಪ್ರಜೆಗಳು ಶಾಸ್ತ್ರಶ್ರದ್ಧೆಯುಳ್ಳವರಾಗಿಯೂ, ಚಾತುರ್ವರ್ಣ್ಯಕ್ಕೆ ವಿಹಿತವಾದ ಸ್ವಧರ್ಮವನ್ನು ಉಲ್ಲಂಘಿಸದೆ ಇರತಕ್ಕವರಾಗಿಯೂ, ಗಿರಿ ಗುಹೆ ಆಶ್ರಮ ಮುಂತಾದ ಸ್ಥಳಗಳಲ್ಲಿ ತಮ್ಮ ಇಷ್ಟಬಂದಂತೆ ಆವಾಸ ಮಾಡಿಕೊಂಡಿದ್ದು, ಶೀತೋಷ್ಣ ಕ್ಷುತ್ಪಿಪಾಸೆ ಮುಂತಾದ ದ್ವಂದ್ವಬಾಧೆಗಳಿಗೂ ಒಳಗಾಗದೆ ಇರತಕ್ಕವರಾಗಿಯೂ, ಅಕೃಷ್ಟಪಚ್ಯಗಳಾದ ಧಾನ್ಯಾದಿಗಳಿಂದ ಯಜ್ಞಾದ್ಯಾಚರಣೆ ಮಾಡುವವರಾಗಿಯೂ, ಅಹಂಕಾರನಿವೃತ್ತಿದ್ವಾರಾ ವೈರಾಗ್ಯಶಾಲಿಗಳಾಗಿಯೂ ಇದ್ದದ್ದರಿಂದ ಶುದ್ಧಾಂತಃಕರಣರಾಗಿ ಭಗವದ್ಧ್ಯಾನವನ್ನು ಮಾಡುತ್ತಾ, ಧರ್ಮಾಚರಣಕ್ಕೆ ಫಲವಾದ ಉತ್ತಮಗತಿಯನ್ನು ಹೊಂದುವ ಸ್ವರೂಪಯೋಗ್ಯತೆಯುಳ್ಳವರಾಗಿಯೂ, ಹಾಗೆಯೇ ಹೊಂದುವವರಾಗಿಯೂ ಇದ್ದರು. ಹೀಗೆಯೇ ತ್ರೇತಾಯುಗದವರಿಗೂ ಕೆಲವು ಕಾಲ ಅತಿಕ್ರಮಿಸುತ್ತಾ ಬರಲು; ಆ ಕಾಲದ ಮಹಿಮೆಯಿಂದ ಧರ್ಮವೈಕಲ್ಯವುಂಟಾಗಿ, ಕ್ರೋಧಲೋಭಗಳಿಗೆ ಕಾರಣವಾಗಿಯೂ, ಅಧರ್ಮಹೇತುವಾಗಿಯೂ, * ಅಷ್ಟಸಿದ್ಧಿಗಳಿಗೆ ವಿರೋಧಿಯಾಗಿಯೂ, ಪುರುಷಾರ್ಥಪ್ರತಿಬಂಧಕವಾಗಿಯೂ, ಇರುವ ತಮೋಗುಣವು ಹೆಚ್ಚುತ್ತಾ ಬಂತು. ಆದ್ದರಿಂದ ಸಹಜಸಿದ್ಧ

---

* ಅವು ಯಾವವೆಂದರೆ? ಯೋಗಾಭ್ಯಾಸಬಲದಿಂದ ತನ್ನ ಶಿರಸ್ಸಿನಲ್ಲಿ ಚಂದ್ರಬಿಂಬದಿಂದ ದ್ರವಿಸುವ ಅಮೃತದಿಂದ ತೃಪ್ತಿ ಹೊಂದುವಿಕೆಯೆಂಬ ರಸೋಲ್ಲಾಸಸಿದ್ಧಿ ; ಸ್ತ್ರೀರಹಿತವಾಗಿಯೇ ಸ್ತ್ರೀಸಂಗದಿಂದುಂಟಾಗುವ ಆನಂದಾವಾಪ್ತಿಯೆಂಬ ಮಿಥುನೋತ್ಪತ್ತಿಸಿದ್ಧಿ; ಒಂದು ಸಾರಿ ವರ್ಷಿಸುವದರಿಂದ ಸಕಲಸಸ್ಯಫಲಾದಿನಿಷ್ಪತ್ತಿಯೆಂಬ ಸಕೃದ್ವೃಷ್ಟಿಸಿದ್ಧಿ ; ಸಂಕಲ್ಪಮಾತ್ರದಿಂದ ಗೃಹಾರಾಮೋತ್ಪತ್ತಿಯೆಂಬ ಗೃಹವೃಕ್ಷಾತ್ಮಕಸಿದ್ಧಿ ; ನೆನೆದ ಇಷ್ಟವನ್ನೆಲ್ಲಾ ಹೊಂದುವಿಕೆಯೆಂಬ ಸಂಕಲ್ಪಸಿದ್ಧಿ ; ಅಪೇಕ್ಷಿಸಿದ ಸಮಯದಲ್ಲಿ ಮಳೆಯಾಗುವಿಕೆ ಯೆಂಬ ಪ್ರಕಾಮವೃಷ್ಟಿಸಿದ್ಧಿ; ಭೂಮಿಯನ್ನು ಉಳದೇನೆ ಫಲಸಿದ್ಧಿಯಾಗುವಿಕೆಯೆಂಬ ಅಕೃಷ್ಟಪಚ್ಯಸಿದ್ಧಿ; ಕಲ್ಪವೃಕ್ಷಸಿದ್ಧಿಯೆಂಬ ಆಕಲ್ಪವೃಕ್ಷಾತ್ಮಿಕಸಿದ್ಧಿ ; ಇವುಗಳೇ ಅಷ್ಟಸಿದ್ಧಿಗಳೆಂಬುವವು. ಆ ಕಾಲದಲ್ಲಿ ಈ ಬಗೆಯ ಸಿದ್ಧಿಗಳು ಕ್ಷೀಣವಾಗುತ್ತಾ, ಪಾಪಗಳು ಹೆಚ್ಚುತ್ತಾ, ದ್ವಂದ್ವಬಾಧೆಗಳು ಅಧಿಕವಾಗುತ್ತಾ ಬಂದವು ಎಂದು ಅರ್ಥ.

ವಾದ ಜ್ಞಾನಶಕ್ತ್ಯಾದಿಗಳೂ ಮತ್ತು ಕ್ಷುತ್ಪಿಪಾಸಾದಿ ದ್ವಂದ್ವಬಾಧೆಗಳ ಜಯರೂಪವಾಗಿಯೂ, ಭೋಗೇಚ್ಛೆಗಳ ಜಯರೂಪವಾಗಿಯೂ ಆಯುರಾರೋಗ್ಯಾದಿ ವರ್ಧಕಗಳಾಗಿಯೂ, ಆಕಾಶಸಂಚಾರಾದಿ ಕಾಮಚಾರಗಳನ್ನು ಕೊಡತಕ್ಕವುಗಳಾಗಿಯೂ ಇರುವ ವಿಚಿತ್ರವಾದ ರಸಸಿದ್ಧಿಯೇ ಮೊದಲಾದ ಸಿದ್ಧಿಗಳೆಲ್ಲವೂ ಕ್ರಮ ಕ್ರಮವಾಗಿ ಇವರಿಗೆ ತಪ್ಪುತ್ತಾ ಬಂದವು. ಹೀಗೆಯೇ ಸಿದ್ಧಿಗಳು ತಪ್ಪುತ್ತಾ ಪಾಪಕರ್ಮಗಳು ಹೆಚ್ಚುತ್ತಾ ಬರುತ್ತಿರಲು; ಪ್ರಜೆಗಳು ಕ್ಷುತ್ಪಿಪಾಸೆ ಶೀತವಾತವೊದಲಾದವುಗಳನ್ನು ತಾಳಲಾರದೆ ಶೀತೋಷ್ಣಾದಿ ಬಾಧಾನಿವೃತ್ತ್ಯರ್ಥವಾಗಿ ಗೃಹಗಳನ್ನೂ, ಚೋರಾದಿಬಾಧಾನಿವೃತ್ತ್ಯರ್ಥವಾಗಿ ವನಗಿರಿಜಲಾದಿದುರ್ಗಗಳನ್ನೂ, ಯಥೋಚಿತವಾಗಿ ಸ್ವಕರ್ಮಾನುರೂಪವಾಗಿ ಪುರಗ್ರಾಮಶಿಬಿರನಗರಾದಿಗಳನ್ನೂ ಮಾಡಿಕೊಂಡು ಜೀವನೋಪಯೋಗಕ್ಕಾಗಿ ತಮ್ಮ ಕೈಕೆಲಸದಿಂದ ಸಾಧ್ಯವಾದ ಕೃಷಿವಾಣಿಜ್ಯಾದಿಗಳನ್ನು ಮಾಡಲುತೊಡಗಿದರು. ಅಂತ ಕೃಷಿಗಳಿಂದ ಭತ್ತ, ಕಾಡುಭತ್ತ, ಗೋಧಿ, ಹಾರಕ, ಸಾಮೆ, ಯಳ್ಳು, ಉದ್ದು, ಹೆಸರು, ಸಣಬು, ಹುರಳಿ, ತೊಗರಿ, ಕಡ್ಲೆ ಮೊದಲಾದ ಗ್ರಾಮ್ಯಗಳಾಗಿಯೂ ಆರಣ್ಯಗಳಾಗಿಯೂ ಇರತಕ್ಕ ಹದಿನೇಳು ಜಾತಿ ಓಷಧಿ ಫಲಗಳನ್ನು ಅವುಗಳಲ್ಲಿಯೂ ಭತ್ತ, ಗೋಧಿವೆ, ಯಳ್ಳು, ಉದ್ದು, ನವಣೆ, ಹಾರಕ, ಹೆಸರುಮುಂತಾದ ಗ್ರಾಮ್ಯಗಳಾಗಿಯೂ, ಆರಣ್ಯಗಳಾಗಿಯೂ, ಗ್ರಾಮ್ಯಾರಣ್ಯಗಳಾಗಿಯೂ, ಯಜ್ಞೋಪಯೋಗಿಗಳಾಗಿಯೂ ಇರುವ ಈ ಹದಿನಾಲ್ಕು ಜಾತಿ ಓಷಧೀಫಲಗಳನ್ನು ಸುಖವಾಗಿ ಹೊಂದುತ್ತಿದ್ದರು. ಇಂಥಾ ಓಷಧಿಗಳು ಚರುಪುರೋಡಾಶಾದಿಕಾರ್ಯೋಪಯೋಗಿಗಳಾಗಿ ಯಜ್ಞಗಳನ್ನು ಕುರಿತು ಕಾರಣಗಳಾಗಿಯೂ, ಅಂಥಾಯಜ್ಞಗಳು ವೃಷ್ಟಿಮೂಲಕ ಓಷಧಿಗಳಿಗೂ ಕಾರಣಗಳಾಗಿಯೂ, ಪರಸ್ಪರ ಸಾಹ್ಯಕಾರಿಗಳಾಗಿರುವ ಓಷಧಿಯಜ್ಞಗಳೆರಡೂ ಸಹ 'ವೃಷ್ಟೇರನ್ನಂ ತತಃಪ್ರಜಾಃ' ಎಂಬನ್ತೆ ಪ್ರಜೆಗಳಿಗೆ ಕಾರಣಗಳಾಗಿಯೂ ಇರುವದರಿಂದ ಪ್ರಾಜ್ಞರಾದವರು ಅಂಥಾ ವೃಷ್ಟಿಗಳಿಂದ ಲಭಿಸಿದ ಧಾನ್ಯಗಳಿಂದ ಯಜ್ಞಗಳನ್ನು ಮಾಡುತ್ತಿದ್ದರು. ಕಾಲಕೃತವಾದ ಧರ್ಮವೈಷಮ್ಯದಿಂದ ಯಾರಮನಸ್ಸಿನಲ್ಲಿ ತಮೋಗುಣವು ಹೆಚ್ಚಿ ತನ್ಮೂಲಕ ಪಾಪದಲ್ಲಿ ರುಚಿಯೂ

ಧರ್ಮಕಾರ್ಯದಲ್ಲಿ ಅರುಚಿಯೂ ಉಂಟಾಯಿತೋ, ಅಂಥವರು ಕಾಲಕ್ರ
ಮೇಣ ವೇದಗಳನ್ನೂ, ಅಂಥಾ ವೇದಬೋಧಿತವಾದ ಕರ್ಮಗಳನ್ನೂ,
ದೇವತೆಗಳನ್ನೂ ಯಜ್ಞಾದಿಗಳನ್ನೂ ನಿಂದಿಸುತ್ತಾ- ಯಜ್ಞಗಳಿಗೆ
ಅಪಮಾನಾದಿಗಳನ್ನು ಆಚರಿಸುತ್ತಾ- ಕರ್ಮಮಾರ್ಗಗಳನ್ನು ದೂ
ಷಿಸುತ್ತಾ- ದುರಾಚಾರ ಮಾಡುತ್ತಾ- ಕುಟಿಲಾಶಯ ಉಳ್ಳವರಾಗಿ
ಕ್ರಮೇಣ ಯಜ್ಞಮಾರ್ಗಗಳನ್ನು ಖಿಲಮಾಡುತ್ತಾ ಬಂದರು. ಹೀಗೆ
ಜೀವನೋಪಾಯವು ದೊರೆಯಲಾಗಿ, ಬ್ರಹ್ಮನು ಪ್ರಜೆಗಳಿಗೆ ಬ್ರಾಹ್ಮ
ಣಾದಿ ವರ್ಣಗಳಿಗೂ, ಬ್ರಹ್ಮಚರ್ಯಾದ್ಯಾಶ್ರಮಗಳಿಗೂ, ಅವರವರ ಸ
ತ್ವಾದಿ ಗುಣೋದ್ರೇಕಗಳಿಗೂ, ಔಚಿತ್ಯವನ್ನರಿತು ಧರ್ಮಮರ್ಯಾದೆಗಳ
ನ್ನು ಆಯಾಯ ಧರ್ಮಾಚರಣದಿಂದುಂಟಾಗತಕ್ಕ ಲೋಕಗಳನ್ನೂ ಸ
ಹ ಗೊತ್ತುಮಾಡುವವನಾಗಿ ನಿತ್ಯನೈಮಿತ್ತಿಕಾಗ್ನಿಹೋತ್ರಾದಿಕರ್ಮಾ
ನುಷ್ಠಾನವನ್ನು ಮಾಡುವ ಬ್ರಾಹ್ಮಣರಿಗೆ ಪಿತೃಲೋಕವೆಂತಲೂ, ಸ್ವ
ಧರ್ಮನಿರತನಾಗಿ ರಾಜ್ಯರಕ್ಷಣವನ್ನು ಮಾಡಿಕೊಂಡಿರುವ ಕ್ಷತ್ರಿಯರಿ
ಗೆ ಇಂದ್ರಲೋಕವೆಂತಲೂ; ಸ್ವಧರ್ಮನಿರತನಾದ ವೈಶ್ಯನಿಗೆ ದೇವಲೋ
ಕವೆಂತಲೂ, ದ್ವಿಜಗುರುಶುಶ್ರೂಷಾತತ್ಪರನಾಗಿ ಯಜ್ಞೋಪಯೋ
ಗಿಯಾದ ಶೂದ್ರನಿಗೆ ಗಂಧರ್ವಲೋಕವೆಂತಲೂ, ಜಿತೇಂದ್ರಿಯನಾದ ಯ
ತಿಗೂ ಗುರುಕುಲವಾಸಿಯಾಗಿ ನಿಯಮಾಧ್ಯಯನವನ್ನು ಮಾಡುವ ಬ್ರ
ಹ್ಮಚಾರಿಗೂ ಸಹ ತನಗೆ ಅಭಿಮತವಾದ ಎಲ್ಲಾ ಲೋಕವೂ, ವಾನ
ಪ್ರಸ್ಥರಿಗೆ ಸಪ್ತರ್ಷಿಗಳಿರತಕ್ಕ ಲೋಕವೂ, ಸನ್ಯಾಸಿಗೆ ಸತ್ಯಲೋ
ಕವೂ, ಆಶ್ರಮಿಗಳಾಗಿದ್ದರೂ ಯೋಗವಿದ್ಯೆಯಿಂದ ಭಗವಧ್ಯಾನಮಾಡು
ವವರಿಗೆ ಧ್ರುವಲೋಕಕ್ಕಿಂತಲೂ ಮೇಲಾದ ವಿಷ್ಣುಪದವೆಂಬ ಸ್ಥಾನ
ವೂ, ಪರಮೈಕಾಂತಿಗಳಾಗಿ ಸದಾಬ್ರಹ್ಮಸಾಕ್ಷಾತ್ಕಾರಮಾಡತಕ್ಕ ಮ
ಹಾಯೋಗಿಗಳಿಗೆ ಪರಮಪದವೆಂಬ ಸ್ಥಲವೂ, ದೊರೆಯುವದೆಂದು ಏ
ರ್ಪಡಿಸಿದನು. ಧರ್ಮಾಚರಣಗಳಿಂದ ಪ್ರಾಪ್ಯವಾದ ಪಿತೃಲೋಕಮುಂತಾ
ದ ಎಲ್ಲಾ ಲೋಕಗಳೂ ಕೂಡ ನಶ್ವರಗಳಾದ್ದರಿಂದ ಇವುಗಳೆಲ್ಲಕ್ಕಿಂ
ತಲೂ ಭಗವದುಪಾಸನಜನಿತವಾದ ಪರಮಪದಾದಿಸ್ಥಾನಗಳು ಶಾಶ್ವತ
ಗಳಾಗಿಯೂ ನಿತ್ಯಸುಖವುಳ್ಳವುಗಳಾಗಿಯೂ ಇವೆಯಾದ್ದರಿಂದ, ಅಂ
ಥಾ ಸ್ಥಾನಗಳನ್ನು ಪಡೆದವರು ಪುನರಾವೃತ್ತಿಯಿಲ್ಲದಿರುವರಾಗಿ ನಿತ್ಯ

ಸುಖವನ್ನು ಅನುಭವಿಸುತ್ತಾರೆ. ಸ್ವಧರ್ಮತ್ಯಾಗ ಮಾಡಿದವರೂ, ವೇದಾದಿದೂಷಕರೂ, ಯಜ್ಞಘಾತುಕರೂ, ಮರ್ಯಾದೋಲ್ಲಂಘನಮಾಡಿದವರೂ ತಾಮಿಸ್ರ, ಅಂಧತಾಮಿಸ್ರ, ರೌರವ, ಮಹಾರೌರವ, ಅಸಿಪತ್ರವನ, ಇವು ಮುಂತಾದ ಮಹಾಘೋರತರಗಳಾದ ನಿತ್ಯದುಃಖಭೂಯಿಷ್ಠಗಳಾದ ಸ್ಥಾನಗಳನ್ನು ಪಡೆಯುವರು." ಎಂದು ಪರಾಶರಮಹರ್ಷಿಗಳು ಮೈತ್ರೇಯರಿಗೆ ನಿರೂಪಿಸುತ್ತ ಬಂದರು.

ಎಂಬಲ್ಲಿಗೆ ಶ್ರೀವಿಷ್ಣುಪುರಾಣದಲ್ಲಿ ಪ್ರಥಮಾಂಶದ
ಷಷ್ಠಾಧ್ಯಾಯ ಸಮಾಪ್ತ.

## ಏಳನೆಯ - ಅಧ್ಯಾಯ.

ಪರಾಶರರು ಹೇಳುತ್ತಾರೆ:—

"ಕೇಳು, ಮೈತ್ರೇಯನೇ! ಬ್ರಹ್ಮದೇವನು ಸೃಷ್ಟ್ಯರ್ಥವಾಗಿ ಪುನಃ ಧ್ಯಾನಿಸುತ್ತಿರುವಲ್ಲಿ, ಆತನ ಮನಸ್ಸಿನಿಂದ ಕೆಲವು ಪ್ರಜೆಗಳು ಜನಿಸಿದರು. ಆ ಪ್ರಜೆಗಳು, ಹುಟ್ಟುವಾಗ ಬ್ರಹ್ಮದೇವನ ಶರೀರದಲ್ಲಿರತಕ್ಕ ಪಂಚಭೂತಮಯವಾದ ದೇಹಗಳೊಡನೆಯೂ, ಇಂದ್ರಿಯಗಳೊಡನೆಯೂ ಕೂಡಿ ಹುಟ್ಟಿದವರಾದಾಗ್ಯೂ, ಸಂಕಲ್ಪದಿಂದಲೇ ಜನಿಸಿದ್ದರಿಂದ ಮಾನಸ ಸೃಷ್ಟಿಯೆನ್ನಲ್ಪಟ್ಟರು. ಪೂರ್ವದಲ್ಲಿ ಹೇಳಲ್ಪಟ್ಟ ದೇವಾದಿಸ್ಥಾವರಾಂತವಾದ ಪ್ರಜೆಗಳೆಲ್ಲರೂ ಸತ್ವ ರಜಸ್ತಮಸ್ಸುಗಳೆಂಬ ಗುಣತ್ರಯಕ್ಕೆ ಒಳಗಾಗಿವರು. ಹೀಗೆ ಚರಾಚರಾತ್ಮಕವಾದ ಪ್ರಪಂಚವನ್ನ ಸೃಷ್ಟಿಸಿದಾಗ್ಯೂ, ಆ ಪ್ರಜೆಗಳು ಪುತ್ರಪೌತ್ರಾದಿ ಪಾರಂಪರ್ಯದಿಂದ ವೃದ್ಧಿಯನ್ನು ಹೊಂದದೆ ಇದ್ದದ್ದರಿಂದ ಬ್ರಹ್ಮದೇವನು ಯೌನಸೃಷ್ಟಿ ಪ್ರವರ್ತಕರಾದ ಭೃಗು, ಪುಲಸ್ತ್ಯರೇ ಮೊದಲಾದ, ಪ್ರಜಾಸೃಷ್ಟಿ ಮಾಡುವವರಲ್ಲಿ ತನ್ನಂತೆಯೇ ಸಮರ್ಥರಾದ ಒಂಭತ್ತುಮಂದಿ ಮಾನಸಪುತ್ರರನ್ನು ಸೃಷ್ಟಿಸಿದನು. ಅವರಾರೆಂದರೆ— ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗಿರಸ್ಸು, ಮರೀಚಿ, ದಕ್ಷ, ಅತ್ರಿ, ವಸಿಷ್ಠರೆಂಬುವರು. ಈ ಮಾನಸಪುತ್ರರೇ ಪುರಾಣಾದಿ

ಗಳಲ್ಲಿ ನವ ಪ್ರಜೇಶ್ವರರೆಂದು ಪ್ರಸಿದ್ಧಿಯನ್ನು ಹೊಂದಿರುವರು. ಆ ನಂತರದಲ್ಲಿ ಬ್ರಹ್ಮದೇವನು ಖ್ಯಾತಿ, ಭೂತಿ, ಸಂಭೂತಿ, ಕ್ಷಮೆ, ಪ್ರೀತಿ, ಸನ್ನತಿ, ಊರ್ಜೆ, ಅನಸೂಯೆ, ಪ್ರಸೂತಿಗಳೆಂಬ ಈ ಒಂಭತ್ತು ಮಂದಿ ಸ್ತ್ರೀಯರನ್ನು ಸೃಷ್ಟಿಸಿ, ನೀವು ಭೃಗ್ವಾದಿಗಳಿಗೆ ಪತ್ನಿಗಳಾಗಿ ಎಂದು ನೇಮಿಸಿ, ಕ್ರಮವಾಗಿ ಅವರಿಗೆ ಕೊಟ್ಟನು. ಈವರುಗಳಿಗೆ ಪೂರ್ವದಲ್ಲಿಯೇ ಸನಂದನಾದಿ ಮಾನಸಪುತ್ರರು ಸೃಷ್ಟಿಸಲ್ಪಟ್ಟರು. ಅವರು ಪ್ರಜಾಸೃಷ್ಟಿಯಲ್ಲಿ ನಿರಪೇಕ್ಷರಾಗಿ, ಲೋಕವ್ಯಾಪಾರಪ್ರವರ್ತಿಮಾರ್ಗದಲ್ಲಿ ಮನಸ್ಸಿಲ್ಲದೆ ತ್ರಿಕಾಲಜ್ಞಾನವುಳ್ಳವರಾಗಿ, ರಾಗದ್ವೇಷಾದಿಗಳೊಂದೂ ಇಲ್ಲದವರಾಗಿ, ಬಾಲ್ಯದಲ್ಲೇ ವಿರಕ್ತಿಯಿಂದ ಬ್ರಹ್ಮಜ್ಞಾನನಿಷ್ಠರಾಗಿ, ವಿಮತ್ಸರರಾಗಿ, ನಿವೃತ್ತಿ ಮಾರ್ಗಪರರಾಗಿರಲು ; ತನ್ನ ಪುತ್ರರಾದ ಸನಂದನಾದಿಗಳೂ ಹೀಗೆ ಪ್ರಜಾಸೃಷ್ಟಿಯಲ್ಲಿ ವಿಮುಖರಾಗಿರುವುದನ್ನು ನೋಡಿ, ಬ್ರಹ್ಮದೇವನಿಗೆ ಮೂರು ಲೋಕವನ್ನೂ ದಹಿಸುವ ಸಾಮರ್ಥ್ಯವುಳ್ಳ ಕೋಪಾಗ್ನಿ ಉಂಟಾಗಲಾಗಿ, ಮೂರು ಲೋಕಗಳೂ ಆ ಜ್ವಾಲಾಸಮೂಹದಿಂದ ತಪಿಸುವಂತಾದ್ದಾಯಿತು. ಆ ಸಮಯದಲ್ಲಿ ಉರಿಗೊಂಡ ಹುಬ್ಬು ಗಂಟಿಕ್ಕಿರುವ ಬ್ರಹ್ಮದೇವನ ಲಲಾಟಪ್ರದೇಶದಿಂದ ಮಧ್ಯಾಹ್ನ ಸೂರ್ಯನಂತೆ ಜಾಜ್ವಲ್ಯಮಾನನಾದ ರುದ್ರನು ಹುಟ್ಟಿದನು. ಈ ಪ್ರಕಾರದಲ್ಲಿ ಜನಿಸಿದ ರುದ್ರನು ಅರ್ಧನಾರೀಶ್ವರಶರೀರನಾಗಿ, ಕೋಪದಿಂದ ಅತ್ಯುಗ್ರನಾಗಿ, ಭಯಂಕರರೂಪನಾಗಿ ಆವಿರ್ಭವಿಸುತ್ತಿರಲಾಗಿ ; ಆತನನ್ನು ನೋಡಿ, ಬ್ರಹ್ಮದೇವನು – ನಿನ್ನ ದೇಹದಲ್ಲಿ ಅರ್ಧಭಾಗ ಸ್ತ್ರೀಯನ್ನಾಗಿಯೂ, ಮಿಕ್ಕ ಅರ್ಧಭಾಗ ಪುರುಷನನ್ನಾಗಿಯೂ ವಿಭಾಗಿಸಿಕೊಂಡು, ಸ್ತ್ರೀತ್ವಪುರುಷತ್ವಗಳೆಂಬ ಭೇದದಿಂದ ಆತ್ಮವನ್ನು ವಿಂಗಡಿಸು,ಎಂದು ಹೇಳಿ, ಅಂತರ್ಧಾನವನ್ನೈದಿದನು. ಹೀಗೆ ಬ್ರಹ್ಮದೇವನಿಂದ ನುಡಿಯಲ್ಪಟ್ಟ ಆ ರುದ್ರನು ತಾನೇ ಸ್ತ್ರೀತ್ವವನ್ನೂ ಪುಂಸ್ತ್ವವನ್ನೂ ಎರಡು ಭಾಗದಲ್ಲಿ ಧರಿಸಿದವನಾಗಿ, ಪುರುಷಶರೀರದಲ್ಲಿ ಹನ್ನೊಂದುತೆರನಾಗಿಯೂ, ಸ್ತ್ರೀಭಾಗಶರೀರವನ್ನೂ ಸಾಮ್ಯಾಸಾಮ್ಯ ಮುಂತಾದ ನಾನಾಸ್ವರೂಪವಾಗಿಯೂ ವಿಭಾಗವನ್ನು ಮಾಡಿದನು. ಹೀಗೆ ಅನೇಕತೆರನಾಗಿ ವಿಭಾಗಿಸಿದ್ದರಿಂದ ಬ್ರಹ್ಮದೇವನ ಕೋಪವು ಶಾಂತವಾಯಿತು.

ಆ ರುದ್ರಸೃಷ್ಟ್ಯನಂತರದಲ್ಲಿ ಪ್ರಜಾಸೃಷ್ಟಿಗೆ ಪೂರ್ವಕಾಲದಲ್ಲಿ ಬ್ರ
ಹ್ಮದೇವನು ತನ್ನ ಶರೀರದಿಂದ ಮಾನಸಸೃಷ್ಟಿಕಾಲದಲ್ಲಿ ಹುಟ್ಟಿದುದಂ
ಥ ಸಾತ್ವಿಕಸ್ವಭಾವವುಳ್ಳ ಸ್ವಾಯಂಭುವನೆಂದು ಕರೆಯಲ್ಪಟ್ಟ ಮನು
ವನ್ನು ಕರೆದು, ಅವನನ್ನು ತಾನೆಂದೇ ಭಾವಿಸಿ, ಪ್ರಜಾಸೃಷ್ಟಿಕಾರ್ಯ
ದಲ್ಲಿ ನಿಯೋಗಿಸಿದನು. ಆ ಸ್ವಾಯಂಭುವಮನುವು ತನ್ನೊಡನೆ ಜ
ನಿಸಿದಂಥ ಶತರೂಪೆಯೆಂದು ಹೆಸರುಳ್ಳವಳಾಗಿ, ತಪಸ್ಸಿನಿಂದ ನಿರ್ಧೂ
ತ ನಿಖಿಲದೋಷೆಯಾದ ಸ್ತ್ರೀಯನ್ನು ಪರಿಗ್ರಹಿಸಿದನು. ಈ ಮನು
ವಿನಿಂದ ಶತರೂಪೆಯಲ್ಲಿ ಪ್ರಿಯವ್ರತ ಉತ್ತಾನಪಾದರೆಂಬ ಇಬ್ಬರು
ಪುತ್ರರೂ ಪ್ರಸೂತಿ ಆಕೂತಿಯರೆಂಬ ಕನ್ಯಾದ್ವಯವೂ ಹುಟ್ಟಿದರು.
ಸೌಂದರ್ಯಾದಿಗುಣಸಂಪನ್ನೆಯರಾದ ಆ ಪುತ್ರಿಯರೊಳಗೆ ಪ್ರಸೂತಿ
ಯನ್ನು ದಕ್ಷಪ್ರಜಾಪತಿಗೂ, ಆಕೂತಿಯನ್ನು ರುಚಿಯೆಂಬಾತನಿಗೂ
ಮದುವೆಮಾಡಿ ಕೊಟ್ಟನು. ರುಚಿಯು ಆಕೂತಿಯನ್ನು ಪರಿಗ್ರಹಿಸಿ
ಅವಳಲ್ಲಿ ಯಜ್ಞನೆಂಬ ಒಬ್ಬ ಪುರುಷನನ್ನೂ ದಕ್ಷಿಣೆಯೆಂಬ ಒಬ್ಬ
ಸ್ತ್ರೀಯನ್ನೂ ಮಿಥುನವಾಗಿ ಪಡೆದನು. ಆ ಯಜ್ಞನ ದೆಸೆಯಿಂದ
ದಕ್ಷಿಣಾದೇವಿಯಲ್ಲಿ 'ಯೂಮರು' ಯೆಂದು ಪ್ರಸಿದ್ಧರಾದ ಹನ್ನೆರಡು
ಮಂದಿ ದೇವತೆಗಳು ಆ ಸ್ವಾಯಂಭುವ ಮನ್ವಂತರದಲ್ಲಿ ಜನಿಸಿದರು.
ಆ ಪ್ರಸೂತಿಯಲ್ಲಿ ದಕ್ಷಪ್ರಜಾಪತಿಯು ಇಪ್ಪತ್ತುನಾಲ್ಕು ಕುಮಾರ
ತಿಯರನ್ನು ಪಡೆದನು. ಆ ಕನ್ಯಕೆಗಳೊಳಗೆ ಶ್ರದ್ಧೆ, ಲಕ್ಷ್ಮೀ, ಧೃತೀ,
ತುಷ್ಟೀ, ಪುಷ್ಟೀ, ಮೇಧೆ, ಕ್ರಿಯೆ, ಬುದ್ಧೀ, ಲಜ್ಜೇ, ವಪುಸ್ಸು,
ಶಾಂತೀ, ಸಿದ್ಧೀ, ಕೀರ್ತೀ, ಎಂಬ ಈ ಹದಿಮೂರು ಕನ್ಯಕೆಗಳನ್ನು ಧ
ರ್ಮನೆಂಬ ಬ್ರಹ್ಮನ ಮಾನಸಪುತ್ರನು ಪತ್ನಿಗಳಾಗಿ ಪರಿಗ್ರಹಿಸಿದನು.
ಇವರ ತಂಗಿಯರೊಳಗೆ ಖ್ಯಾತಿಯನ್ನು ಭೃಗುವೂ, ಸತಿಯೆಂಬವಳನ್ನು
ಭವನೂ, ಸಂಭೂತಿಯೆಂಬವಳನ್ನು ಮರೀಚಿಯೂ, ಸ್ಮೃತಿಯೆಂಬವ
ಳನ್ನು ಅಂಗಿರಸನೂ, ಪ್ರೀತಿಯೆಂಬವಳನ್ನು ಪುಲಸ್ತ್ಯನೂ, ಕ್ಷಮೆ
ಯೆಂಬವಳನ್ನು ಪುಲಹನೂ, ಸನ್ನತಿಯೆಂಬವಳನ್ನು ಕ್ರ
ತುವೂ, ಅನಸೂಯೆಯೆಂಬವಳನ್ನು ಅತ್ರಿಮಹರ್ಷಿಯೂ, ಊರ್ಜೆ
ಯೆಂಬುವಳನ್ನು ವಸಿಷ್ಠನೂ, ಸ್ವಾಹೆ ಯೆಂಬುವಳನ್ನು ಅಗ್ನಿಯೂ,
ಸ್ವಧೆಯೆಂಬವಳನ್ನು ಪಿತೃದೇವತೆಗಳೂ, ಪತ್ನ್ಯರ್ಥವಾಗಿ ಪರಿಗ್ರಹಿ

ಸಿದರು. ಇವರಲ್ಲಿ ಶ್ರದ್ಧೆ ಯೆಂಬವಳು ಕಾಮನೆಂಬ ಮಗನನ್ನೂ, ಲಕ್ಷ್ಮಿಯು ದರ್ಪನೆಂಬುವ ಮಗನನ್ನೂ, ಧೃತಿಯು ನಿಯಮನೆಂಬುವನನ್ನೂ, ತುಷ್ಟಿಯು ಸಂತೋಷನೆಂಬುವನನ್ನೂ, ಪುಷ್ಟಿಯುಲೋಭನೆಂಬುವನನ್ನೂ, ಮೇಧೆಯು ಶ್ರುತನೆಂಬುವನನ್ನೂ, ಕ್ರಿಯೆಯು ದಂಡ ನಯ ವಿನಯರೆಂಬ ಮೂರುಕುಮಾರರನ್ನೂ, ಬುದ್ಧಿಯು ಬೋಧನೆಂಬುವನನ್ನೂ, ಲಜ್ಜೆಯು ವಿನಯನನ್ನೂ, ವಪುಸ್ಸೆಂಬುವಳು ವ್ಯವಸಾಯನೆಂಬ ಮಗನನ್ನು, ಶಾಂತಿಯುಕ್ಷಮನನ್ನೂ, ಸಿದ್ಧಿಯು ಸುಖನೆಂಬವನನ್ನೂ, ಕೀರ್ತಿಯು ಯಶಸ್ಸೆಂಬಮಗನನ್ನೂ, ಆಧರ್ಮನೆಂಬಾತನ ದೆಶೆಯಿಂದ ಪಡದವರಾದರು. ಇವರು ಧರ್ಮನಪುತ್ರರು. ಶ್ರದ್ಧಾದೇವಿಯುಮಗನಾದ ಕಾಮನಿಂದರತಿಯು ಹರುಷನೆಂಬ ಮಗನನ್ನು ಪಡೆದಳು. ಇವನು ಧರ್ಮಂಗೆ ಪೌತ್ರನು. ಅಧರ್ಮನೆಂಬ ಬ್ರಹ್ಮದೇವನ ಮಾನಸಪುತ್ರನು ಹಿಂಸೆಯೆಂಬ ತನ್ನ ಭಾರ್ಯೆಯಲ್ಲಿ ಅನೃತನೆಂಬ ಪುತ್ರನನ್ನೂ ವಂಚನೆಯೆಂಬ ಪುತ್ರಿಯನ್ನೂ ಪಡದನು. ಆ ಅನೃತವಂಚನೆಗಳೆಂಬ ದಂಪತಿಗಳು ಭಯನರಕರೆಂಬ ಇಬ್ಬರುಪುತ್ರರನ್ನು ಪಡದು, ಈ ಭಯನರಕರಿಗೆ ವಿವಾಹಾರ್ಥವಾಗಿಯೇ ಮಾಯೇವೆದನೆಗಳೆಂಬ ಪುತ್ರಿಯರನ್ನುಸೃಷ್ಟಿಸಿ, ಮಾಯೆಯೆಂಬುವಳನ್ನು ಭಯನಿಗೂ ವೇದನೆಯೆಂಬುವಳನ್ನು ನರಕನಿಗೂ ಕೊಟ್ಟುವಿವಾಹ ಮಾಡಿದರು. ಭಯನದೆಶೆಯಿಂದ ಮಾಯೆಯು ಸರ್ವಭೂತಹಾರಿಯಾದಮೃತ್ಯುವೆಂಬ ಪುತ್ರನನ್ನೂ, ವೇದನೆಯು ನರಕನ ದೆಶೆಯಿಂದ ದುಃಖನೆಂಬ ಪುತ್ರನನ್ನು ಪಡೆವಳು. ಆಮೃತ್ಯುವಿಗೆ ವ್ಯಾಧಿಯೆಂಬ ಮಗನೂ, ಜರೆಯೆಂಬ ಕನ್ಯೆಯೂ, ಶೋಕನೆಂಬ ಮಗನೂ, ತೃಷ್ಣೆಯೆಂಬ ಮಗಳೂ, ಕ್ರೋಧನೆಂಬ ಮಗನೂ-ಇವರೈದು ಮಂದಿಯು ಜನಿಸಿದರು. ವ್ಯಾಧ್ಯಾದಿಗಳಾದ ಈ ಅಧರ್ಮನ ವಂಶದವರೆಲ್ಲರೂ ದುಃಖಭೂಯಿಷ್ಠರಾಗಿಯೂ, ಅಧರ್ಮಸ್ವರೂಪಗಳಾಗಿಯೂ ಇರುವರು. ಇವರು ಕಡೆಗೆ ದುಃಖ ಮಾತ್ರಫಲಕಗಳಾದ್ದರಿಂದಲೂ, ಕಾರ್ಯಾಂತರೋತ್ಪಾದಕಗಳಲ್ಲವಾದ್ದರಿಂದಲೂ ಒಂದೇ ವಿಧವಾಗಿರುವರು. ಇವರುಗಳಿಗೆ ಪುತ್ರಾದಿಗಳಿಲ್ಲ, ಇವರು ಊರ್ಧ್ವರೇತಸ್ಸುಗಳು. ರುದ್ರಸೃಷ್ಟಿಗೆ ಒಳಪಟ್ಟ ಇವರುಗಳೆಲ್ಲರೂ ತಾಮಸರು. ಲೋಕದ ನಿತ್ಯ ಪ್ರಳಯಕ್ಕೆ ಕಾರಣ

ಭೂತರು. ಮತ್ತು ದಕ್ಷನು, ಮರೀಚಿ, ಅತ್ರಿಯು, ಭೃಗು ಮೊದಲಾದ ಪ್ರಜೇಶ್ವರರುಗಳು ಈ ಜಗತ್ತಿನ ನಿತ್ಯಸರ್ಗಕ್ಕೆ ಕಾರಣಭೂತರುಗಳು. ಇನ್ನು ಮನುಗಳು ಮನುಪುತ್ರರುಗಳು, ವೀರ್ಯಧನರಾದ ಸನ್ಮಾರ್ಗವರ್ತಿಗಳಾದ ರಾಜರುಗಳು ನಿತ್ಯಸ್ಥಿತಿಗೆ ಕಾರಣರಾಗಿರುವರು" ಎನ್ನಲು ;

ಅದಕ್ಕೆ ಮೈತ್ರೇಯರು 'ಸ್ವಾಮೀ, ನಿತ್ಯಸರ್ಗವೆಂದೂ, ನಿತ್ಯಸ್ಥಿತಿಯೆಂದೂ, ನಿತ್ಯಪ್ರಳಯವೆಂದೂ ತಾವು ನಿರೂಪಿಸಿದ ಅಂಶವನ್ನು ವಿಸ್ತಾರದಿಂದ ನಿರೂಪಿಸಬೇಕು' ಎಂದು ಕೇಳಲಾಗಿ ; ಪರಾಶರರು ಹೇಳುತ್ತಾರೆ:—

"ಕೇಳು, ಮೈತ್ರೇಯನೇ, ಷಡ್ಗುಣೈಶ್ವರ್ಯಸಂಪನ್ನನಾದ ಪರಮಾತ್ಮನು ಸರ್ಗಸ್ಥಿತಿವಿನಾಶಗಳನ್ನು ಮಾಡುತ್ತಿರುವನು. ಆಯಾ ರೂಪಗಳಿಂದ ಚಿಂತಿಸಲಶಕ್ಯನಾಗಿ ವ್ಯಾಪಕನಾದ ವಿಷ್ಣುವೇ ಜಗತ್ಸರ್ಗಾದಿ ಲೀಲೆಗಳನ್ನು ಮಾಡುವವನು. ಅದರಲ್ಲಿ ನಿತ್ಯಪ್ರಳಯ, ನೈಮಿತ್ತಿಕಪ್ರಳಯ, ಪ್ರಾಕೃತಪ್ರಳಯ, ಆತ್ಯಂತಿಕಪ್ರಳಯ ವೆಂದು ಪ್ರಳಯ ನಾಲ್ಕುಪ್ರಕಾರ. ಅದರಲ್ಲಿ ಬ್ರಹ್ಮದೇವನು ರಾತ್ರಿಯಲ್ಲಿ ಯಾವಾಗ ಮಲಗುತ್ತಾನೋ, ಆಸಮಯದಲ್ಲಿ ಆಗುವಪ್ರಳಯವೇ ನೈಮಿತ್ತಿಕಪ್ರಳಯವು. ಈಬ್ರಹ್ಮಾಂಡವು ಯಾವ ಪ್ರಳಯದಲ್ಲಿ ಅಜಿತತ್ವವಾದ ಪ್ರಕೃತಿಯಲ್ಲಿ ಲೀನವಾಗುತ್ತದೋ, ಆ ಪ್ರಳಯವೇ ಪ್ರಾಕೃತಪ್ರಳಯವು. ಯೋಗಿಗಳು ತಮ್ಮಯೋಗಜ್ಞಾನಮಹಿಮೆಯಿಂದ ಪರಮಾತ್ಮನ ಸಾರೂಪ್ಯವನ್ನು ಯಾವ ಸಮಯದಲ್ಲಿ ಪಡೆಯುತ್ತಾರೋ, ಅದು ಆತ್ಯಂತಿಕ ಪ್ರಳಯವು. ದಿವಾರಾತ್ರಿಯಲ್ಲಿಯೂ ಪ್ರಾಣಿಗಳಿಗೆ ಆಗುವ ಮರಣಗಳೇಗ ನಿತ್ಯಪ್ರಳಯವು. ಸೃಷ್ಟಿಯು– ಪ್ರಾಕೃತ ಸೃಷ್ಟಿ, ನೈಮಿತ್ತಿಕ ಸೃಷ್ಟಿ, ನಿತ್ಯಸೃಷ್ಟಿಯೆಂದು ಮೂರುವಿಧ. ಅದರಲ್ಲಿ ಬ್ರಹ್ಮದೇವನ ಅವಸಾನದಲ್ಲಿ ಬ್ರಹ್ಮಾಂಡ ಕಟಾಹಗಳು ಪ್ರಕೃತಿಯಲ್ಲಿ ಲೀನವಾಗಿ, ಪರಮಾತ್ಮನ ಲೀಲಾವಿಭೂತಿಯಿಲ್ಲದೆ ಇರುವ ದೆಶೆಯಲ್ಲಿ ಪುನಃ ಸೃಷ್ಟಿಯಲ್ಲಿ ಸಂಕಲ್ಪಿಸಿ, ಪಂಚೀಕರಣವಿಭಾಗ ಪೂರ್ವಕವಾಗಿ ಅಂಡಸೃಷ್ಟಿ ಚತುರ್ಮುಖಸೃಷ್ಟಿ ಮೊದಲಾದ ಸೃಷ್ಟಿಯು ಪ್ರಾಕೃತಸೃಷ್ಟಿಯೆನ್ನಿಸಿಕೊಂಬುದು. ಬ್ರಹ್ಮದೇವನ ಪ್ರತಿದಿನಗಳಲ್ಲಿ ಯುಂಟಾದ ಸೃಷ್ಟಿಯು ನೈಮಿತ್ತಿಕವೆಂಬುದು. ನಿತ್ಯ

ಪಲ್ಲಿಯೂ ಪ್ರಾಣಿಗಳನ್ನು ಸೃಷ್ಟಿಸುವದು ನಿತ್ಯಸೃಷ್ಟಿ ಯೆಂಬುದು. ಈ ಪ್ರಕಾರದಲ್ಲಿ ಮನ್ವಾದಿ ಸರ್ವಶರೀರಗಳಲ್ಲಿ ಭಗವಂತನಾದ ವಿಷ್ಣುವು ಇದ್ದುಕೊಂಡು ಜಗತ್ತಿನ ಸೃಷ್ಟಿಸ್ಥಿತಿಸಂಹಾರಗಳನ್ನು ಮಾಡುತ್ತಿರುವನು. ಕೇಳು, ಮೈತ್ರೇಯನೇ, ಸಮಸ್ತಪ್ರಾಣಿಗಳ ಸೃಷ್ಟಿಸ್ಥಿತಿಸಂಹಾರಕಾರಣಗಳಾದ ಈವೈಷ್ಣವಶಕ್ತಿಗಳು ಆ ವಿಷ್ಣುವಿನ ಸಂಕಲ್ಪಾಧೀನಗಳಾಗಿ ದಿವಾರಾತ್ರಿಯಲ್ಲಿ ಪ್ರಾಣಿಗಳಲ್ಲಿ ಪ್ರವರ್ತಿಸುತ್ತಿರುವವು. ಈ ಶಕ್ತಿಗಳು ಸತ್ವಾದಿಗುಣತ್ರಯಾತ್ಮಕವಾದವುಗಳು. ಈ ಗುಣತ್ರಯಾತ್ಮಕವಾದ ಶಕ್ತಿತ್ರಯವನ್ನು ಯಾವಪುರುಷನು ಅತಿಕ್ರಮಿಸಿ ಪರಮಸ್ಥಾವನ್ನು ಐದುತ್ತಿರುವನೋ, ಆತನು ಜನನ ಮರಣಾದ್ಯನಾದಿ ಪ್ರವಾಹವನ್ನೈದದೆ ಇರುವನು. " ಎಂದು, ಪರಾಶರರು ಮೈತ್ರೇಯರಿಗೆ ನಿರೂಪಿಸಿದರು.

ಎಂಬ ಬಳಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದ
ಸಪ್ತಮಾಧ್ಯಾಯ ಸಂಪೂರ್ಣ.

---

## ಎಂಟನೆಯ — ಅಧ್ಯಾಯ

---

ಪರಾಶರನು ಹೇಳುತ್ತಾರೆ:—

" ಮಹಾಮುನಿಯಾದ ಮೈತ್ರೇಯನೇ, ಇಷ್ಟುಪರ್ಯಂತರವು ನಿನಗೆ ತಾಮಸಸೃಷ್ಟಿಪ್ರಕಾರವನ್ನು ವಿಸ್ತರಿಸಿದೆವು. ಇನ್ನುಮೇಲೆ ರುದ್ರಸೃಷ್ಟಿಯನ್ನು ವಿಸ್ತರಿಸಿ ಹೇಳುತ್ತಲಿದ್ದೇವೆ, ಕೇಳು. ವರಾಹಕಲ್ಪದ ಆದಿಯಲ್ಲಿ ಬ್ರಹ್ಮದೇವನು ತನಗೆ ಸಮಾನನಾದ ಕುಮಾರನಾಗಬೇಕೆಂದು ಧ್ಯಾನವನ್ನು ಮಾಡುತ್ತಿರುವ ಸಮಯದಲ್ಲಿ ಸಮರ್ಥನಾದ ಬ್ರಹ್ಮದೇವನತೊಡೆಯಿಂದ ಕೃಷ್ಣಲೋಹಿತವರ್ಣನಾದ ಕುಮಾರನು ಆವಿರ್ಭವಿಸಿದನು. ಆ ಕುಮಾರನು ಕೂಗಿ ಅತ್ತಂಥಾವನಾದನು. ಅಳುವ ಆ ಕುಮಾರನನ್ನು ನೋಡಿ, ಏನುಕಾರಣ ಅಳುತ್ತಿದ್ದೀಯೇ? ಎಂದು ಕೇಳುವಲ್ಲಿ, ನನಗೆ ಹೆಸರು ಕೊಡಿ ಯೆಂದು ಕೇಳುತ್ತಿರಲಾಗಿ, ಕೇಳು ಮಗನೆ, ನಿನ್ನ ಹೆಸರು ರುದ್ರನು. ನೀನು ರೋದನಮಾಡಿ

ದ್ದರಿಂದಲೂ, ಓಡಿ ಹೋದದ್ದರಿಂದಲೂ ರುದ್ರನಾಮಕನು. ಇನ್ನು ಅಳಬೇಡ. ಧೈರ್ಯವನ್ನು ಆಶ್ರಯಿಸು ಎಂದು ಹೇಳಿದಾಗ್ಯೂ, ಏಳು ಸಾರಿ ಅತ್ತದ್ದರಿಂದ ಬೇರೇ ಏಳು ವಿಧವಾದ ನಾಮಗಳನ್ನು ಕೊಟ್ಟು, ಮೊದಲನೆಯ ರುದ್ರನು ಸಹವಾಗಿ ಅಷ್ಟಮೂರ್ತಿಗಳಿಗೂ ಎಂಟು ಸ್ಥಾನಗಳನ್ನು ಕೊಟ್ಟು, ಈ ಯೆಂಟುಮಂದಿಗೂ ಪತ್ನೀಪುತ್ರರುಗಳನ್ನು ಕೊಟ್ಟನು. ಆ ಹೆಸರುಗಳು ಯಾವವೆಂದರೆ:—ಭವನು, ಶರ್ವನು, ಈಶಾನನು, ಪಶುಪತಿಯು, ಭೀಮನು, ಉಗ್ರನು, ಮಹಾದೇವನು ಯೆಂಬುವವು. ಈ ಹೆಸರುಗಳಿಂದ ಬ್ರಹ್ಮದೇವನು ಕರೆದದ್ದರಿಂದ ಅವುಗಳೇ ಅವನಿಗೆ ನಾಮಗಳಾದವು. ಅಷ್ಟುಮಾತ್ರವೇ ಅಲ್ಲ. ಈ ಯೆಂಟು ಮಂದಿಗೂ ಯೆಂಟುಸ್ಥಾನಗಳನ್ನೂ ಕೊಟ್ಟನು. ಆ ಸ್ಥಾನಗಳು ಯಾವವೆಂದರೆ:—ಸೂರ್ಯನು, ಉದಕವು, ಭೂಮಿ, ಅಗ್ನಿ, ವಾಯು, ಆಕಾಶ, ದೀಕ್ಷಿತ, ಬ್ರಾಹ್ಮಣ, ಸೋಮ ಎಂಬುವುಗಳು. ಇವೇ ಮೂರ್ತಿಗಳು. ಮತ್ತು ಇವರುಗಳಿಗೆ ಪತ್ನಿಗಳು ಯಾರೆಂದರೆ:— ಸುವರ್ಚಲೆ, ಉಷೆ, ಶಿವೆ, ಸ್ವಾಹೆ, ದಿಕ್ಕುಗಳು, ದೀಕ್ಷೆ, ರೋಹಿಣಿ, ಸುಕೇಶಿಯೆಂಬಇವರುಗಳು ಅಷ್ಟಮೂರ್ತಿಗಳಿಗೆ ಸ್ತ್ರೀಯರುಗಳು, ಸೂರ್ಯಾದಿಗಳಿಗೆ ಯಥಾಕ್ರಮವಾಗಿ ಪತ್ನಿಗಳು. ಮತ್ತು ಈ ದಂಪತಿಗಳಿಗೆ ಪುತ್ರ ಪೌತ್ರರುಗಳ ಹೆಸರನ್ನು ಕೇಳು. ಇವರುಗಳ ಪುತ್ರ ಪೌತ್ರ ಪೌತ್ರ ಪ್ರಪೌತ್ರರುಗಳಿಂದ ಈ ಜಗತ್ತು ಸಮೃದ್ಧವಾಯಿತು. ಅವರುಗಳು ಯಾರೆಂದರೆ—ಶನೈಶ್ಚರನು, ಶುಕ್ರನು, ಅಂಗಾರಕನು, ಮನೋಜವನು, ಸ್ಕಂದನು, ಸರ್ಗನು, ಸಂತಾನನು, ಬುಧನು, ಕ್ರಮವಾಗಿ ಅಷ್ಟಮೂರ್ತಿಗಳಿಗೆ ಪುತ್ರರು. ಈ ಪ್ರಕಾರದಲ್ಲಿ ಅಷ್ಟಮೂರ್ತ್ಯಾತ್ಮಕನಾದ ರುದ್ರನು ದಕ್ಷಪ್ರಜಾಪತಿಕುಮಾರತಿಯಾದ ಸತೀದೇವಿಯನ್ನು ವಿವಾಹ ಮಾಡಿಕೊಂಡನು. ಆ ಸತಿದೇವಿಯು ದಕ್ಷಪ್ರಜಾಪತಿಯ ವಿಷಯವಾದ ಕೋಪದಿಂದ ತನ್ನ ದೇಹವನ್ನು ಬಿಟ್ಟಳು. ಆ ಕನ್ಯೆಯೇ ಹಿಮವಂತನ ಕುಮಾರತಿಯಾಗಿ ಮೇನಕಾದೇವಿಯಲ್ಲಿ ಜನಿಸಿದವಳಾದಳು. ಅದೇಪ್ರಕಾರದಲ್ಲಿ ಅನನ್ಯಾರ್ಹೆಯಾಗಿದ್ದ ಆ ಉಮಾದೇವಿಯನ್ನು ರುದ್ರನು ವಿವಾಹವಂಮಾಡಿಕೊಂಡನು ಭೃಗುವಿನ ದೆಶೆಯಿಂದ ಖ್ಯಾತಿಯು ಧಾತೃವಿಧಾತೃಗಳೆಂಬ ದೇವತೆಗಳನ್ನೂ, ನಾರಾಯಣನಿಗೆ ಪತ್ನಿಯಾದ ಶ್ರೀದೇವಿಯನ್ನೂ ಪಡೆದಳು. ”

ಈ ಪ್ರಕಾರ ನಾರಾಯಣನ ಪತ್ನಿಯಾದ ಶ್ರೀದೇವಿಯು ಭೃಗು ಪತ್ನಿಯಾದ ಖ್ಯಾತಿಯಲ್ಲಿ ಅವತಾರವನ್ನು ಮಾಡಿದಳೆಂದು ಕೇಳಿ, ಮೈತ್ರೇಯರು ಪರಾಶರರನ್ನು ಕುರಿತು– ಕ್ಷೀರಾಬ್ಧಿಯಲ್ಲಿ ಅಮೃತ ಮಥನದಲ್ಲಿ ಶ್ರೀದೇವಿಯು ಅವತಾರವಂ ಮಾಡಿದಳು ಎಂಬುವದು ಕೇಳಲ್ಪಡುತ್ತಲಿದ್ದೀತು. ಭೃಗುಪತ್ನಿಯಾದ ಖ್ಯಾತಿಯಲ್ಲಿ ಹ್ಯಾಗೆ ಅವಳು ಆವಿರ್ಭವಿಸಿದಳು ನಿರೂಪಿಸಬೇಕು ಎಂದು ಪ್ರಶ್ನೆಯಂ ಮಾಡಲು; ಪರಾಶರು ಇಂತೆಂದರು:—

ಕೇಳು, ಮೈತ್ರೇಯ, ನಾರಾಯಣನ ಪತ್ನಿಯಾದ ಶ್ರೀದೇವಿಯು ಅವತಾರವ ಮಹಿಮೆಯು ಹ್ಯಾಗೆಂದು ಕೇಳಿದೆ. ಅದನ್ನು ಕೇಳು. 'ದೇವದೇವೋಹರಿಃಪಿತಾ' ಎಂಬಂತೆ ಚೇತನಾ ಚೇತನಗಳಿಗೆ ಹ್ಯಾಗೆ ಹರಿಯು ತಂದೆಯೋ ಹಾಗೆ ಜಗತ್ತಿಗೆ ಮಾತೃವಾದ, ಶ್ರೀದೇವಿಯು ನಿತ್ಯೆಯು. ಈ ಶ್ರೀದೇವಿಗೂ ಆವಿರ್ಭಾವ ತಿರೋಭಾವಗಳು ವಿಷ್ಣುವಿಗೆ ಹ್ಯಾಗೋ, ಹಾಗೆ ಉಂಟು. ಹ್ಯಾಗೆ ವ್ಯಾಪಕಶೀಲನಾದ ವಿಷ್ಣುವು ಸರ್ವತ್ರವ್ಯಾಪಿಯೋ, ಹಾಗೆ ಈ ಶ್ರೀದೇವಿಯು ಆತನ ಸಂಗಡಲೇ ವ್ಯಾಪನಶೀಲೆಯು. ಅಂಥಾ ಶ್ರೀದೇವಿಯು ಭೃಗುವಿಗೆ ಖ್ಯಾತಿಯಲ್ಲಿ ಆವಿರ್ಭವಿಸಿದಳು. ಅನಂತರದಲ್ಲಿ ದುರ್ವಾಸನ ಶಾಪದಿಂದ ಇಂದ್ರನಿಗೆ ತ್ರೈಲೋಕ್ಯೈಶ್ವರ್ಯವು ನಷ್ಟವಾಗುತ್ತಿರಲಾಗಿ, ಸಮುದ್ರಮಥನದಲ್ಲಿ ಆವಿರ್ಭವಿಸಿದಳು. ಅದುಕಾರಣ ಭಗವದಿಚ್ಛಾನುಗುಣವಾದ ಆವಿರ್ಭಾವಗಳಿಂದ ವಿರೋಧವಿಲ್ಲ. ಆದರೇ ಕೇಳು, ಭಗವಂತನಾದ ಸರ್ವೇಶ್ವರನು ವಿಭುತ್ವಮಹಿಮೆಯಿಂದ ಹ್ಯಾಗೆ ಸರ್ವಗತನೊ, ಹಾಗೆಯೇ ವಿಭುತ್ವದಿಂದ ಶ್ರೀದೇವಿಯುಾ ಸಂಗಡಲೇ ಸರ್ವಗತಗಳು. ಆದಕಾರಣ ಲಕ್ಷ್ಮೀ ನಾರಾಯಣ ಮಿಥುನಕ್ಕೆ ಸರ್ವಾತ್ಮಕತ್ವವೂ, ಅನಪಾಯತ್ವವೂ, ಸತ್ಯಜ್ಞಾನಾದಿ ಕಲ್ಯಾಣಗುಣತ್ವವೂ ಪ್ರತಿಪಾದಿಸಲ್ಪಡುತ್ತಲಿದ್ದೀತು. ಅದನ್ನು ಕೇಳು. ಸರ್ವಶಬ್ದವಾಚ್ಯವಾದ ಅರ್ಥವೇ ವಿಷ್ಣುವು, ವಾಗ್ರೂಪವಾದ ವಾಣಿಯೇ ಶ್ರೀದೇವಿಯು. ನೀತಿಶಾಸ್ತ್ರವೇ ಶ್ರೀದೇವಿಯು, ನ್ಯಾಯಶಾಸ್ತ್ರವೇ ವಿಷ್ಣುವು. ಅಧ್ಯಯವಸಾಯಾತ್ಮಕವಾದ ಅಂತಃಕರಣವೇ ವಿಷ್ಣುವು, ತತ್ಕಾರ್ಯನಿಶ್ಚಯ ಕಾರಿಯಾದ ಬುದ್ಧಿಯೇ ಶ್ರೀ ದೇವಿಯು. ಧರ್ಮವೇ ವಿಷ್ಣುವು, ಆ ಧರ್ಮಜನಕವಾದ

ಸತ್ಕರ್ಮಗಳೇ ಶ್ರೀದೇವಿಯು. ಸೃಷ್ಟಿಕಾರ್ಯಕರ್ತೃತ್ವವೇ ವಿಷ್ಣುವು, ಸೃಷ್ಟಿಯೇ ಶ್ರೀದೇವಿಯು. ಭೂಮಿಯೇ ಶ್ರೀದೇವಿಯು, ಭೂಧರವೇ ವಿಷ್ಣುವು. ಸಂತೋಷವೇ ಭಗವಂತನಾದ ವಿಷ್ಣುವು, ಆ ಸಂತೋಷದಿಂದ ಉಂಟಾದ ಸಂತರ್ಪಣ ರೂಪವಾದ ತುಷ್ಟಿಯೇ ಶ್ರೀದೇವಿಯು. ಇನ್ನೂ ಕೇಳು, ಅಪೇಕ್ಷೆಯೇ ಶ್ರೀದೇವಿಯು, ತಜ್ಜನ್ಯಾಭಿನಿವೇಶವಾದ ಕಾಮವೇ ವಿಷ್ಣುವು. ಯಜ್ಞವೇ ವಿಷ್ಣುವು, ಆ ಯಜ್ಞಕರ್ಮವನ್ನು ಸಾಂಗವಾಗಿ ಮಾಡುವ ದಕ್ಷಿಣೆಯೇ ಶ್ರೀದೇವಿಯು. ಸತ್ಕರ್ಮಗಳಲ್ಲಿ ಮಾಡುವ ಆಜ್ಯಾಹುತಿಯೇ ಶ್ರೀದೇವಿಯು, ಪುರೋಡಾಶವೇ ವಿಷ್ಣುವು. ಯಾಗದಲ್ಲಿ ಉಂಟಾಗುವ ಪ್ರಾಗ್ವಂಶವೇ ವಿಷ್ಣುವು, ಪತ್ನಿಶಾಲೆಯೇ ಶ್ರೀಯು. ಚಿತ್ತಿಯೇ ಶ್ರೀದೇವಿಯು, ಯೂಪವೇ ವಿಷ್ಣುವು. ಇನ್ನು ಸತ್ಕ್ರಿಯೆಗಳಲ್ಲಿ ಮಾಡುವ ಇಧ್ಮವೇ ಶ್ರೀದೇವಿಯು, ಕುಶವೇ ವಿಷ್ಣುವು. ಗಾನರೂಪವಾದ ಸಾಮಮಂತ್ರವೇ ವಿಷ್ಣುವು, ತದ್ಗಾನ ವಿಶೇಷವಾದ ಉದ್ಗೀತಿಯೇ ಶ್ರೀದೇವಿಯು. ಹವ್ಯಕವ್ಯಗಳಿಗೆ ಸಾಧನವಾದ ಯಜ್ಞಪುರುಷನೇ ವಿಷ್ಣುವು, ತತ್ಪತ್ನಿಯಾದ ಸ್ವಾಹಾದೇವಿಯೇ ಶ್ರೀಯು. ಶಂಕರನೇ ಭಗಸಂತನಾದ ವಿಷ್ಣುವು, ಗೌರಿಯೇಶ್ರೀದೇವಿಯು. ಇನ್ನೂಕೇಳು, ಜಗತ್ಪ್ರಕಾಶನಾದ ಸೂರ್ಯನೇ ವಿಷ್ಣುವು, ಆತನ ಪ್ರಭೆಯೇ ಶ್ರೀದೇವಿಯು. ಪಿತೃವರ್ಗವೇ ವಿಷ್ಣುವು, ಅವರಿಗೆ ಮಾಡುವ ಸ್ವಧೆಯೇ ಶ್ರೀದೇವಿಯು. ಅತಿವಿಸ್ತಾರವಾದ ಅವಕಾಶವೇ ವಿಷ್ಣುವು, ಆಕಾಶವೇ ಶ್ರೀ ದೇವಿಯು. ಶಶಾಂಕನಾದ ಚಂದ್ರನೇ ವಿಷ್ಣುವು, ತತ್ಕಾಂತಿಯಾದ ಬೆಳದಿಂಗಳೇ ಶ್ರೀದೇವಿಯು. ಲೋಕದಲ್ಲಿ ಚಲನ ಕಾರ್ಯವಾದ ವಾಯುವೇ ವಿಷ್ಣುವು. ಧೃತಿಪತ್ನಿಯೇ ಶ್ರೀದೇವಿಯು. ಕೇಳು ಮುನಿಯೇ, ಸಮುದ್ರವೇ ಗೋವಿಂದನು, ಆ ಸಮುದ್ರದ ಮರ್ಯಾದಾ ಸ್ಥಾಪಕವಾದ ತೀರವೇ ಶ್ರೀದೇವಿಯು. ದೇವೇಂದ್ರನೇ ವಿಷ್ಣುವು, ತತ್ಪತ್ನಿಯಾದ ಶಚೀದೇವಿಯೇ ಶ್ರೀದೇವಿಯು. ಸರ್ವನಿಗ್ರಹಕಾರ್ಯಕರ್ತೃವಾದ ಯಮನೇ ಚಕ್ರಧರನಾದ ಗೋವಿಂದನು, ತತ್ಪತ್ನಿಯಾದ ಧೂಮೋರ್ಣೆಯೇ ಶ್ರೀದೇವಿಯು. ಧನೇಶ್ವರನಾದ ಕುಬೇರನೇ ವಿಷ್ಣುವು, ಆತನ ಪತ್ನಿಯಾದ ಬುದ್ಧಿಯೇ ಶ್ರೀದೇವಿಯು. ವರುಣನೇ ಸಾಕ್ಷಾದ್ವಿಷ್ಣು

ವು. ತತ್ಪತ್ನಿಯಾದ ಗೌರಿಯೇ ಶ್ರೀದೇವಿಯು. ಇನ್ನೂ ದೇವಸೇನಾಪತಿಯಾದ ಕಾರ್ತಿಕೇಯನೇ ನಾರಾಯಣನು, ದೇವಸೇನೆಯೇ ಶ್ರೀದೇವಿಯು. ಆಧಾರವೇ ಗದಾಪಾಣಿಯಾದ ವಿಷ್ಣುವು, ಬಲವೇ ಶ್ರೀದೇವಿಯು. ಈ ಪ್ರಕಾರದಲ್ಲಿ ಪುರುಷರೂಪವನ್ನೆಲ್ಲಾ ಉದ್ಧರಿಸಿದ ವಿಷ್ಣುವಿಗೆ ಶ್ರೀಯು ಅಷ್ಟುಸ್ತ್ರೀರೂಪವನ್ನು ಧರಿಸಲಾಗಿ, ಲಕ್ಷ್ಮೀನಾರಾಯಣರು ಸರ್ವ ಶರೀರಗತರು. ಇನ್ನೂ ಕಾಲಸ್ವರೂಪದಲ್ಲಿ ನಿಮೇಷಕ್ಕೆ ಕಾಷ್ಠೆ, ಮುಹೂರ್ತಕ್ಕೆ ಕಲೇ. ಮತ್ತು ದೀಪಕ್ಕೆ ಪ್ರಭೆ, ವುರಕ್ಕೆ ಬಳ್ಳಿ, ಹಗಲಿಗೆ ರಾತ್ರಿ, ವರನಿಗೆ ವಧುವು, ನದಗಳಿಗೆ ನದೀ, ಧ್ವಜಕ್ಕೆ ಪತಾಕೆ, ಲೋಭಕ್ಕೆ ತೃಷ್ಣೆ, ರಾಗಕ್ಕೆ ರತಿ, ಗೋವಿಂದನಿಗೆ ಲಕ್ಷ್ಮಿಯು. ಹೀಗೆ ಸ್ಥಾವರ ಜಂಗಮಾದಿ ಸಕಲಾತ್ಮಕರೂ ತಾವಾದ ಲಕ್ಷ್ಮೀನಾರಾಯಣರ ಮಹಿಮೆಯನ್ನು ಇಷ್ಟೆಂದು ಹೇಳಲು ಅಶಕ್ಯ. ಇಲ್ಲಿ ಬಹುವಾಗಿ ಹೇಳದ್ದರಿಂದ ಪ್ರಯೋಜನವೇನು. ಸಂಕ್ಷೇಪವಾಗಿ ಹೇಳುವೆನು, ಕೇಳು. ದೇವ ತಿರ್ಯಙ್ಮನುಷ್ಯಾದಿ ಜಂತುಗಳಲ್ಲಿ ಪುರುಷವ್ಯಕ್ತಿಯಲ್ಲವೂ ನಾರಾಯಣನೇ, ಸ್ತ್ರೀವ್ಯಕ್ತಿಯಲ್ಲವೂ ಶ್ರೀದೇವಿಯೇ; ಇವರಿಗೆ ಬೇರೊಂದು ವ್ಯಾಪಕ ವಸ್ತುವಿಲ್ಲ."

ಎಂದು ಪರಾಶರರು ಮೈತ್ರೇಯರಿಗೆ ನಿರೂಪಿಸಿದರು.

ಎಂಬಲ್ಲಿಗೆ ಶ್ರೀವಿಷ್ಣುಪುರಾಣದಲ್ಲಿ ಪ್ರಥಮಾಂಶದ

ಅಷ್ಟಮಾಧ್ಯಾಯ, ಸಂಪೂರ್ಣ.

11—2—1890.

## ಒಂಬತ್ತನೆ – ಅಧ್ಯಾಯ.

ಪರಾಶರರು ಹೇಳುತ್ತಾರೆ:—

"ಕೇಳೈಯ್ಯಾ, ಮೈತ್ರೇಯನೇ, ಶ್ರೀ ದೇವಿಯು ಯಾವ ವೃತ್ತಾಂತವನ್ನು ಕೇಳಿದೆಯೋ, ಆ ವೃತ್ತಾಂತವನ್ನು ಕಶ್ಯಪನ ತಂದೆಯಾದ ಮರೀಚಿಪ್ರಜೇಶ್ವರನಿಂದ ನಾವು ಕೇಳಿ ತಿಳಿದುಕೊಂಡೆವು. ಒಂದಾನೊಂದು ಕಾಲದಲ್ಲಿ ರುದ್ರಾಂಶ ಸಂಭೂತನಾದ ದುರ್ವಾಸ ಮುನಿಯು ಭೂಸಂಚಾರ ಮಾಡಿಕೊಂಡುಬರುತ್ತಿರುವಾಗ ಒಬ್ಬ ವಿದ್ಯಾಧರಸ್ತ್ರೀಯು ಕೈಯಲ್ಲಿ ದೇವ ಕುಸುಮಗಳಿಂದ ಮಾಡಲ್ಪಟ್ಟ ದಿವ್ಯ ಮಾಲಿಕೆಯನ್ನು ಕಂಡು, ಅದು ದಿವ್ಯಪರಿಮಳಯುಕ್ತವಾಗಿದ್ದದ್ದರಿಂದ ಆ ಮಾಲಿಕೆಯನ್ನು ಯಾಚಿಸಿದನು. ಆ ವಿದ್ಯಾಧರಸ್ತ್ರೀಯು ಪರಮ ಸಂತೋಷಯುಕ್ತಳಾಗಿ, ಆ ಮುನೀಶ್ವರನಿಗೆ ನಮಸ್ಕಾರ ಮಾಡಿ ಆ ಮಾಲಿಕೆಯನ್ನು ಕೊಟ್ಟಳು. ಅದನ್ನು ಸನತ್ಕುಮಾರರ ಶಾಪದಿಂದ ಉನ್ಮತ್ತ ರೂಪಿಯಾದ ಆ ದುರ್ವಾಸನು ತನ್ನ ಶಿರಸ್ಸಿನಲ್ಲಿ ಧರಿಸಿಕೊಂಡು, ಭೂಸಂಚಾರವನ್ನು ಮಾಡಿಕೊಂಡು ಬರುತ್ತಾ, ಮದೋದ್ರಿಕ್ತವಾದ ಐರಾವತದ ಶಿರಸ್ಸಿನಲ್ಲಿ ಬರುವ ಸಕಲ ದೇವತಾನಿರ್ವಾಹಕನಾದ ದೇವೇಂದ್ರನನ್ನು ಮಧ್ಯಮಾರ್ಗದಲ್ಲಿ ಕಂಡು, ಉನ್ಮತ್ತಭ್ರಮರಗಳನುಳ್ಳ ಆ ದಿವ್ಯ ಮಾಲಿಕೆಯನ್ನು ತನ್ನ ಶಿರಸ್ಸಿನಿಂದ ತೆಗೆದು ದೇವೇಂದ್ರನಿಗೆ ಕೊಡುವದಕ್ಕೆ ಮೇಲಕ್ಕೆಸೆಟ್ಟನು. ದೇವೇಂದ್ರನು ಆ ಮಾಲಿಕೆಯನ್ನು ಐರಾವತದ ಶಿರಸ್ಸಿನಲ್ಲಿ ಇರಿಸಲು, ಅದು ಕೈಲಾಸಗಿರಿಯ ಶಿಖರದಲ್ಲಿ ಇರುವ ಗಂಗಾಪ್ರವಾಹದಂತೆ ಪ್ರಕಾಶಿಸುತ್ತಿತ್ತು. ಆ ದಿವ್ಯಮಾಲಿಕೆಯ ವಾಸನೆಯಿಂದ ಮದಿಸಿದ ಐರಾವತವು ಆ ಮಾಲಿಕೆಯನ್ನು ತನ್ನ ಸೊಂಡಲಿನಿಂದ ತೆಗೆದು ಭೂತಳದಲ್ಲಿ ಬೀಸಾಡಿತು. ಅದನ್ನು ನೋಡಿ ದೂರ್ವಾಸಮುನಿಯು ಕೋಪವನ್ನು ತಾಳಿ ಇಂತೆಂದು ನುಡಿದನು :— ಎಲೈ, ಐಶ್ವರ್ಯ ಮದದಿಂದ ಕೊಬ್ಬಿದ ದೇವೇಂದ್ರನೇ, ಸಕಲ ಸಂಪತ್ತಿಗೂ ಸ್ಥಾನವಾದ ಈ ದಿವ್ಯ ಮಾಲಿಕೆಯನ್ನು ನಾವು ತಂದು ಕೊಟ್ಟರೆ ಪ್ರಸಾದ ಬುದ್ಧಿಯಿಂದ ಬಹುಮಾನವಾಗಿ ಎಣಿಸದೆ, ಮಹಾಪ್ರಸಾದವೆಂದು ತಿಳಿ

ದು ನಮಸ್ಕಾರ ಪೂರ್ವಕವಾಗಿ ಸ್ವೀಕರಿಸದೆ, ಸಂತೋಷವಾಗಿ ಶಿರ
ಸ್ಸಿನಲ್ಲಿಯೂ ಇಡದೇ, ಔದಾಸೀನ್ಯದಿಂದ ಕಂಡ ನಿನ್ನ ಈ ತ್ರೈ
ಲೋಕ್ಯಸಂಪತ್ತು ನಷ್ಟವಾಗಿ ಹೋಗುವದು! ಎಲೈ, ಮೂಢನೇ,
ನೀನು ನಮ್ಮನ್ನು ಮಿಕ್ಕ ಬ್ರಾಹ್ಮಣರಿಗೆ ಸಮಾನವಾಗಿ ಎಣಿಸುವೆ?
ಆದ್ದರಿಂದಲೇ ದುರಭಿಮಾನಿಯಾದ ನಿನ್ನಿಂದ ನಮ್ಮ ವಿಷಯದಲ್ಲಿ ಅ
ವಮಾನ ಮಾಡಲ್ಪಟ್ಟಿತು. ನಾವು ಕೊಟ್ಟ ಈ ದಿವ್ಯವಾದ ಮಾಲೆಯ
ನ್ನು ನೀನು ಭೂಮಿಯಲ್ಲಿ ಬಿಸಾಟಿದ್ದರಿಂದ, ಈ ಮೂರು ಲೋಕ
ವು ನಷ್ಟಶ್ರೀಯಾಗಿ ನಿನಗೆ ಹೋಗಲುಳ್ಳದು! ನಮ್ಮ ಕೋಪಕ್ಕೆ
ಚರಾಚರಾತ್ಮಕವಾದ ತ್ರೈಲೋಕ್ಯವೂ ಭಯಗೊಂಡು ನಡುಗುವದು.
ಅಂಥಾ ನಮ್ಮನ್ನು ನೀನು ಅತ್ಯಂತ ಗರ್ವದಿಂದ ಅವಮಾನವನ್ನು ಮಾ
ಡುತ್ತಿರುವೆ. ನಿನ್ನ ಸಕಲೈಶ್ವರ್ಯವೂ ನಷ್ಟವಾಗಿ ಹೋಗಲಿ!
ಎನಲು ; ಆ ಮಾತನ್ನು ಕೇಳದಾಕ್ಷಣವೇ ಇಂದ್ರನು ಐರಾವತದಿಂದಿ
ಳದು, ನಿಷ್ಕಲ್ಮಷನಾದ ದುರ್ವಾಸ ಮಹರ್ಷಿಯನ್ನು ನೋಡಿ, ಸಾಂ
ತ್ವವಾದನವ ಗೈಯ್ಯುತ್ತಿದ್ದನು. ನಮಸ್ಕಾರಪೂರ್ವಕ ಪ್ರಾರ್ಥನೆಮಾ
ಡುತ್ತಿರುವ ದೇವೇಂದ್ರನನ್ನು ನೋಡಿ, ಮುನಿಶ್ರೇಷ್ಠನಾದ ದುರ್ವಾ
ಸನು ಇಂತೆಂದು ನುಡಿದನು. ಎಲೈ, ದೇವೇಂದ್ರ, ನಾವು ಕೃಪಾ
ಳುವಾದ ಹೃದಯವುಳ್ಳವರಲ್ಲವಾದ್ದರಿಂದ ಕ್ಷಮಾಗುಣವು ನಮ್ಮ
ನ್ನು ಭಜಿಸದೇ ಇರುವದು. ನಿನ್ನಲ್ಲಿ ದಯಾಳುಗಳಾದ ಋಷಿಗಳು ಬೇ
ರೆ. ನಮ್ಮನ್ನು ದೂರ್ವಾಸರೆಂದು ತಿಳಿ. ಮಿಕ್ಕಾದ ಗೌತಮಾದಿಗಳಿಂದ
ನೀನು ವ್ಯರ್ಥವಾಗಿ ಗೌರವಿಸಲ್ಪಟ್ಟೆ. ನಮ್ಮನ್ನ ಅಸಹಿಷ್ಣುತಾಸಾರ
ಸರ್ವಸ್ವರಾದ ದುರ್ವಾಸರೆಂದರಿ. ದಯಾಪರರಾದ ವಸಿಷ್ಠಾದಿಗಳಿಂದ
ಸ್ತೋತ್ರ ಮಾಡಲ್ಪಟ್ಟವನಾದ್ದರಿಂದಲೇ ಗರ್ವವನ್ನೈದಿ ನಮ್ಮನ್ನು
ಈಗ ಅವಮಾನದಿಂದ ಎಣಿಸುತ್ತೀಯೇ. ಪ್ರಜ್ವಲಿಸುತ್ತಿದ್ದ ಜಟಾ
ಸಮೂಹವುಳ್ಳ ಹುಬ್ಬುಗಂಟುಗಳಿಂದ ವಕ್ರವಾದ ನಮ್ಮ ಮುಖವನ್ನು
ನೋಡಿ ಮೂರು ಲೋಕಗಳಲ್ಲಿಯೂ ಯಾವನುತಾನೆ ಭಯವನ್ನು
ಹೊಂದದೆ ಇರುವನು? ನಾವು ಕ್ಷಮಿಸತಕ್ಕವರಲ್ಲ. ಬಹುಭಾಷೆಯಿಂದ
ಪ್ರಯೋಜನವೇನು? ಹೀಗೆ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿ
ಇನ್ನೂ ನಮ್ಮಲ್ಲಿ ವಿಡಂಬನವನ್ನು ತೋರಿಸುತ್ತೀಯೆ? ಎಂದು ದೇವೇಂ

ದ್ರನಿಗೆ ಶಾಪವನ್ನು ಕೊಟ್ಟು, ದುರ್ವಾಸಮಹರ್ಷಿಯು ತನ್ನ ದಾರಿ ಗೊಂಡು ಹೋದನಂತರದಲ್ಲಿ ದೇವೇಂದ್ರನು ಐರಾವತವನ್ನೇರಿಕೊಂಡು ಅಮರಾವತಿಯನ್ನೈದಿದನು. ಕೇಳು, ಮೈತ್ರೇಯನೇ, ಅದು ಮೊದ ಲುಗೊಂಡು ಮೂರು ಲೋಕವು ನಷ್ಟೈಶ್ವರ್ಯವುಳ್ಳದ್ದಾಯಿತು. ಭೋಗ್ಯವಸ್ತುಗಳಾದ ಸಸ್ಯಾದಿಗಳೂ ಯಜ್ಞಾರ್ಹವಾದ ಸೋಮಲ ತೆಗಳೂ ಕ್ಷೀಣವಾದವು. ಆದ್ದರಿಂದಲೇ ಯಜ್ಞಾದಿ ಕರ್ಮಗಳು ಪ್ರ ವರ್ತಿಸದೇ ಇದ್ದವು. ತಪೋನಿಷ್ಠರಾದ ತಾಪಸಿಗಳು ತಪಸ್ಸನ್ನು ಮಾಡದೇ ಬಿಟ್ಟರು. ಜನಗಳೂ ದಾನಾದಿಧರ್ಮಕೆಲಸಗಳಲ್ಲಿ ಮನಸ್ಸು ಮಾಡದೇ ಇದ್ದರು. ಸಮಸ್ತಜನಗಳೂ ಲೋಭಕ್ಕೆ ಪರವಶರಾಗಿ ಅತ್ಯಲ್ಪ ವಸ್ತುವಿನಲ್ಲಿಯೂ ಅತ್ಯಾಶೆಯುಳ್ಳವರಾದರು. ಅದಕ್ಕೆ ಕಾರಣವೇನಂದರೆ? ಎಲ್ಲಿ ಸತ್ವಗುಣವೂ ಧೈರ್ಯವೂ ಇವೆಯೋ, ಅ ಲ್ಲೇ ಸಂಪತ್ತೂ ಅನುಸರಿಸುವದು. ಎಲ್ಲಿ ಸಂಪತ್ತಿರುವದೋ, ಅ ಲ್ಲೇ ಸತ್ವಾದಿಗಳುಂಟಾಗುವದು. ಹೀಗಿರುವಲ್ಲಿ ನಷ್ಟವಾದ ಐಶ್ವರ್ಯವು ಳ್ಳವರಿಗೆ ಸತ್ವಧೈರ್ಯಾದಿಗಳೆಲ್ಲಿಯದು? ಸತ್ವಗುಣ ಹೊರತಾಗಿ ಗು ಣಗಳೆಲ್ಲಿಯದು? ಗುಣಹೊರತಾಗಿ ಬಲಶೌರ್ಯಾದಿಗಳೆತ್ತಣದು? ಬಲಶೌರ್ಯಾದಿಗಳಿಲ್ಲದವನು ಸಕಲ ಜನರಿಗೂ ತಿರಸ್ಕಾರ್ಯನು. ಹೀಗೆ ತಿರಸ್ಕೃತನಾದವನು ಬುದ್ಧಿ ಕೆಟ್ಟು ಖೇದವನ್ನೈದುವನು. ಈ ಪ್ರ ಕಾರದಲ್ಲಿ ಮೂರು ಲೋಕವು ಅತ್ಯಂತ ನಿಶ್ರೀಕವಾಗಿ ಸತ್ವಹೀನ ವಾಗುತ್ತಾ ಬರಲಾಗಿ; ದೈತ್ಯರೂ ದಾನವರೂ ತಾವು ನಿಶ್ರೀಕರಾಗಿ ಯೂ ಬಲಹೀನರಾಗಿಯೂ ಇದ್ದಾಗ್ಯೂ, ಇದೀಗಸಮಯವೆಂದು ದೇ ವತೆಗಳನ್ನು ಕುರಿತು ಬಲಸಂಗ್ರಹದಲ್ಲಿ ಉದ್ಯೋಗವನ್ನು ಮಾಡಿದವ ರಾಗಿ, ಬಲಹೀನರಾಗಿ ನಿಶ್ರೀಕರಾಗಿದ್ದಂಥಾ ದೇವತೆಗಳೊಡನೆ ಯುದ್ಧ ಮಾಡಿದವರಾದರು. ಆಗ ಅಸುರರಿಂದ ಪರಾಜಿತರಾಗಿ ಇಂದ್ರಾದಿಗ ಳು ಯಜ್ಞೇಶ್ವರನನ್ನು ಮುಂದಿಟ್ಟುಕೊಂಡು ಬ್ರಹ್ಮದೇವನಿಗೆ ಶರ ಣವನ್ನೈದಿದವರಾದರು. ಈ ಪೂರ್ವೋತ್ತರವನ್ನು ಬ್ರಹ್ಮದೇವನು ಕೇಳಿ, ದೇವತೆಗಳನ್ನು ನೋಡಿ ಈ ಮಾತನಾಡಿದವನಾದನು. ಕೇ ಳೀ, ದೇವತೆಗಳಿರಾ, ಅಸುರಸಂಹಾರಕನಾಗಿ, ಪರಾಪರೇಶನಾಗಿ, ಜ ಗದುತ್ಪತ್ತಿ ಸ್ಥಿತಿ ನಾಶಗಳಿಗೆ ಕಾರಣಭೂತನಾಗಿ, ತನಗೆ ಮತ್ತೊಂ

ದು ಕಾರಣಾಂತರವಿಲ್ಲದವನಾಗಿ, ಬ್ರಹ್ಮದೇವನಿಗೂ ಪತಿಯಾಗಿ, ಸಕಲ ವ್ಯಾಪಕನಾಗಿ, ತ್ರಿವಿಧಪರಿಚ್ಛೇದ ರಹಿತನಾಗಿ, ಪರರಿಂದ ಜಯಿಸಲಶಕ್ಯನಾಗಿ, ಸ್ವರೂಪತಃ ಉತ್ಪತ್ತಿ ರಹಿತನಾಗಿ, ಸ್ವಭಾವದಿಂದ ಕಾರ್ಯಭೂತನಾಗಿ, ಪ್ರಕೃತಿಜೀವಾತ್ಮರುಗಳಿಗೆ ಕಾರಣನಾಗಿ, ಪ್ರಣತಾರ್ತಿಹರನಾದ ಶ್ರೀ ಮಹಾವಿಷ್ಣುವನ್ನು ಶರಣು ಹೊಂದುವವರಾಗಿ. ಆತನೇ ನಮಗೆ ಶ್ರೇಯಸ್ಸನ್ನು ಉಂಟುಮಾಡುವನು, ಎಂದು ಹೇಳಿ, ಆಬಳಿಕ ಪಿತಾಮಹನಾದ ಬ್ರಹ್ಮದೇವನು ದೇವತೆಗಳೊಡನೆ ಕ್ಷೀರಸಮುದ್ರದ ತೀರಕ್ಕೆ ಬಂದು, ಅತಿ ಪ್ರೀತಿಕರವಾದ ವಾಕ್ಯಗಳಿಂದ ಪರಾಪರನಿಯಂತೃನಾದ ವಿಷ್ಣುವನ್ನು ಸ್ತೋತ್ರಮಾಡಿದನು. ಹ್ಯಾಗಂದರೆ:— ಸರ್ವಾಂತರ್ಯಾಮಿಯಾಗಿಯೂ, ಸಕಲಜಗನ್ನಿಯಂತೃನಾಗಿಯೂ, ಉತ್ಪತ್ತಿಕ್ಷಯರಹಿತನಾಗಿಯೂ, ಸಕಲಾಧಾರಕನಾಗಿ ತಾನು ಆಧಾರಾಂತರರಹಿತನಾಗಿಯೂ, ಸ್ವಯಂ ಪ್ರಕಾಶನಾಗಿ ಪ್ರತ್ಯಕ್ಷಾದ್ಯಗೋಚರನಾಗಿಯೂ, ಷಡ್ಭಾವವಿಕಾರರಹಿತನಾಗಿಯೂ, ಸೂಕ್ಷ್ಮವಸ್ತುಗಳಿಗಿಂತಲೂ ಅತ್ಯಂತ ಸೂಕ್ಷ್ಮನಾಗಿಯೂ, ಭೂಮಿ ಮೊದಲಾದ ದೊಡ್ಡ ವಸ್ತುಗಳಿಗಿಂತಲೂ ದೊಡ್ಡವನಾಗಿಯೂ, ಇರುವ ಶ್ರೀಮನ್ನಾರಾಯಣನೇ! ನಿನಗೆ ನಮಸ್ಕಾರವು. ಯಾವ ಪರಮಾತ್ಮನಲ್ಲಿ ನಾನೇ ಮೊದಲಾದ ಚೇತನಾಚೇತನಗಳು ಉಂಟಾದವೋ, ಯಾವನಲ್ಲಿ ಸಕಲ ಪ್ರಪಂಚವೂ ಇರುತ್ತಿರುವುದೋ, ಆದ್ದರಿಂದಲೇ ಸರ್ವಭೂತಮಯನೆಂದೆನಿಸಿದ: ದೀಪ್ತಿಮಂತನಾಗಿಯೂ, ಸರ್ವಶ್ರೇಷ್ಠರಾದ ಬ್ರಹ್ಮಾದಿಗಳಿಗೂ ಶ್ರೇಷ್ಠನಾಗಿಯೂ, ಮುಕ್ತರಿಗಿಂತಲೂ ಶ್ರೇಷ್ಠನಾಗಿಯೂ ಆದ್ದರಿಂದಲೇ ಮೋಕ್ಷೋಪಾಸಕರಾದ ಮುಮುಕ್ಷುಗಳಿಂದ ಧ್ಯಾನಿಸಲ್ಪಡುತ್ತಿರುವ: ಆ ಪ್ರಕೃತಿಗುಣವಾದ ಸತ್ವಾದಿಗುಣಗಳಿಲ್ಲದೆ ಶುದ್ಧರಾದ ಜೀವಕೋಟಿಗಳಿಗಿಂತಲೂ ವಿಲಕ್ಷಣವಾದ ಸ್ವರೂಪವನ್ನು ಹೊಂದಿರುವ: ಆದಿಪುರುಷನೇ! ನಮಗೆ ಪ್ರಸನ್ನನಾಗು. ಕಲಾಕಾಷ್ಠಾಮುಹೂರ್ತಾದಿ ಕಾಲಸೂತ್ರಕ್ಕೆ ಅಗೋಚರನಾಗಿ ಲಕ್ಷ್ಮೀಪರಿಗ್ರಹ ಪರಿಜನ ಪರಿಚ್ಛೇದ ದಿವ್ಯಸ್ಥಾನ ಮೊದಲಾದ ನಿತ್ಯವಿಭೂತಿಯುಳ್ಳ ಪರಮಾತ್ಮನು ಯಾವನೋ, ಅಂಥಾ ಶ್ರೀಮನ್ನಾರಾಯಣನೇ! ನೀನು

ಪ್ರಸನ್ನನಾಗು. ಉಪಚಾರಶುದ್ಧನಾದ ಮುಕ್ತನೂ ನಿತ್ಯಶುದ್ಧನಾದ ನಿತ್ಯನೂ ಎಂದು ಯಾವ ಪರಮಾತ್ಮನು ಹೇಳಲ್ಪಡುತ್ತಾನೋ, ಸ ರ್ವಾಂತರ್ಯಾಮಿಯಾದ ಅಂಥಾ ಶ್ರೀಮನ್ನಾರಾಯಣನು ನಮಗೆ ಪ್ರ ಸನ್ನನಾಗಲಿ. ಲೋಕದಲ್ಲಿ ಕಾರಣವೆನಿಸುವ ಪ್ರಕೃತಿಯೂ, ಅದ ಕ್ಕೆ ಕಾರ್ಯವಾದ ಮಹತ್ತತ್ವವೂ, ಅದಕ್ಕೂ ಕಾರ್ಯಭೂತವಾದ ಅಹಂ ಕಾರ ತತ್ವವೂ, ಅಂಥಾ ಅಹಂಕಾರಗಳಿಗೆ ಕಾರ್ಯಗಳಾದ ಪಂಚತನ್ಮಾ ತ್ರೆಗಳೂ, ಅವುಗಳಿಗೂ ಕಾರ್ಯಗಳಾದ ಪಂಚಭೂತಗಳೂ, ಅಂಥಾ ಭೂತಗಳಿಗೆ ಕಾರ್ಯವಾದ ಅಂಡವೂ, ಅಂಥಾ ಅಂಡಕ್ಕೆ ಕಾರ್ಯವಾದ ಚ ತುರ್ಮುಖ ದಕ್ಷಾದಿಪ್ರಜಾಪತಿಗಳೂ, ಅಂಥಾ ಪ್ರಜೇಶ್ವರರಿಗೆ ಕಾರ್ಯ ವಾದ ಚರಾಚರಾತ್ಮಕಪ್ರಪಂಚವೆಲ್ಲವೂ ಯಾವ ಪರಮಾತ್ಮನೋ, ಅಂಥವನಿಗೆ ನಮಸ್ಕಾರವು. ಮತ್ತು ಭೋಗ್ಯಗಳಾದ ಶಬ್ದಾದಿಗಳೂ, ಅವುಗಳನ್ನನುಭವಿಸುವ ಭೋಕ್ತೃಪುರುಷನೂ, ಸೃಜ್ಯಗಳಾದ ಘ ಟಾದಿಗಳೂ, ಅದನ್ನು ಸೃಷ್ಟಿಸಿದಾತನೂ ಯಾಗಾದಿ ಪುಣ್ಯಕರ್ಮ ಗಳೂ, ತತ್ಫಲಗಳಾದ ಪ್ರಾಪ್ಯಸ್ಥಾನಗಳೂ, ಯಾವ ಪರಮಾತ್ಮನೋ, ಆ ಪರಮಾತ್ಮನಿಗೆ ನಮಸ್ಕಾರವು. ಮತ್ತು ಜ್ಞಾನಸ್ವರೂಪನಾಗಿ, ಶರೀರವಿಕಾರಕಾರ್ಯವಿಲ್ಲದವನಾಗಿ, ನಾಶರಹಿತನಾಗಿ, ಸ್ವರೂಪನಾಶ ವಿಲ್ಲದವನಾವನೋ, ಅಂಥಾ ಶ್ರೀಮನ್ನಾರಾಯಣನನ್ನು ನಮಸ್ಕರಿ ಸುತ್ತೇವೆ. ಅತೀಂದ್ರಿಯವಾಗಿ ವಿಕಾರರಹಿತವಾಗಿರುವದು ಯಾವ ವಸ್ತುವೊ, ಇನ್ನೂ ಸ್ಥೂಲಗಳಾದ ಘಟಾದಿಗಳಿಗೆ ವಿಲಕ್ಷಣವಾಗಿ, ಅತ್ಯಂತ ಸೂಕ್ಷ್ಮಗಳಾದ ಜಲಾದಿಗಳಿಗೂ ವಿಲಕ್ಷಣವಾಗಿ, ನೀಲಶ್ವೇ ತಾದಿ ವಿಶೇಷಣಗಳಿಗೂ ಅಗೋಚರವಾಗಿ ಇರುವದು ಯಾವ ಪರಬ್ರ ಹ್ಮವೋ, ಅಂಥಾ ಶ್ರೀಮನ್ನಾರಾಯಣನಿಗೆ ನಮಸ್ಕಾರ. ಮತ್ತು ಯಾವ ಪರಮಾತ್ಮನ ಶಕ್ತಿ ಲೇಶದ ಹತ್ತುಸಾವಿರವಾದ ಒಂದು ಭಾಗ ದಲ್ಲಿ ಈ ಸಮಸ್ತಪ್ರಪಂಚರಚನೆಯು ಇದ್ಧೀತೋ, ಅಂಥಾ ಶ್ರೀ ಮನ್ನಾರಾಯಣನಿಗೆ ನಮಸ್ಕಾರ. ಮತ್ತು ಯಾವ ಪರಬ್ರಹ್ಮವನ್ನು ದೇವತೆಗಳೂ, ರುದ್ರನೂ, ನಾನೂ ಅರಿಯವೋ, ಅಂಥಾ ವಿಷ್ಣುವಿ ಗೆ ನಮಸ್ಕಾರವನ್ನು ಮಾಡುತ್ತೇವೆ. ಯೋಗಿಗಳು ಧ್ಯಾನನಿಷ್ಠ ರಾಗಿ, ಪುಣ್ಯಪಾಪಕ್ಷಯವುಂಟಾಗಲು, ಪ್ರಣವದಲ್ಲಿ ಯಾವ ಅಚಿಂ

ತ್ಯವಾದ ಪರತತ್ವಸ್ವರೂಪವನ್ನು ಪ್ರತ್ಯಕ್ಷವಾಗಿ ಕಾಣುತ್ತಲಿದ್ದಾ ರೋ, ಅಂಥಾ ವಿಷ್ಣುವಿಗೆ ನಮಸ್ಕಾರ. ಯಾವ ಪರಮಾತ್ಮನಲ್ಲಿ ಬ್ರಹ್ಮವಿಷ್ಣುಶಿವಾತ್ಮಕವಾದ ಶಕ್ತಿಗಳು ಉಂಟಾಗಿವೆಯೋ, ಅನಾದಿಯಾದ ಅಂಥಾ ಶ್ರೀಮನ್ನಾರಾಯಣನನ್ನು ನಮಸ್ಕರಿಸುತ್ತೇವೆ. ಎಲೈ, ಸರ್ವಾತ್ಮಕನೇ, ಆಶ್ರಿತರುಗಳನ್ನು ಕೈಬಿಡದವನೇ, ಸ್ವಾಮಿಯೇ, ನಮಗೆ ಪ್ರಸನ್ನನಾಗಿ ದೃಷ್ಟಿಗೋಚರನಾಗು ಎಂದು ಬ್ರಹ್ಮದೇವನು ಸ್ತೋತ್ರ ಮಾಡಲು ; ಅದನ್ನು ಕೇಳಿ, ದೇವತೆಗಳು ತಾವೂ ನಮಸ್ಕಾರವನ್ನು ಮಾಡಿ, —ಎಲೈ, ಮಹಾಸ್ವಾಮೀ, ಪ್ರಸನ್ನನಾಗಿ ನಮಿಗೂ ದೃಷ್ಟಿಗೋಚರನಾಗು. ಯಾವ ಪರಮಾತ್ಮನನ್ನು ಈ ಬ್ರಹ್ಮನು ಅರಿಯನೋ, ಅಂಥಾ ನೀನು ಪ್ರಸನ್ನನಾಗು, ಎಂದು ಸ್ತೋತ್ರ ಮಾಡಿದರು. ಹೀಗೆ ಬ್ರಹ್ಮನೂ, ದೇವತೆಗಳೂ ಸ್ತೋತ್ರ ಮಾಡಿದನಂತರದಲ್ಲಿ ಬೃಹಸ್ಪತಿಮೊದಲಾದ ದೇವಋುಷಿಗಳೂ ಸ್ತೋತ್ರ ಮಾಡಿದರು. ಅದೇನಂದರೆ :— ಯಾವನೊಬ್ಬನು ಆದಿಪುರುಷನೂ, ಯಜ್ಞಪುರುಷನೂ, ಯಜ್ಞಾರಾಧ್ಯನೂ, ಬ್ರಹ್ಮಾದಿಗಳಿಗೂ ಪೂರ್ವನೂ, ಬ್ರಹ್ಮದೇವನನ್ನು ಸೃಷ್ಟಿಸಿದವನೂ, ಸತ್ವಾದಿ ಗುಣರಹಿತನಾದ ಅಂಥಾ ಸ್ವಾಮಿಯೇ ನಿನಗೆ ನಮಸ್ಕಾರ. ಎಲೈ, ಷಡ್ಗುಣೈಶ್ವರ್ಯಸಂಪನ್ನನೇ, ಭೂತಭವಿಷ್ಯದ್ವರ್ತಮಾನವಾದ ವಸ್ತುಗಳಿಗೆ ನಿಯಾಮಕನೇ, ಯಜ್ಞಸ್ವರೂಪನಾದ ಸ್ವಾಮಿಯೇ, ಆದ್ಯಂತರಹಿತನೇ, ಪ್ರಣತರಾದ ನಮಗೆ ಪ್ರಸನ್ನನಾಗು. ನಿನ್ನ ದರ್ಶನವನ್ನು ಕೊಡು. ಈ ಬ್ರಹ್ಮದೇವನೂ, ಏಕಾದಶರುದ್ರರೊಡನೇ ಕೂಡಿದ ಶಿವನೂ, ದ್ವಾದಶಾದಿತ್ಯರೊಡನೇ ಕೂಡಿದ ಸೂರ್ಯನೂ, ಅಗ್ನಿಗಳೊಡನೇ ಕೂಡಿದ ಯಜ್ಞಪುರುಷನೂ, ಅಶ್ವಿನೀದೇವತೆಗಳೂ, ವಸುಗಳೂ, ಸಪ್ತರ್ಷಿಗಳೂ, ಸಾಧ್ಯಾದಿದೇವತೆಗಳೂ, ವಿಶ್ವೇದೇವತೆಗಳೂ, ತ್ರಿಲೋಕಾಧಿಪತಿಯಾದ ದೇವೇಂದ್ರನೂ, ಸಮಸ್ತ ದೇವತೆಗಳೂ ಇವರೇ ಮೊದಲಾದ ನಿನ್ನ ಭಕ್ತರಾದ ನಾವೆಲ್ಲರೂ ಅಸುರಸೇನೆಯಿಂದ ಪರಾಜಿತರಾಗಿ ನಿನ್ನನೇ ಶರಣವನ್ನೈದಿದೆವು ಎಂದು ವಿಜ್ಞಾಪಿಸಲು; ಷಡ್ಗುಣೈಶ್ವರ್ಯಸಂಪನ್ನನಾದ ಪರಮಾತ್ಮನು ಪೂರ್ವೋಕ್ತಕ್ರಮದಿಂದ ಸ್ತೋತ್ರ ಮಾಡಲ್ಪಟ್ಟವನಾಗಿ, ಶಂಖಚಕ್ರಗದಾಧರನಾಗಿ

ಯೂ, ಲೋಕವಿಚಕ್ಷಣವಾದ ದಿವ್ಯವಿಗ್ರಹವನ್ನು ಧರಿಸಿದವನಾಗಿಯೂ, ಅವರ ಕಣ್ಣುಗಳಿಗೆ ಗೋಚರನಾಗಲು ; ಸಕಲ ದೇವತೆಗಳೂ ಸಾಷ್ಟಾಂಗವೆರಗಿ ಸಂತೋಷದಿಂದ ನಿಶ್ಚಲವಾದ ನೇತ್ರಗಳುಳ್ಳವರಾಗಿ ಸ್ತೋತ್ರ ಮಾಡಿದವರಾದರು. ಅದೇನೆಂದರೆ :— ಎಲೈ, ವಿಶ್ವಕ್ಕೆ ನಿಯಂತೃವಾದ ಸ್ವಾಮಿಯೇ, ನಿನಗೆ ನಮಸ್ಕಾರ. ಈ ಸೃಷ್ಟಿಕರ್ತನಾದ ಬ್ರಹ್ಮನೂ ನೀನೇ. ಸಂಹಾರಕರ್ತೃವಾದ ರುದ್ರನೂ ನೀನೇ. ಇಂದ್ರಾದಿಗಳಾದ ಅಷ್ಟದಿಕ್ಪಾಲಕರೂ ನೀನೇ. ಸಪ್ತಮರುತ್ತುಗಳೂ ನೀನೇ. ಅಷ್ಟವಸುಗಳೂ ನೀನೇ. ಸಾಧ್ಯಾದಿದೇವತೆಗಳೂ ವಿಶ್ವೇದೇವತೆಗಳೂ ನೀನೇ. ಇಷ್ಟುಮಾತ್ರವೇ ಅಲ್ಲ. ಯಜ್ಞಸ್ವರೂಪನೂ ನೀನೆ. ಯಜ್ಞಸಾಧನವಾದ ವಷಟ್ಕಾರವೂ ಓಂಕಾರವೂ ನೀನೇ. ನವಪ್ರಜಾಪತಿಗಳೂ ನೀನೇ. ಈ ದೇವತಾ ಸಮೂಹವು ನಿನ್ನಂಶದಲ್ಲಿ ಹುಟ್ಟಿದ್ದು. ಸರ್ವವ್ಯಾಪಿಯೂ ನೀನೇ. ಆದ್ದರಿಂದ ಸಕಲಜಗತ್ಸೃಷ್ಟಿಕರ್ತನೂ ನೀನೇ. ಅರಿಯತಕ್ಕ ತತ್ವದ ಸ್ವರೂಪವೂ, ಅರಿವ ಪುರುಷನೂ ನೀನೇ. ಈ ಸಮಸ್ತ ಸ್ವರೂಪವೂ ನೀನೇ. ಆದಕಾರಣ ಸರ್ವವ್ಯಾಪಕನಾದ ಸ್ವಾಮಿಯೇ, ಈಗ ದೈತ್ಯರಿಂದ ಜಯಿಸಲ್ಪಟ್ಟು ಆರ್ತರಾದ ನಾವುಗಳು ನಿನ್ನನ್ನು ಶರಣವನ್ನೈದಿದೆವು. ಸರ್ವಾತ್ಮಕನಾದ ಸ್ವಾಮಿಯೇ, ಕೇಳು, ಅಸುರರಿಂದ ಆರ್ತರಾದ ನಮಗೆ ಪ್ರಸನ್ನನಾಗು. ನಿನ್ನ ತೇಜಸ್ಸಿನಿಂದ ಆಪ್ಯಾಯನವನ್ನು ಮಾಡು. ನಾವು ಎಷ್ಟು ಪರ್ಯಂತರ ಶರಣಾಗತರಾಗಲಿಲ್ಲವೋ ಅಷ್ಟುಪರ್ಯಂತರ ಆರ್ತರು. ಈಗ ಶರಣಾಗತರಾದೆವು. ನೀನು ಪ್ರಸನ್ನನಾಗಿ ಕರುಣಾಕಟಾಕ್ಷದಿಂದ ಆಪ್ಯಾಯನವನ್ನು ಮಾಡು, ಎಂಬ ದೇವತೆಗಳ ಸ್ತೋತ್ರಕ್ಕೆ ಪ್ರಸನ್ನನಾಗಿ, ಕರುಣಾಕಟಾಕ್ಷದಿಂದ ದೇವತೆಗಳನ್ನು ನೋಡಿ ಇಂತೆಂದನು. ಎಲೈ, ದೇವತೆಗಳಿರಾ! ನಿಮ್ಮ ತೇಜಸ್ಸಿನಿಂದಲೇ ನಿಮಗೆ ಸಂತೃಪ್ತಿಯನ್ನುಂಟು ಮಾಡುವೆನು. ನಾನು ಹೇಳಿದ ಪ್ರಕಾರಕ್ಕೆ ಮಾಡಿರಿ. ನೀವು ದೈತ್ಯರೊಡಗೂಡಿ ಸಮಸ್ತವಾದ ಓಷಧಿಗಳನ್ನು ತಂದು ಹಾಕಿ, ಮಂದರಪರ್ವತವನ್ನು ಕಡೆಗೋಲುಮಾಡಿ, ವಾಸುಕಿಯೆಂಬ ಸರ್ಪರಾಜನನ್ನು ಕಡೆಯುವ ಹಗ್ಗವನ್ನು ಮಾಡಿ, ಕ್ಷೀರಾಬ್ಧಿಯನ್ನು ಕಡೆಯಿರಿ. ನಾನು ನಿಮಗೆ ಸಹಾಯ

ಭೂತನಾಗುವೆನು. ಆ ಕಾಲದಲ್ಲಿ ಇದರಿಂದ ಉಂಟಾಗುವ ಫಲದಲ್ಲಿ ನಾವೆಲ್ಲರೂ ಸಮಾನ ಭೋಕ್ತೃಗಳಾಗೋಣ, ಎಂದು ಸಾಮೋಪಾಯಪೂರ್ವಕವಾಗಿ ನೀವು ದೈತ್ಯರುಗಳೊಡನೆ ಹೇಳತಕ್ಕದ್ದು. ನಿಮಿಗೆ ಉಂಟಾಗುವ ವಿಶೇಷಫಲವೇನಂದರೆ :– ಕ್ಷೀರಾಬ್ಧಿಯನ್ನು ಕಡೆಯುವಾಗ ನೀವು ಅಲ್ಲಿ ಅಮೃತವನ್ನು ಪಾನಮಾಡಿ, ಜರಾಮರಣವರ್ಜಿತರಾಗಿ ಆಗುವಿರಿ. ಅಂಥಾ ಅಮೃತವನ್ನು ಅಸುರರು ಪಡೆಯದೆ ಇದ್ದಾರು. ಕ್ಲೇಶಕ್ಕೆ ಒಳಗಾಗಿಯೂ, ಅಸುರರು ಯಾವರೀತಿಯಲ್ಲಿ ಆ ಅಮೃತವನ್ನು ಪಡೆಯದೇ ಹೋಗುವರೋ, ಆ ರೀತಿ ಮಾಡಿ ನಿಮ್ಮನ್ನು ಕಾಪಾಡುವೆನು, ಎಂಬ ಸ್ವಾಮಿಯ ವಾಕ್ಯವನ್ನು ಕೇಳಿ, ದೇವತೆಗಳು ದೈತ್ಯದಾನವರೊಡನೆ ಸಂಧಿ ಮಾಡಿಕೊಂಡು, ಅವರೊಡನೆ ಕೂಡಿ ಸಕಲೌಷಧಿಗಳನ್ನು ತಂದು, ಕ್ಷೀರಾಬ್ಧಿಯಲ್ಲಿ ಹಾಕಿ, ಪೂರ್ವೋಕ್ತಪ್ರಕಾರದಲ್ಲಿ ಮಂದರಪರ್ವತದ ಕಡೆಗೋಲಿಗೆ ವಾಸುಕಿಯೆಂಬ ಹಗ್ಗವನ್ನು ಸುತ್ತಿ, ತಲೆಯ ಕಡೆಯಲ್ಲಿ ಅಸುರರೂ, ಬಾಲದ ದೆಸೆಯಲ್ಲಿ ದೇವತೆಗಳೂ ಹಿಡಿದು ಮಥಿಸಿದರು. ಆ ಸಮಯದಲ್ಲಿ ವಾಸುಕಿಯ ಮುಖದ ನಿಶ್ವಾಸಾಗ್ನಿಯಿಂದ ಅಸುರರೆಲ್ಲರೂ ಖಂಡಿತತೇಜಸ್ಕರಾದರು. ಬಾಲದ ದಿಕ್ಕಿನಲ್ಲಿ ಮೇಘಗಳಿಂದ ಮಳೆಯು ಕರೆಯಲಾಗಿ, ದೇವತೆಗಳು ಆಪ್ಯಾಯಿತರಾಗಿ ಬಲವಂತರಾದರು. ಕೇಳು, ಮೈತ್ರೇಯಾ, ಆಗ ಕ್ಷೀರಸಮುದ್ರ ಮಧ್ಯದಲ್ಲಿ ಮಂದರಾಚಲಕ್ಕೆ ಆಧಾರವಾಗಿ ಕೂರ್ಮ ರೂಪವನ್ನು ತಾಳಿ, ಒಂದು ರೂಪಿನಲ್ಲಿ ದೇವತೆಗಳ ಮಧ್ಯದಲ್ಲಿಯೂ ಮತ್ತೊಂದು ರೂಪಿನಲ್ಲಿ ಅಸುರರ ಮಧ್ಯದಲ್ಲಿಯೂ ಇದ್ದುಕೊಂಡು, ಸ್ವಾಮಿಯೇ ಮಂದರ ಪರ್ವತದ ಉಪರಿ ಭಾಗದಲ್ಲಿ ದೊಡ್ಡದಾದ ಶರೀರವನ್ನು ಆಶ್ರಯಿಸಿದವನಾಗಿ, ಆಮೇಲೆ ಕಡೆದವನಾದನು. ಸುರಾಸುರರುಗಳಿಗೆ ಅಗೋಚರವಾದ ಮತ್ತೊಂದು ರೂಪಿನಿಂದ, ನಾಗರಾಜನಾದ ವಾಸುಕಿಯು ಕೆಂಗೆಡದ ಹಾಗೆ, ಆಪ್ಯಾಯನವನ್ನು ಮಾಡಿ, ಮತ್ತೊಂದು ತೇಜಸ್ಸಿನಿಂದ ದೇವತೆಗಳನ್ನು ಆಪ್ಯಾಯನವಂ ಬಡಿಸಿದನು. ಆ ಅಮೃತಮಥನ ಸಮಯದಲ್ಲಿ ಹವ್ಯಕವ್ಯಗಳಿಗೆ ಆಸ್ಪದವಾಗಿ ದೇವತೆಗಳಿಂದ ಪೂಜಿಸಲ್ಪಟ್ಟ ಸುರಭಿಯೆಂಬ ಕಾಮಧೇನುವು ಹುಟ್ಟಿತು. ಆಗ ದೇವತೆಗಳೂ, ಅಸುರರೂ ಸಂತೋಷ

ವನ್ನೈದಿದವರಾಗಿ ಆಕರ್ಷಿಸಲ್ಪಟ್ಟ ಮನಸ್ಸಿನಿಂದ ನಿಶ್ಚಲವಾದ ನೇತ್ರಗಳುಳ್ಳವರಾದರು. ಅನಂತರದಲ್ಲಿ ಇದೇನು ಯೆಂದು ಸಿದ್ಧರುಗಳು ಆಶ್ಚರ್ಯದಿಂದ ನೋಡುತ್ತಿರಲಾಗಿ, ಮದದಿಂದ ತಿರುಗುತ್ತಲಿದ್ದ ಕಣ್ಣುಳ್ಳ ವಾರುಣೀದೇವಿಯು ಸುಳಿಯಲ್ಲಿ ತಿರಿಗಿಕೊಂಡು ಹುಟ್ಟಿದಳು. ಅನಂತರದಲ್ಲಿ ಜಗತ್ತನ್ನು ಪರಿಮಳಿಸುತ್ತಾ, ದೇವಸ್ತ್ರೀಯರುಗಳಿಗೆ ಆನಂದವ ಕೊಡುತ್ತಾ ಪಾರಿಜಾತಹುಟ್ಟಿತು. ಅನಂತರ ರೂಪೌದಾರ್ಯಗುಣಸಂಪನ್ನರಾದ ಅಪ್ಸರಸ್ತ್ರೀಯರುಗಳ ಸಮೂಹವು ಹುಟ್ಟಿತು. ಅನಂತರದಲ್ಲಿ ಶೀತಕಿರಣನಾದ ಚಂದ್ರನು ಹುಟ್ಟಿದನು. ಆ ಚಂದ್ರನನ್ನು ಶಿವನು ಪರಿಗ್ರಹಿಸಿದನು. ಆಮೇಲೆ ವಿಷವು ಉತ್ಪನ್ನವಾಯಿತು. ಆ ವಿಷವನ್ನು ಸರ್ಪಗಳು ಪರಿಗ್ರಹಿಸಿದವು. ಅನಂತರದಲ್ಲಿ ವಿಷ್ಣುವು ತಾನೇ ಶ್ವೇತವಸ್ತ್ರಧರನಾಗಿ, ಅಮೃತದಿಂದ ಪೂರ್ಣವಾದ ಕಲಶವನ್ನು ಹಿಡಿದುಕೊಂಡು, ಧನ್ವಂತ್ರಿ ಯೆಂಬ ಹೆಸರಿನಿಂದ ಆವಿರ್ಭವಿಸಿದನು. ಆಗ ದೇವ ದಾನವ ದೈತ್ಯರುಗಳು ಸ್ವಸ್ಥಚಿತ್ತರಾಗಿ, ಋಷಿಗಳೊಡನೆ ಸಂತೋಷವನ್ನು ಭಜಿಸಿದರು. ತದನಂತರದಲ್ಲಿ ಹೊಳೆಯುವ ಕಾಂತಿಯುಳ್ಳವಳಾಗಿಯೂ, ಅರಳಿದ ಕಮಲದಲ್ಲಿ ಕುಳಿತಿರುವಳಾಗಿಯೂ, ಇರುವ ಶ್ರೀದೇವಿಯು ಕೈಯಲ್ಲಿ ಕಮಲವನ್ನು ಹಿಡಿದುಕೊಂಡು, ಆ ಕ್ಷೀರಸಮುದ್ರದ ಪಯಸ್ಸಿನ ದೆಶೆಯಿಂದ ಆವಿರ್ಭವಿಸಿದಳು. ಆ ಶ್ರೀದೇವಿಯನ್ನು ಮಹರ್ಷಿಗಳು ನೋಡಿ ಬಹಳ ಸಂತೋಷದೊಡನೆ ಶ್ರೀಸೂಕ್ತದಿಂದ ಸ್ತೋತ್ರವನ್ನು ಮಾಡಿದರು. ಆ ಶ್ರೀದೇವಿಯ ಮುಂದುಗಡೆಯಲ್ಲಿ ವಿಶ್ವಾವಸು ಮೊದಲಾದ ಗಂಧರ್ವರು ಗಾನ ಮಾಡಿದರು. ಘೃತಾಚಿಯೇ ಮೊದಲಾದ ಅಪ್ಸರ ಸ್ತ್ರೀಯರುಗಳು ನರ್ತಿಸಿದರು. ಗಂಗೆಯೇ ಮೊದಲಾದ ಪುಣ್ಯನದಿಗಳು ಆಕೆಯ ಸ್ನಾನಕ್ಕಾಗಿ ಉದಕಗಳನ್ನು ತಂದು ಕಾದು ಕೊಂಡಿದ್ದವು. ದಿಗ್ಗಜಗಳು ಸ್ವರ್ಣಕಲಶಗಳಲ್ಲಿ ನಿರ್ಮಲವಾದ ತೀರ್ಥಗಳನ್ನು ತಂದು ಅಖಿಲಜಗನ್ಮಾತೆಯಾದ ಶ್ರೀದೇವಿಗೆ ಅಭಿಷೇಕವನ್ನು ಮಾಡಿದವು. ಕ್ಷೀರೋದಧಿಯು ನಿಜರೂಪದಿಂದ ಬಂದು, ಎಂದಿಗೂ ಬಾಡದಿರುವ ಕಮಲಗಳುಳ್ಳ ಒಂದು ದಿವ್ಯಮಾಲಿಕೆಯನ್ನು ತಂದು ಶ್ರೀದೇವಿಗೆ ಒಪ್ಪಿಸಿದನು. ವಿಶ್ವಕರ್ಮನು ದಿವ್ಯವಾದ ಭೂಷಣಗಳನ್ನು ತತ್ತದವಯಗಳಲ್ಲಿ ಸಮರ್ಪಿಸಿದ

ನು. ಆ ಬಳಿಕ ಸ್ನಾನಪೂರ್ವಕವಾಗಿ ದಿವ್ಯಮಾಲಾಂಬರಧಾರಿಯಾಗಿ ಯೂ, ಸರ್ವಾಭರಣಭೂಷಿತಳಾಗಿಯೂ, ಇರುವ ಆ ಶ್ರೀ ದೇವಿಯು ಸಕಲ ಸುರಾಸುರರು ನೋಡುತ್ತಿರುವಹಾಗೆಯೇ ಹರಿಯ ವಕ್ಷಸ್ಥಳವನ್ನು ಸೇರಿದವಳಾದಳು. ಆ ಶ್ರೀ ದೇವಿಯು ದೇವತೆಗಳನ್ನು ಕಟಾಕ್ಷಿಸಲಾಗಿ ಅವರು ಸುಖವನ್ನೈದಿದರು. ವಿಷ್ಣುಪರಾಙ್ಮುಖರಾದ ವಿಪ್ರಚಿತ್ತಿಮೊದಲಾದ ದೈತ್ಯರು ಲಕ್ಷ್ಮೀಕಟಾಕ್ಷದಿಂದ ವಿರಹಿತರಾಗಿ ಉದ್ವೇಗವನ್ನು ಹೊಂದಿದರು. ಅನಂತರದಲ್ಲಿ ಧನ್ವಂತರಿಯಕೈಯಲ್ಲಿದ್ದ ಅಮೃತಕಲಶವನ್ನು ಪರಾಕ್ರಮಶಾಲಿಗಳಾದ ಅಸುರರು ಗ್ರಹಿಸಿದರು. ಆಗ ವಿಷ್ಣುವು ಸ್ತ್ರೀರೂಪದಿಂದ ಅವರಿಗೆ ಮೋಹವನ್ನುಂಟುಮಾಡಿ, ಆ ಅಮೃತಕಲಶವನ್ನು ತೆಗೆದುಕೊಂಡು, ದೇವತೆಗಳಿಗೆ ಕೊಟ್ಟನು. ಅನಂತರ ದೇವೇಂದ್ರಾದಿದೇವತೆಗಳು ಅಮೃತವನ್ನು ಪಾನಮಾಡಲು, ದೈತ್ಯರುಗಳು ಕಂಡು ಕೋಪಿಷ್ಠರಾಗಿ ಖಡ್ಗಮೊದಲಾದ ಆಯುಧಗಳನ್ನು ತೆಗದುಕೊಂಡು ದೇವತೆಗಳನ್ನು ಮುತ್ತಿಕೊಂಡರು. ಅಮೃತಪಾನದಿಂದ ಬಲಿಷ್ಠರಾದ ದೇವತೆಗಳು ರಾಕ್ಷಸರ ಸೈನ್ಯವನ್ನು ಕೊಲ್ಲುತ್ತ ಬರಲು, ಅವರು ಪರಾಜಿತರಾಗಿ ದಿಕ್ಕುದಿಕ್ಕುಗಳನ್ನು ಆಶ್ರಯಿಸಿ ನಿಲ್ಲಲಾರದೆ ಪಾತಾಳವನ್ನು ಹೊಕ್ಕರು. ಅನಂತರ ಪರಮಸಂತುಷ್ಟರಾದ ದೇವತೆಗಳು ಶಂಖಚಕ್ರಗದಾಧರನಾದ ಸ್ವಾಮಿಗೆ ನಮಸ್ಕಾರವನ್ನು ಮಾಡಿ, ತಮ್ಮ ಸ್ವರ್ಗವನ್ನು ಸೇರಿಕೊಂಡರು. ಅನಂತರ ಸೂರ್ಯನು ಪ್ರಕಾಶವಾದ ಕಾಂತಿಯುಳ್ಳವನಾಗಿ ತನ್ನ ಮಾರ್ಗದಲ್ಲಿ ಸಂಚರಿಸಿದನು. ನಕ್ಷತ್ರಗಳು ಅದೇ ಪ್ರಕಾರ ಬೆಳಗಿದವು. ಯಜ್ಞಪುರುಷನು ಮನೋಹರವಾದ ಕಿರಣಗಳಿಂದ ಚನ್ನಾಗಿ ಪ್ರಕಾಶಿಸಿದನು. ಆಗ ಸಮಸ್ತಪ್ರಾಣಿಗಳಿಗೂ ಧರ್ಮದಲ್ಲಿ ಬುದ್ಧಿ ಹುಟ್ಟಿತು. ಕೇಳು, ಮೈತ್ರೇಯನೇ, ಮೂರುಲೋಕವು ಶ್ರೀದೇವಿಯ ಕಟಾಕ್ಷದಿಂದ ಸಕಲ ಸಂಪತ್ಸಮೃದ್ಧವಾಯಿತು. ದೇವತೆಗಳಿಗೆ ಶ್ರೇಷ್ಠನಾದ ಶಕ್ರನು ಪುನಃ ಶ್ರೀಮಂತನಾದನು. ದೇವೇಂದ್ರನು ದುರ್ವಾಸಶಾಪದಿಂದ ಭ್ರಷ್ಟೈಶ್ವರ್ಯನಾಗಿ, ಆರ್ತನಾಗಿ, ಪರಮಾತ್ಮನ ಶರಣವನ್ನು ಮಾಡಿ, ಅಮೃತಮಥನವ್ಯಾಜದಿಂದ ಲಕ್ಷ್ಮೀಕಟಾಕ್ಷವಂ ಪಡದು, ಸಿಂಹಾಸನಸ್ಥನಾಗಿ ಆ ಶ್ರೀ ದೇವಿಯನ್ನು ಈ ಪ್ರಕಾರದಿಂದ ಸ್ತೋತ್ರಮಾಡಿದನು. ಅದು ಹ್ಯಾಗೆಂದರೆ:—

" ಸಕಲ ಜಗತ್ತಿಗೂ ತಾಯಿಯಾಗಿಯೂ, ಸಮುದ್ರೋದ್ಭವೆಯೂ ಗಿಯೂ, ವಿಕಸಿತ ಪದ್ಮದಂತೆ ಕಣ್ಣುಳ್ಳವಳಾಗಿಯೂ, ಜಗದ್ವ್ಯಾಪಕನಾದ ವಿಷ್ಣುವಿನ ವಕ್ಷಸ್ಥಳದಲ್ಲಿರುವಳಾಗಿಯೂ ಇರುವ ಶ್ರೀದೇವಿಯೇ, ನಿನಗೆ ನಮಸ್ಕಾರ. ಪದ್ಮವೇ ಮನೆಯಾಗುಳ್ಳವಳಾಗಿಯೂ, ಕಮಲವನ್ನು ಹಸ್ತದಲ್ಲಿ ಧರಿಸಿರುವಳಾಗಿಯೂ, ಕಮಲದೆಸಳಂತೆ ವಿಸ್ತಾರವಾದನೇತ್ರವುಳ್ಳವಳಾಗಿಯೂ, ಪದ್ಮಮುಖಿಯಾಗಿಯೂ, ಇರುವ ಪದ್ಮನಾಭನಾದ ಸ್ವಾಮಿಯ ಪ್ರಿಯಪತ್ನಿಯನ್ನು ನಮಸ್ಕರಿಸುತ್ತೇನೆ. ಕೇಳು, ತಾಯೇ, ಅಣಿಮಾದ್ಯಷ್ಟಸಿದ್ಧಿಯೂ ನೀನೆ. ಅಮೃತವೂ ನೀನೆ. ಹವ್ಯಸಾಧನವಾದ ಸ್ವಾಹಾಮಂತ್ರವೂ, ಕವ್ಯಸಾಧನವಾದ ಸ್ವಧಾಮಂತ್ರವೂ ನೀನೆ. ಲೋಕಪಾವಿನಿಯೇ ಕೇಳು, ನೀನೆ ಸಂಧ್ಯಾತ್ರಯವು, ನೀನೆ ರಾತ್ರಿಯು, ನೀನೆ ಹಗಲು, ನೀನೆ ಸಕಲ ಭೋಗಕ್ಕೂ ಧರ್ಮಕ್ಕೂ ಸಾಧಕವಾದ ಐಶ್ವರ್ಯವು, ನೀನೆ ಮೇಧೆಯು, ನೀನೆ ಶ್ರದ್ಧೆಯು, ನೀನೆ ವಾಗ್ರೂಪವಾದ ಸರಸ್ವತಿಯು, ನೀನೆ ಧರ್ಮಸಾಧನವಾದ ಯಜ್ಞವಿದ್ಯೆಯು, ನೀನೆ ಭಗವಂತನಾದ ಪರಮಾತ್ಮನ ವಿರಾಡ್ರೂಪೋಪಾಸಕವಾದ ಮಹಾವಿದ್ಯೆಯು, ನೀನೆ ದ್ವಾದಶಾಕ್ಷರಾದಿ ವ್ಯಾಪಕ ಮಂತ್ರೋಪಾಸನೆಯಾದ ಗುಹ್ಯವಿದ್ಯೆಯು, ನೀನೆ ಮುಕ್ತಿಫಲಸಾಧಕವಾದ ಬ್ರಹ್ಮವಿದ್ಯೆಯು, ಋಗ್ಯಜುಸ್ಸಾಮವೆಂಬ ವೇದತ್ರಯವೂ ತರ್ಕವೂ ಅರ್ಥಶಾಸ್ತ್ರವೂ ಶಿಲ್ಪ ಆಯುರ್ವೇದದಂಡನೀತಿಮುಂತಾದ ವಿದ್ಯೆಗಳೂ ಸಾಮಾದ್ಯುಪಾಯಗಳೂ ಇವೇ ಮೊದಲಾದ ಸಕಲವಿದ್ಯೆಗಳೂ ನೀನೆ. ಈ ಪ್ರಕಾರವಾಗಿ ಸೌಮ್ಯಾಸೌಮ್ಯಗಳಾದ ಇನ್ನೂ ಅನೇಕ ರೂಪಗಳಿಂದ ಈ ಜಗತ್ತು ನಿನ್ನಿಂದ ಪೂರಿತವಾಗಿದೆ. ಯೋಗಿಗಳಿಗೆ ಧ್ಯಾನಗೋಚರವಾಗಿಯೂ, ಸರ್ವಯಜ್ಞಮಯವಾಗಿಯೂ ಇರುವ ದೇವೋತ್ತಮನಾದ ಗದಾಧರನ ವಕ್ಷಸ್ಥಳದಲ್ಲಿ ನೀನಲ್ಲದೆ ಮತ್ಯಾರು ವಾಸಮಾಡುವರು. ಎಲೌ ತಾಯೇ, ನಿನ್ನಿಂದ ಬಿಡಲ್ಪಟ್ಟ ಈ ಜಗತ್ತು ನಷ್ಟಪ್ರಾಯವಾಯಿತು. ಈಗ ನಿನ್ನ ಕಟಾಕ್ಷಸಂಧುಕ್ಷಣದಿಂದ ಅದು ಸಕಲಸಂಪತ್ಸಮೃದ್ಧವಾಗಿ ಆಯಿತು. ಇದಲ್ಲದೂ ಸ್ತ್ರೀಯರುಗಳೂ, ಪುತ್ರರೂ, ಗೃಹವೂ, ಸುಹೃತ್ತುಗಳೂ, ಧನಧಾನ್ಯಗಳೂ, ನಿಂನ ಕಟಾಕ್ಷದಿಂದ ಜನ

ಗಳಿಗೆ ನಿತ್ಯದಲ್ಲಿಯೂ ಉಂಟಾಗುತ್ತವೆ. ಮತ್ತು ಶರೀರಾರೋಗ್ಯವೂ, ಐಶ್ವರ್ಯವೂ, ಶತ್ರುಜಯವೂ, ಸುಖವೂ ಇವೆಲ್ಲವೂ ನಿನ್ನ ಕಟಾಕ್ಷವುಳ್ಳ ಪ್ರಜೆಗಳಿಗೆ ದುರ್ಲಭವಲ್ಲ. ತಾಯೇ, ಸಮಸ್ತ ಪ್ರಾಣಿಗಳಿಗೂ ನೀನೆ ತಾಯಿ; ದೇವದೇವನಾದ ಹರಿಯೇ ತಂದೆಯು; ನಿಮ್ಮಿಬ್ಬರಿಂದ ಈ ಚರಾಚರಾತ್ಮಕವಾದ ಜಗತ್ತು ವ್ಯಾಪ್ತವಾಗಿದೆ. ಆದ್ದರಿಂದ ವಿಷ್ಣುವಕ್ಷಸ್ಥಲಾರೂಢೆಯಾದ ತಾಯೇ, ನಿನ್ನ ಅಭಿಮಾನವು ಸಕಲವಸ್ತುಪೂರ್ಣವಾದ ಭಂಡಾರ, ಭೋಗಸಾಧನವಾದ ಗೃಹ, ಗೃಹಧರ್ಮಸಾಧನವಾದ ಪತ್ನಿ, ಪರಿಜನ ಪರಿಚ್ಛದಾದಿಸಂಗ್ರಹ, ಪುತ್ರ ಮಿತ್ರ ಪಶ್ವಾದಿಗಳು, ಅಲಂಕಾರ ಸಾಧನಗಳಾದ ಭೂಷಣಗಳು, ಇವೆಲ್ಲವನ್ನೂ ಬಿಡತಕ್ಕದ್ದಲ್ಲ. ಸತ್ಯಶೌಚಾದಿ ಒಳ್ಳೇ ಗುಣಗಳಿಂದ ಯಾರು ಬಿಡಲ್ಪಟ್ಟಿದ್ದಾರೋ, ಅವರು ನಿನ್ನ ಕಟಾಕ್ಷಕ್ಕೆ ಪಾತ್ರರಾಗಿ ಆಕ್ಷಣವೇ ಶೀಲಾದಿಗುಣಾನ್ವಿತರಾಗಿಯೂ, ಸಕಲೈಶ್ವರ್ಯಸಂಪನ್ನರಾಗಿಯೂ, ಮತ್ತು ಅವರು ದುರ್ಗುಣಿಗಳಾದರೂ ಕುಲಸ್ಥಾನಗುಣಪೌರುಷಗಳಿಂದ ಸಮೃದ್ಧರಾಗಿಯೂ ಆಗುತ್ತಾರೆ. ಇನ್ನೂ ಯಾವ ಪುರುಷನು ನಿನ್ನ ಕಟಾಕ್ಷಕ್ಕೆ ವಿಷಯನೋ, ಆತನೇ ಶ್ಲಾಘ್ಯನು, ಆತನೇ ಗುಣಶಾಲಿಯು, ಆತನೇ ಧನ್ಯನು, ಆತನೇ ಬುದ್ಧಿವಂತನು, ಆತನೇ ಶೂರನು, ಆತನೇ ಪರಾಕ್ರಮಶಾಲಿಯು. ಎಲೈ, ಜಗದ್ಧಾತ್ರಿಯಾದ ವಿಷ್ಣುವಲ್ಲಭಯೇ, ಯಾವ ಪುರುಷನು ನಿನ್ನ ಕಟಾಕ್ಷಕ್ಕೆ ದೂರದಲ್ಲಿರುವನೋ, ಆತನ ಶೀಲಾದಿ ಸಕಲ ಗುಣಗಳೂ ನಷ್ಟವಾಗಿ, ಸರ್ವಾಪ್ರಯೋಜಕನಾದ ಭ್ರಷ್ಟನೆನಿಸಿಕೊಳ್ಳುವನು. ಚತುರ್ಮುಖನಾದ ಬ್ರಹ್ಮದೇವನ ನಾಲಿಗೆಯೂ ಕೂಡ ನಿನ್ನ ಗುಣಗಳನ್ನು ವರ್ಣಿಸಲಾರದು. ಆದ್ದರಿಂದ ಎನ್ನಲ್ಲಿ ಕೃಪೆಯಿಂದ ಪರಾಙ್ಮುಖವ ಮಾಡದೆ ಕಟಾಕ್ಷಿಸುತ್ತಾ ಪ್ರಸನ್ನಳಾಗು ಮತ್ತು ಎನ್ನನ್ನೂ ಎಂದಿಗೂ ಅಗಲಿರಬೇಡ" ಎಂದು ಸ್ತೋತ್ರಮಾಡಿದನು.

ಪರಾಶರರು ಹೇಳುತ್ತಾರೆ:

"ಎಲೈ, ಮೈತ್ರೇಯನೇ, ಸರ್ವಪ್ರಾಣಿಗಳಲ್ಲಿಯೂ ಇರುತ್ತಲಿರುವ ಆ ಶ್ರೀದೇವಿಯು, ಈ ಪ್ರಕಾರ ಚನ್ನಾಗಿ ಸ್ತುತಿಸಲ್ಪಟ್ಟವಳಾಗಿ, ಸಕಲ ದೇವತೆಗಳೂ ಕೇಳುತ್ತಿರುವಹಾಗೆ ದೇವೇಂದ್ರನನ್ನು

ಕುರಿತು ಒಂದು ಮಾತನಾಡಿದಳು. ಅದೇನೆಂದರೆ. 'ಎಲೈ, ದೇವೇಂ ದ್ರನೇ ಈ ನಿನ್ನ ಸ್ತೋತ್ರದಿಂದ ಸಂತುಷ್ಟಳಾದೆನು. ನಿನಗೆ ಪ್ರ ಸನ್ನಳಾದೆನು. ನಿನಿಗಿಷ್ಟವಾದವರನ್ನು ಬೇಡು, ಕೊಡುವೆನು' ಎನ ಲಾಗಿ; ದೇವೇಂದ್ರನು 'ಎಲೌ ತಾಯೇ, ನೀನೆ ವರವನ್ನು ಕೊಡುವ ಳಾದರೆ, ನಾನು ವರಾರ್ಹನಾದರೆ, ಈ ಮೂರು ಲೋಕವು ನೀನು ಬಿಡತಕ್ಕದ್ದಲ್ಲ. ಇದು ಮೊದಲನೇ ಶ್ರೇಷ್ಠವಾದ ವರವಾಗಲಿ! ಯಾ ವ ಪುರುಷನು ನಾನು ಮಾಡಿದ ಸ್ತೋತ್ರದಿಂದ ನಿಂನನ್ನು ಸ್ತುತಿ ಸುವನೋ, ಅವನ ನೀನು ಬಿಡತಕ್ಕದ್ದಲ್ಲ. ಇದು ಎರಡನೇ ವರವಾ ಗಲಿ!' ಎನಲು ; ಲಕ್ಷ್ಮೀದೇವಿಯು 'ಎಲೈ ದೇವೇಂದ್ರನೆ, ನಾನುಮೂ ರು ಲೋಕವನ್ನೂ ಬಿಡದೆ ಇರುವೆನು. ನೀನು ಮಾಡಿದ ಸ್ತೋತ್ರ ದಿಂದ ಯಾವನೊಬ್ಬನು ಸಾಯಂಪ್ರಾತಃಕಾಲಗಳಲ್ಲಿ ಸ್ತುತಿಸಿ, ನನಗೆ ಸಂತೋಷಪಡಿಸುವನೋ, ಅವನಲ್ಲಿ ಪರಾಙ್ಮುಖಿಯಾಗದೆ ಇರುವೆನು' ಎಂದು ಯರಡು ವರಗಳನ್ನು ಕೊಟ್ಟವಳಾದಳು. ಕೇ ಳು ಮೈತ್ರೇಯ, ಶ್ರೀದೇವಿಯು ಮೊದಲು ಭೃಗುಪತ್ನಿಯಾದ ಖ್ಯಾ ತಿಯಲ್ಲಿ ಅವತಾರಮಾಡಿದಳು. ಅನಂತರದಲ್ಲಿ ಜಗದನುಗ್ರಹಾರ್ಥ ವಾಗಿ ದೇವದಾನವರ ಯತ್ನದಿಂದುಂಟಾದ ಅಮೃತಮಥನವ್ಯಾಜದಿಂದ ಕ್ಷೀರಾಬ್ಧಿಯಲ್ಲಿ ಆವಿರ್ಭವಿಸಿದಳು. ಈ ಪ್ರಕಾರದಲ್ಲಿ ಜಗದೀಶ್ವರ ನಾದ ನಾರಾಯಣನು ಯಾವಾಗ ಯಾವಾಗ ತನ್ನ ಅಂಶಗಳಿಂದ ಅವತಾ ರ ಮಾಡುತ್ತಾನೊ, ಆಗಾಗ ತತ್ತದವತಾರಾನುಗುಣವಾಗಿ ಈ ಶ್ರೀ ದೇವಿಯು ತತ್ಸಹಾಯಭೂತೆಯಾಗಿ ಅವತರಿಸುವಳು. ಹರಿಯು ಆ ದಿತ್ಯಾವತಾರ ಮಾಡಿದಲ್ಲಿ ಪದ್ಮೆಯಾಗವತರಿಸಿದಳು. ಭೃಗು ಕುಮಾ ರನಾದ ಪರಶುರಾಮಾವತಾರದಲ್ಲಿ ಧರಣೀರೂಪವ ಧರಿಸಿದಳು. ದಾ ಶರಥಿಯಾದ ರಾಮಾವತಾರದಲ್ಲಿ ಭೂಸುತೆಯಾದ ಸೀತೆಯಾಗಿಯೂ, ಕೃಷ್ಣಾವತಾರದಲ್ಲಿ ರುಕ್ಮಿಣಿಯಾಗಿಯೂ, ಇನ್ನೂ ಅನೇಕವಾದ ಅ ವತಾರಗಳಲ್ಲಿ ಹೀಗೆಯೇ ತತ್ಸಹಾಯಿನಿಯಾಗಿ ಅವತರಿಸುತ್ತಿರುವ ಳು. ಸ್ವಾಮಿಯು ದೇವಶರೀರವನ್ನು ಪರಿಗ್ರಹಿಸಿದರೆ ತಾನೂ ದೇ ವತಾಸ್ತ್ರೀಯಾಗಿ, ಮನುಷ್ಯಭಾವದಲ್ಲಿ ಅವತರಿಸಿದರೆ ಮನುಷ್ಯ ಸ್ತ್ರೀಯಾಗಿ, ಪರಮಾತ್ಮನ ದೇಹಕ್ಕೆ ಅನುಗುಣವಾಗಿಯೇ ತತ್ಸ

ಹಾಯವಾಗಿ ಆವಿರ್ಭವಿಸುತ್ತಿರುವಳು. ಎಲೈ, ಮೈತ್ರೇಯ, ಯಾವ ಪುರುಷನು ಆ ಶ್ರೀದೇವಿಯ ಅವತಾರದ ಮಹಿಮೆಯನ್ನು ಕೇಳುತ್ತಾನೆಯೋ, ಅಥವಾ ಪ್ರತಿದಿನದಲ್ಲಿಯೂ ಪಠಿಸುತ್ತಾನೆಯೋ, ಆತನ ಗೃಹದಲ್ಲಿ ತ್ರಿಪುರುಷೋದ್ದೇಶವ್ರೂ ಶ್ರೀದೇವಿ ನೆಲೆಗೊಂಡಿರುವಳು. ಯಾರ ಮನೆಗಳಲ್ಲಿ ಈ ಶ್ರೀಕಥೆಯು ಪಠಿಸಲ್ಪಡುತ್ತಿರುವದೋ, ಆ ಗೃಹಗಳಲ್ಲಿ ಕಲಹಾಧಾರೆಯಾದ ಅಲಕ್ಷ್ಮಿಯು ಸುಳಿಯಲಾರಳು. ಎಲೈ, ಮೈತ್ರೇಯನೇ, 'ಮೊದಲು ಭೃಗುಪುತ್ರಿಯಾಗಿ ಅನಂತರದಲ್ಲಿ ಕ್ಷೀರಾಬ್ಧಿಯಲ್ಲಿ ಹ್ಯಾಗೆ ಜನಿಸಿದಳು' ಎಂದು ಶ್ರೀದೇವಿಯ ಅವತಾರ ರಹಸ್ಯವನ್ನು ಕೇಳಿದೆಯಾದಕಾರಣ ಹೇಳಿದೆವು. ಈ ಪ್ರಕಾರದ ಮಹಿಮೆಯುಳ್ಳದ್ದಾಗಿಯೂ, ಸಕಲೈಶ್ವರ್ಯಸಾಧನವಾಗಿಯೂ ದೇವೇಂದ್ರಕೃತವಾಗಿಯೂ ಇರುವ ಈ ಶ್ರೀ ದೇವಿಯ ಸ್ತುತಿಯನ್ನು ನಿತ್ಯದಲ್ಲಿ ಯಾರು ಪಠಿಸುತ್ತಿರುವರೋ, ಅವರುಗಳಲ್ಲಿ ಲಕ್ಷ್ಮೀದೇವಿಯು ತಾನೇ ನೆಲಸಿದ್ದು, ಸಕಲ ದುರಿತಗಳನ್ನು ಪರಿಹರಿಸಿ, ಸರ್ವಸಂಪತ್ತನ್ನು ಕೊಡುವಳು"

ಎಂದು ಮೈತ್ರೇಯರಿಗೆ ಪರಾಶರರು ನಿರೂಪಿಸಿದರು.

ಎಂಬ ಬಳಿಗೆ ವಿಷ್ಣುಪುರಾಣದಲ್ಲಿ ಪ್ರಥಮಾಂಶದ

ನವಮಾಧ್ಯಾಯ ಸಮಾಪ್ತಂ.

30—3—1890.

## ಹತ್ತನೆ – ಅಧ್ಯಾಯ

'ಎಲೈ, ಪರಾಶರಮುನಿಯೆ! ಕೇಳಿದ್ದೆನ್ನೆಲ್ಲಾ ವಿಸ್ತಾರವಾಗಿ ಹೇಳಿದಿರಿ. ಆದರೆ ಭೃಗುವಂಶಮೊದಲಾದ ಸೃಷ್ಟಿಗಳನ್ನು ಸಂಕ್ಷೇಪಿಸಿ ಹೇಳಿದಿರಿ. ತಿರಿಗಿ ಅದನ್ನೆ ಸ್ವಲ್ಪ ವಿಸ್ತಾರವಾಗಿ ಹೇಳಿರಿ.' ಎಂದುಕೇಳಿದ ಮೈತ್ರೇಯರಿಗೆ ಪರಾಶರರು ಇಂತು ನಿರೂಪಿಸುವರು:–

'ಭೃಗುಪತ್ನಿಯಾದ ಖ್ಯಾತಿಯಲ್ಲಿ ವಿಷ್ಣುಪರಿಗೃಹೀತಳಾದ ಶ್ರೀದೇವಿಯೂ, ಧಾತೃವಿಧಾತೃಗಳೆಂಬ ಇಬ್ಬರು ಕುಮಾರರೂ ಜನಿಸಿದರು. ಆ ಧಾತೃವಿಧಾತೃಗಳಿಗೆ ಆಯತಿವಿಯತಿಗಳೆಂಬ ಮೇರುವಿನ ಕುಮಾರ್ತಿಯರು ಪತ್ನಿಗಳು. ಧಾತೃವಿಗೆ ಪ್ರಾಣನೆಂದೂ, ವಿಧಾತೃವಿಗೆ ಮೃಕಂಡುವೆಂದೂ ಮಕ್ಕಳಾದರು. ಮೃಕಂಡುವಿನಲ್ಲಿ ಮಾರ್ಕಂಡೇಯನು ಜನಿಸಿದನು. ಇವನ ಮಗನು ವೇದಶಿರನು. ಇನ್ನುಮೇಲೆ ಪ್ರಾಣನ ವಂಶವನ್ನು ಕೇಳು. ಪ್ರಾಣನಮಗನು ದ್ಯುತಿಮಂತನು. ಇವನ ಮಗನು ಅಜಾವಂತನು. ಈತನಿಂದಲೇ ಭಾರ್ಗವವಂಶವು ವಿಸ್ತಾರವನ್ನು ಹೊಂದಿತು.

'ಮರೀಚಿಪ್ರಜಾಪತಿಯ ಪತ್ನಿಯಾದ ಸಂಭೂತಿಯಲ್ಲಿ ಪೌರ್ಣಮಾಸನೆಂಬ ಪುತ್ರನು ಹುಟ್ಟಿದನು. ಈ ಮಹಾತ್ಮನ ಪುತ್ರರು ಪರ್ವತನು, ವಿರಜಸ್ಸು. ಇದೇವಂಶದಲ್ಲಿ ಹುಟ್ಟಿದ ಬಹುಸಂತಾನರಾದ ಕಾಶ್ಯಪವಿವಸ್ವತಾದಿಗಳ ವಂಶಪರಂಪರೆಯನ್ನು ಮುಂದೆ ವಂಶಸಂಕೀರ್ತನ ಪ್ರಸಂಗದಲ್ಲಿ ತಿಳಿಸುವೆವು.

'ಅಂಗಿರಪ್ರಜೇಶ್ವರಪತ್ನಿಯಾದ ಸ್ಮೃತಿಯಲ್ಲಿ ಸಿನೀವಾಲೀ, ಕುಹೆ, ರಾಕೆ, ಅನುಮತಿ ಯೆಂಬ ನಾಲ್ವರು ಹೆಣ್ಣುಮಕ್ಕಳು ಜನಿಸಿದರು.

'ಅತ್ರಿಪತ್ನಿಯಾದ ಅನಸೂಯೆಯು ಸೋಮನು, ದುರ್ವಾಸನು, ಯೋಗಿ ದತ್ತಾತ್ರೇಯನು ಎಂಬ ಅಕಲ್ಮಷರಾದ ಪುತ್ರರನ್ನು ಪಡೆದಳು.

'ಪುಲಸ್ತ್ಯಭಾರ್ಯೆಯಾದ ಪ್ರೀತಿಯಲ್ಲಿ ದತ್ತೋತ್ರಿಯು ಹುಟ್ಟಿದನು. ಇವನು ಪೂರ್ವದ ಸ್ವಾಯಂಭುವಮನ್ವಂತರದಲ್ಲಿ ಅಗಸ್ತ್ಯನಾಗಿದ್ದನು.

‘ಪುಲಹಪ್ರಜಾಪತಿಯ ಭಾರ್ಯೆಯಾದ ಕ್ಷಮೆಯಲ್ಲಿ ಕರ್ದಮನು, ಅರ್ವರೀವಂತನು ಸಹಿಷ್ಣುವು ಎಂಬ ಮೂರುಮಕ್ಕಳು ಜನಿಸಿದರು.

‘ಕ್ರತು ಪ್ರಜಾಪತಿಯ ಭಾರ್ಯೆಯಾದ ಸನ್ನತಿಯು ಪ್ರಕಾಶಿಸುತ್ತಲಿರುವ ರವಿಯ ತೇಜಸ್ಸಿನ ಹಾಗೆ ತೇಜಸ್ಸುಳ್ಳ, ಅಂಗುಷ್ಟಪರ್ವಮಾತ್ರ ಪ್ರಮಾಣವುಳ್ಳ, ಊರ್ಧ್ವರೇತಸ್ಸುಗಳಾದ ವಾಲಖಿಲ್ಯರೆಂಬ ಅರುವತ್ತು ಸಾವಿರಮಂದಿ ಋಷಿಗಳನ್ನು ಪಡೆದಳು.

‘ವಸಿಷ್ಠ ಪತ್ನಿಯಾದ ಊರ್ಜೆಯಲ್ಲಿ ಏಳುಮಂದಿ ಕುಮಾರರು ಜನಿಸಿದರು. ಅವರಾರೆಂದರೆ: ರಜಸ್ಸು, ಗೋತ್ರನು, ಊರ್ಧ್ವಬಾಹುವು, ಸವನನು, ಅನಘನು, ಸುತನು, ಶುಕ್ರನು. ಇವರು ಪೂರ್ವದಲ್ಲಿ ಮೂರನೆಯ ಮನ್ವಂತರದಲ್ಲಿ ಸಪ್ತರ್ಷಿಗಳಾಗಿದ್ದರು.

‘ಬ್ರಹ್ಮದೇವನ ಮುಖದಿಂದ ಮೊದಲುಹುಟ್ಟದ ಅಗ್ನ್ಯಭಿಮಾನಿಯೆಂಬ ಅಗ್ನಿದೇವತೆಯುದೆಶೆಯಿಂದ ಸ್ವಾಹಾದೇವಿಯು ಪಾವಕ, ಪವಮಾನ ಜಲಾಶನನಾದ ಶುಚಿ ಎಂಬ ಅತಿತೇಜಸ್ವಿಗಳಾದ ಮೂರುಮಂದಿ ಕುಮಾರರನ್ನು ಪಡದಳು. ಇವರುಗಳ ಸಂತತಿಯಲ್ಲಿ ನಾಲ್ವತ್ತೈದು ಮಂದಿ ಹುಟ್ಟದರು. ಅಗ್ನ್ಯಭಿಮಾನಿ, ಇವನ ಮೂರುಮಕ್ಕಳು, ಮೊಮ್ಮಕ್ಕಳು ಸಹಿತ ನಾಲ್ವತ್ತೊಂಬತ್ತು ಅಗ್ನಿಗಳಾದರು.

‘ಬ್ರಹ್ಮದೇವನಿಂದ ಸೃಷ್ಟಿಸಲ್ಪಟ್ಟಪಿತೃಗಳನ್ನು ಹೇಳದೆವು. ಅವರಲ್ಲಿ ಅನಗ್ನಿಗಳು ಅಗ್ನಿಷ್ವಾತ್ತರೆಂದೂ, ಸಾಗ್ನಿಗಳು ಬರ್ಹಿಷದರೆಂದೂ ಕರೆಯಲ್ಪಟ್ಟರುವರು. ಇವರುಗಳ ದೆಶೆಯಿಂದ ಸ್ವಧಾದೇವಿಯು ಮೇನೆ, ವೈತರಣೀ, ಎಂಬ ಇಬ್ಬರು ಕುಮಾರ್ತಿಯರನ್ನು ಪಡೆದಳು. ತತ್ವಜ್ಞಾನದಿಂದ ಇವರಿಬ್ಬರು ಬ್ರಹ್ಮನಿಷ್ಠರಾದ ಯೋಗಿಗಳೂ, ಉತ್ತಮಜ್ಞಾನಸಂಪನ್ನರೂ, ಶಾಂತಿಶಮದಮಾದಿಗುಣಯುತರೂ ಆಗಿರುವರು. ಇದೀಗ ದಕ್ಷಪ್ರಜಾಪತಿಯ ಕನ್ಯಾಸಂತತಿಯು.

ಈ ಉತ್ಪತ್ತಿಕ್ರಮವನ್ನು ಯಾವನೊಬ್ಬನು ಭಕ್ತಿಯಿಂದ ಕೇಳುತ್ತಾನೆಯೋ, ಆತನು ಅಪುತ್ರವಂತನಾಗುವದಿಲ್ಲ.”

ಎಂದು ಪರಾಶರರು ಮೈತ್ರೇಯರಿಗೆ ನಿರೂಪಿಸಿದರು.

ಎಂಬ ಬಳಿಗೆ ವಿಷ್ಣುಪುರಾಣದಲ್ಲಿ ಪ್ರಥಮಾಂಶದ

ದಶಮಾಧ್ಯಾಯಸಂಪೂರ್ಣ.

## ಹನ್ನೊಂದನೆ–ಅಧ್ಯಾಯ.

(ಧ್ರುವ ಚರಿತ್ರೆ)

ಶ್ರೀಪರಾಶರರು ನಿರೂಪಿಸುತ್ತಾರೆ:—

"ಮೈತ್ರೇಯನೇ, ಸ್ವಾಯಂಭುವ ಮನುವಿನ ದೌಹಿತ್ರವಂಶವನ್ನು ಹೇಳಿದೆವು. ಕೇಳು, ಆತನ ಪುತ್ರವಂಶವನ್ನು ಹೇಳುವೆವು. ಆ ಮನುವಿಗೆ ಪ್ರಿಯವ್ರತ ಉತ್ತಾನಪಾದರೆಂಬ ಅತಿಧಾರ್ಮಿಕರಾಗಿಯೂ ಮಹಾಪರಾಕ್ರಮಿಗಳಾಗಿಯೂ ಇಬ್ಬರು ಪುತ್ರರಿದ್ದರೆಂದು ಪೂರ್ವದಲ್ಲಿ ತಿಳಿಸಿದ್ದೆವು. ಆ ಉತ್ತಾನಪಾದರಾಯನಿಗೆ ಸುರುಚಿ ಸುನೀತಿಗಳೆಂಬ ಇಬ್ಬರು ಪತ್ನಿಯರು. ಆತನಿಗೆ ಸುರುಚಿಯಲ್ಲಿ ಉತ್ತಮನು ಹುಟ್ಟಿದನು. ಆ ಉತ್ತಮನಲ್ಲಿಯೂ ಅವನ ತಾಯಿಯಾದ ಸುರುಚಿಯಲ್ಲಿಯೂ ಆ ರಾಯನಿಗೆ ಬಹುಪ್ರೀತಿಯುಂಟು. ಆದರೆ ಸುನೀತಿಯೆಂಬ ಆತನ ಪಟ್ಟಮಹಿಷಿಯಲ್ಲಿಯೂ ಅವಳಲ್ಲಿ ಹುಟ್ಟಿದ ಧ್ರುವನಲ್ಲಿಯೂ ಆ ರಾಯನಿಗೆ ಅಷ್ಟು ಮೋಹವಿರಲಿಲ್ಲವು. ಹೀಗಿರಲು, ಒಂದಾನೊಂದು ದಿನ ರಾಜಾಸನದಲ್ಲಿ ಕುಳಿತಿದ್ದ ತಂದೆಯ ತೊಡೆಯಲಿ ಉತ್ತಮನು ಕುಳಿತಿರುವದನ್ನು ಕಂಡು, ತಾನೂ ಆತನ ತೊಡೆಯ ಮೇಲೆ ಕುಳಿತು ಕೊಳ್ಳುವದಕ್ಕೆ ಯತ್ನಿಸಿದ ಧ್ರುವನನ್ನು ನೋಡಿ, ಉತ್ತಾನಪಾದರಾಯನು ಪಕ್ಕದಲ್ಲಿದ್ದ ತನ್ನ ಮೋಹದ ರಾಣಿಯಾದ ಸುರುಚಿಗೆ ಕೋಪ ಬರುವದೆಂದು ಅದಕ್ಕೆ ಸಮ್ಮತಿ ಕೊಡದಿರಲು; ಸುರುಚಿಯು ನೋಡಿ, ತನ್ನ ಸವತಿಯ ಮಗನಾದ ಧ್ರುವನು ತನ್ನ ಮಗನಿಗೆ ಸರಿಯಾಗಿ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳುವದನ್ನು ಸಹಿಸಲಾರದೆ, ಧ್ರುವನನ್ನು ನೋಡಿ 'ಎಲೊ, ಮಗು, ಇದಕ್ಕೆ ಯಾಕೆ ಯತ್ನಿಸುತ್ತೀಯೆ? ಈ ನಿನ್ನ ಮನೋರಥವು ನಿನಗೆ ದುರ್ಲಭವೆಂದು ತೋರುವದು. ನೀನು ನನ್ನಲ್ಲಿ ಜನಿಸಿಲಿಲ್ಲ, ಅನ್ಯಸ್ತ್ರೀಯಲ್ಲಿ ಜನಿಸಿದೆ. ಈ ರಾಜಸ್ಥಾನವು ಆದ್ದರಿಂದ ನಿನಗೆ ಅಸಾಧ್ಯವು. ಇದನ್ನು ನೀನು ಅವಿವೇಕದಿಂದ ಅಪೇಕ್ಷಿಸುತ್ತೀಯೆ? ಈ ರಾಯನಿಗೆ ನೀನು ಪುತ್ರನೇ ಹೌದು. ಆದಾಗ್ಯೂ, ನೀನು ನನ್ನಲ್ಲಿ ಜನಿಸಿಲ್ಲವಾದಕಾರಣ ಈ ರಾಜಾಸನವೂ, ಸಕಲರಾಜರುಗಳಿಗೂ ಆಶ್ರಯವಾದ ಈ ಚಕ್ರವರ್ತಿ ಪದವಿಯೂ ನಿನಗೆ ಸಲ್ಲದು ; ನನ್ನ ಮಗನಿ

ಗೇನೆ ಸಲ್ಲತಕ್ಕದ್ದು. ನೀನು ಸುಮ್ಮನೇಯಾಕೆ ಕ್ಲೇಶಪಡುತ್ತೀಯೆ? ಈ ಶ್ರೇಷ್ಠವಾದ ಆಸನವು ನನ್ನ ಮಗನಿಗೇನೆ ಅರ್ಹವಾದದ್ದು. ನಿನಗೆ ಯೋಗ್ಯವಾದ್ದಲ್ಲ. ಸುನೀತಿಯಲ್ಲಿ ನೀನು ಹುಟ್ಟಿದ್ದು, ನಿನಗೆ ಮರೆತು ಹೋಯಿತೋ?, ಎಂದು ಹೇಳಲು ; ಆಮಾತಿಗೆ ಧ್ರುವನು ಕೋಪಿಸಿಕೊಂಡು ತಂದೆಯನ್ನು ಬಿಟ್ಟು ತನ್ನ ತಾಯಿಯ ಮನೆಗೆ ಬಂದನು. ಕೇಳು ಮೈತ್ರೇಯನೇ, ಆಗ ಸುನೀತಿಯು ಕೋಪದಿಂದ ಸ್ಫುರಿತಾಧರನಾಗಿರುವ ತನ್ನ ಮಗನನ್ನು ಬಾಗಲಲ್ಲಿ ಕಂಡು, ಒಳಗೆ ಕರೆದುಕೊಂಡು ಹೋಗಿ, ತೊಡೆಯಮೇಲೆ ಕುಳ್ಳಿರಿಸಿಕೊಂಡು, 'ಅಪ್ಪಾ, ಮಗುವೇ, ನಿನಗೆ ಯಾಕೆ ಇಷ್ಟುಕೋಪ? ನಿನಗೆ ಅಹಿತವಾದ್ದನ್ನು ಮಾಡಿದವರಾರು ? ನಿನ್ನ ತಂದೆಯು ಪ್ರಭುವೆಂದು ಲಕ್ಷ್ಯಮಾಡದೆ, ಯಾರೇನು ನಿನಗೆ ಮಾಡಿದರು? ಎಂದು ಕೇಳಲು; ಧ್ರುವನು ರಾಯನ ಸಮಕ್ಷದಲ್ಲಿ ನಡೆದ ಸಂಗತಿಯಲ್ಲವನ್ನು ಯಥಾವತ್ತಾಗಿ ತಾಯಿಗೆ ತಿಳಸಿದನು. ಸುರುಚಿಯ ಗರ್ವದ ಮಾತುಗಳನ್ನು ಕೇಳಿ, ಸುನೀತಿಯು ನಿಟ್ಟುಸುರನ್ನು ಬಿಡುತ್ತಾ, ಕಂಬನಿಗಳನ್ನು ಸುರಿಸುತ್ತಾ, 'ಅಪ್ಪಾ ಮಗುವೇ, ಸುನೀತಿ ಹೇಳಿದ್ದೇ ನಿಜ. ನೀನು ಅಲ್ಪಭಾಗ್ಯನೇ ಹೌದು. ಪುಣ್ಯವಂತರ ಮಕ್ಕಳನ್ನು ಸೊತಿಗಳು ಹೀಗೆ ಹೇಳುವರೆ! ಅಯ್ಯಾ, ದುಃಖಪಡಬೇಡ. ಪೂರ್ವಜನ್ಮದಲ್ಲಿ ನೀ ಮಾಡಿದ ಸುಕೃತವನ್ನು ಅಪಹರಿಸಿಲೂ, ಹೆಚ್ಚುಮಾಡಲೂ, ಯಾವನಿಗೆತಾನೆ ಸಾಮರ್ಥ್ಯವುಂಟು. ಸುರುಚಿಯ ಮಾತಿಗೆ ದುಃಖಪಡತಕ್ಕದ್ದಲ್ಲ. ಪುಣ್ಯವಿದ್ದವನಿಗೆ ರಾಜಾಸನವೂ, ಶ್ವೇತಛತ್ರವೂ, ಉತ್ತಮಾಶ್ವಗಳೂ, ಆನೆಗಳೂ ಬರುವದು. ಇದನ್ನು ತಿಳದು ವ್ಯಸನಪಡದೆ ಸುಮ್ಮನಾಗು. ಸುರುಚಿಯು ಪೂರ್ವಜನ್ಮದಲ್ಲಿ ಪುಣ್ಯಮಾಡಿರುವಳು. ಆದ್ದರಿಂದಲೇ ರಾಜನು ಅವಳಲ್ಲಿ ಪ್ರೀತಿಯನ್ನಿಟ್ಟು, ನನ್ನ ಭಾರ್ಯೆ ಯೆಂದು ಕರೆಯುತ್ತಾನೆ. ನಾನು ಪುಣ್ಯಹೀನೆಯು, ಆದ್ದರಿಂದಲೆ ಹೀಗಿರುವೆನು. ಆಕೆಯ ಗರ್ಭದಲ್ಲಿ ಬಂದ ಉತ್ತಮನು ಪುಣ್ಯಶಾಲಿಯು. ನನ್ನಲ್ಲಿ ಜನಿಸಿದ ನೀನು ಅಲ್ಪಭಾಗ್ಯನೇ ಸರಿ. ಆದಾಗ್ಯೂ ವ್ಯಸನಪಡಕೆಲಸವಿಲ್ಲ. ತನ್ನ ಸುಕೃತಕ್ಕೆ ಅನುಗುಣವಾದ ಫಲದಿಂದ ಸಂತುಷ್ಟಿಯನ್ನು ಪಡಿಯತಕ್ಕವನೇ ಬುದ್ಧಿವಂತನು. ಸುರುಚಿಯ ಮಾತು ನಿನಗೆ ದುಃಖವುಂಟುಮಾಡಿದ್ದಲ್ಲಿ, ಅಂಥಾ ಫಲವನ್ನು ಕೊಡುವ

ಹೆಚ್ಚಾದ ಪುಣ್ಯವನ್ನು ಸಂಪಾದಿಸುವದರಲ್ಲಿ ಯತ್ನಮಾಡು. ಅಲ್ಲದೆ ಒಳ್ಳೇ ಶೀಲವುಳ್ಳವನಾಗು. ಧರ್ಮಬುದ್ಧಿಯುಳ್ಳವನಾಗು. ಎಲ್ಲರನ್ನು ನಿನ್ನ ಮಿತ್ರರಂತೆ ಭಾವಿಸು. ಪ್ರಾಣಿಗಳಿಗೆ ಹಿತವಾದ್ದನ್ನೇ ಉಂಟುಮಾಡುವದರಲ್ಲಿ ಆಸಕ್ತಿಯುಳ್ಳವನಾಗು. ಹಳ್ಳವಾದ ಜಾಗದಲ್ಲಿ ನೀರು ನಿಲ್ಲುವಂತೆ ಅಲ್ಲವೇ, ಸಕಲವಾದ ಸಂಪತ್ತುಗಳೂ ಸದಾಚಾರ ಸಂಪನ್ನನಾದವನನ್ನು ತಾವೇ ಬಂದು ಸೇರುವವು.' ಎಂದು ಹೇಳಿದುದಕ್ಕೆ ಧ್ರುವನು ಇಂತೆಂದು ನುಡಿದನು. 'ಕೇಳು ಅಮ್ಮಾ ಸುರುಚಿಯ ಮಾತನ್ನು ಕೇಳಿ ನನ್ನ ಹೃದಯವು ಒಡದಿರುವದರಿಂದ ನನ್ನ ದುಃಖವನ್ನು ಹೋಗಲಾಡಿಸಬೇಕೆಂದು ನೀನು ಹೇಳಿದ್ದು ನನ್ನ ಹೃದಯವನ್ನು ಹೊಗಲಿಲ್ಲ. ಉತ್ತಮೋತ್ತಮಸ್ಥಾನಗಳೆಷ್ಟು ಇರುವವೋ, ಅವೆಲ್ಲಕ್ಕಿಂತಲೂ ಮೇಲಾದ ಪದವಿಯನ್ನು ಸಂಪಾದಿಸುವ ಯತ್ನಮಾಡುತ್ತೇನೆ. ಸುರುಚಿಯು ರಾಯನಿಗೆ ಪ್ರಿಯಪತ್ನಿಯು. ಅವಳಲ್ಲಿ ನಾನು ಜನಿಸಲಿಲ್ಲವಾಗಿ ಅವಳಲ್ಲಿ ಹುಟ್ಟಿದ ಉತ್ತಮನೇ ರಾಜಾಸನವನ್ನು ಹೊಂದಲಿ. ಅದನ್ನು ಹೊಂದಬೇಕೆಂಬ ಆಶೆಯೂ ನನಗಿಲ್ಲ. ಎಲೌ, ತಾಯೆ, ರಾಯನಿಗೆ ಅಪ್ರಿಯಳಾದ ಜ್ಯೇಷ್ಠಪತ್ನಿಯಾದ ನಿನ್ನ ಹೊಟ್ಟೆಯಲ್ಲಿ ಹುಟ್ಟಿ, ನಾನು ಮಾಡುವ ಸಾಮರ್ಥ್ಯವನ್ನು ನೋಡು. ನನ್ನ ತಂದೆಗೂ ಹೊಂದುವದಕ್ಕೆ ಆಗದ ಅಖಂಡಿತ ಸ್ಥಾನವನ್ನು ನನ್ನ ಸುಕೃತದಿಂದಲೇ ಸಂಪಾದಿಸುವೆನು.' ಎಂದು ಹೇಳಿ, ಒಡನೆ ತಾಯಿಗೆ ಅಭಿವಂದಿಸಿ, ಮನೆಯಿಂದ ಹೊರಟು, ಪುರವನ್ನು ದಾಟಿ, ಆ ಪುರದ ಹೊರವಳಯದಲ್ಲಿರುವ ಉದ್ಯಾನವನವನ್ನು ಸೇರಿ, ಇವನ ಅನುಗ್ರಹಾರ್ಥವಾಗಿ ಪೂರ್ವದಲ್ಲಿಯೇ ಅಲ್ಲಿ ಬಂದು ದರ್ಭಾಸನದಲ್ಲಿ ಕುಳಿತು ಕೃಷ್ಣಾಜಿನವನ್ನು ಉತ್ತರೀಯ್ಯ ಮಾಡಿಕೊಂಡು ಧ್ಯಾನನಿಷ್ಠೆಯಲ್ಲಿ ಇರುತ್ತಿದ್ದ ಸಪ್ತರ್ಷಿಗಳನ್ನು ಕಂಡು, ಸಾಷ್ಟಾಂಗವೆರಗಿ, ತಲೆವಾಗಿ, ಅಭಿವಾದನಂಗೈದು, 'ಎಲೈ ಋಷಿಗಳಿರಾ! ಕರುಣಿಸಿ. ನಾನು ಉತ್ತಾನಪಾದರಾಯನ ಮಗನು. ಸುನೀತಿಯಲ್ಲಿ ಜನಿಸಿದವನು. ನನ್ನನ್ನು ಧ್ರುವನೆನ್ನುವರು. ನಿರ್ವೇದದಿಂದ ನಿಮ್ಮ ಬಳಿಯನ್ನೈದಿದೆನು.' ಎಂದು ವಿಜ್ಞಾಪಿಸಲು ; ಆ ಋಷಿಗಳು 'ಎಲೈ, ನೀನು ನಾಲ್ಕೈದು ವರುಷದ

ಕೂಸು. ನಿನಗೆ ಈಗ ನಿರ್ವೇದವೆಂದರೇನು, ಅದಕ್ಕೆ ಕಾರಣವೇನು ? ಇಂಥಾ ನಿನಿಗೆ ಕುಟುಂಬ ಭರಣಾದಿಗಳೆಲ್ಲಿಯದು? ನಿಂನ ತಂದೆ ಭೂಪಾಲನು. ನಿನಗೆ ಬೇಕಾದವಸ್ತುಗಳ್ಯಾವವು ದುರ್ಲಭವಲ್ಲ. ನಿನ್ನ ಶರೀರದಲ್ಲಿ ರೋಗಾದಿಗಳುಂಟೋ, ಅಂದರೆ ಅವೇನೂ ಕಾಣುವದಿಲ್ಲ. ಹೀಗಿರುವಾಗ್ಯೆ ನಿನ್ನ ನಿರ್ವೇದಕ್ಕೆ ಕಾರಣವೇನು, ಹೇಳು.' ಎಂದು, ಕೇಳಲು ; ಧ್ರುವನು ಸುರುಚಿಯ ನಿಷ್ಠುರೋಕ್ತಿಯೇ ಮೊದಲಾಗಿ ತಂದೆಯ ಸಮಕ್ಷಮದಲ್ಲಿ ನಡೆದ ಸಂಗತಿಗಳೆಲ್ಲವನ್ನು ಹೇಳುತ್ತಿರುವಲ್ಲಿ ; ಸಪ್ತರ್ಷಿಗಳು ಬೆರಗಾಗಿ ಒಬ್ಬರನ್ನು ಒಬ್ಬರು ನೋಡಿ, 'ಎಷ್ಟು ಅದ್ಭುತವಾದದ್ದೀ ಕ್ಷತ್ರಿಯ ತೇಜಸ್ಸೆಂಬುವದು! ಬಾಲಕನ ತೇಜಸ್ಸೂ ಕೂಡ ಅತ್ಯುತ್ತಮವಾಗಿರುವದು. ಬಲತಾಯಿಯ ಮಾತು ಇನ್ನೂ ಈತನ ಹೃದಯದಿಂದ ಹೊರಗಾಗದೆ ಇರುವದು! ' ಎಂದು ಹೇಳಿಕೊಳ್ಳುತ್ತಾ, ಈತನನ್ನು ನೋಡಿ, 'ಎಲೈ ಕ್ಷತ್ರಿಯವಟುವೆ ನಿನ್ನ ನಿರ್ವೇದಕ್ಕೆ ನಾವು ಮಾಡುವದೇನಾದರೂ ಇದ್ದರೆ, ತಿಳಿಸು. ನಮ್ಮಿಂದ ಆಗತಕ್ಕ ಸಹಾಯವನ್ನು ಮಾಡುವೆವು. ಇನ್ನು ನೀನು ಬಂದಿರುವ ಕೆಲಸವೇನು? ' ಎಂದು ಕೇಳಲು ; 'ಎಲೈ ಮುನಿಗಳಿರಾ, ನಾನು ಅರ್ಥವನ್ನರ್ಥಿಸುವನಲ್ಲ. ತಂದೆಯ ರಾಜ್ಯವನೊಲ್ಲೆ. ಇತರರಿಂದ ಅನನುಭೂತವಾದ ರಾಜ್ಯವ್ಯಾವುದುಂಟೋ, ಅದನ್ನಪೇಕ್ಷಿಸಿ ಬಂದಿರುವೆನು. ಅದಕ್ಕೆ ಸಾಧನವನ್ನು ಹೇಳಿ. ಇಷ್ಟುಮಾತ್ರವೆ ಅಲ್ಲ. ಸಕಲವಾದ ಉತ್ತಮಪದವಿಗಳಿಗೂ ಉತ್ತಮವಾದ ಪದವಿಯನ್ನಪೇಕ್ಷಿಸುವ ನನ್ನಲ್ಲಿ ಅನುಗ್ರಹದಿಂದ ತತ್ಸಾಧನವಾದ ಯತ್ನವನ್ನು ನಡಿಸಿ.' ಎಂದು ನಮ್ರನಾಗಿ ಬೇಡುತ್ತಿರುವಲ್ಲಿ ಧ್ರುವನನ್ನು ಕುರಿತು ಆ ಋಷಿಗಳು ಪ್ರತ್ಯೇಕಪ್ರತ್ಯೇಕವಾಗಿ ಇಂತೆಂದು ನುಡಿದರು. ಮರೀಚಿಯು 'ಶ್ರೀಮನ್ನಾರಾಯಣನನ್ನು ಪೂಜಿಸಿದ ಹೊರ್ತು ನರನಿಗೆ ಒಳ್ಳೇ ಸ್ಥಾನವು ದೊರಕಲಾರದಾದ್ದರಿಂದ ಅಚ್ಯುತನನ್ನು ಪೂಜಿಸಿ ಅಭೀಷ್ಟಸಿದ್ಧಿಯನ್ನೈದು.' ಎಂದೂ, ಬಳಿಕ ಅತ್ರಿಯು 'ಬ್ರಹ್ಮಾದಿಗಳಿಗೂ ನಿಯಾಮಕನಾದ ಪರಮಾತ್ಮನು ಯಾವನ ವಿಷಯದಲ್ಲಿ ಸಂತುಷ್ಟನೋ ಆ ಪುರುಷನು ಅಕ್ಷಯಸ್ಥಾನವನ್ನು ಪಡೆಯುವನು.' ಎಂದೂ, ಬಳಿಕ ಅಂಗಿರಸನು 'ಸಕಲಸ್ಥಾನವು ಪರಮಾತ್ಮನಾದ ಅಚ್ಯುತನಲ್ಲಿರುವದಾದ್ದರಿಂದ, ಉತ್ತಮವಾದ ಸ್ಥಾನವನ್ನು ನೀನು

ಬಯಿಸಿದರೆ ಆ ಗೋವಿಂದನನ್ನಾರಾಧಿಸಿ ಪಡೆಯಬೇಕು.' ಎಂದೂ, ಬಳಿಕ ಪುಲಸ್ತ್ಯನು 'ಯಾವದು ಪರಬ್ರಹ್ಮವೋ, ಯಾವದು ಉತ್ತಮವಾದ ಸ್ಥಾನವೋ, ಅಂಥಾ ಸೃಷ್ಟಿಕರ್ತೃಗಳಾದ ಬ್ರಹ್ಮಾದಿಗಳನ್ನು ಸೃಷ್ಟಿಸಿದ ಶ್ರೀಹರಿಯನ್ನು ಆರಾಧಿಸಿದವರೇ ಅತಿದುರ್ಲಭವಾದ ಗತಿಯನ್ನು ಸುಖದಿಂದ ಪಡೆದವರು. ಆದ್ದರಿಂದ ಅಂಥಾ ಹರಿಯನ್ನು ಆರಾಧಿಸು.' ಎಂದೂ, ಬಳಿಕ ಕ್ರತುವು 'ಯಾವನು ಯಜ್ಞಪುರುಷನೋ, ಯಜ್ಞಸ್ವರೂಪನೋ, ವೇದಶಾಸ್ತ್ರಗಳಿಂದ ಅರಿಯತಕ್ಕವನೋ, ಅಂಥಾ ಪರಮಾತ್ಮನು ಪ್ರಸನ್ನನಾದರೆ ಅಪ್ರಾಪ್ಯವೇನಿರುವದು. ಸಕಲವೂ ಪ್ರಾಪ್ತವಹದು.' ಎಂದೂ, ಬಳಿಕ ಪುಲಹನು 'ದೇವೇಂದ್ರನು ಯಾವ ಪರಮಾತ್ಮನನ್ನಾರಾಧಿಸಿ ಅತಿಶಯಸ್ಥಾನವನ್ನು ಹೊಂದಿದನೋ, ಅಂಥಾ ಯಜ್ಞಪತಿಯಾದ ವಿಷ್ಣುವನ್ನು ಆರಾಧಿಸು.' ಎಂದೂ, ಬಳಿಕ ವಸಿಷ್ಠನು 'ವಿಷ್ಣುವನ್ನು ಆರಾಧಿಸು. ಉತ್ತಮೋತ್ತಮವಾದ ಮೂರುಲೋಕದೊಳಗಾಗಿ ಯಾವ ಸ್ಥಾನವನ್ನು ಅಪೇಕ್ಷಿಸುವಿಯೋ ಆ ಸ್ಥಾನವನ್ನು ಪಡೆಯುತ್ತೀಯೆ.' ಎಂದೂ ಹೇಳಿದರು. ಈ ಪ್ರಕಾರವಾಗಿ ಋಷಿಗಳು ಹೇಳಲು ; 'ಎಲೈ ಋಷಿಗಳಿರಾ! ನಿಮ್ಮ ಶರಣವರಣವ ಮಾಡಿದ ನನಗೆ ಆರಾಧ್ಯನಾದ ಪರಮಾತ್ಮನು ವಿಷ್ಣುವೇ ಯೆಂದು ಹೇಳಿದಿರಿ. ಆ ವಿಷ್ಣುವು ಪ್ರಸನ್ನನಾಗುವದಕ್ಕೆ ಜಪಿಸಬೇಕಾದ ಮಂತ್ರವನ್ನು ಉಪದೇಶಿಸಿ. ಆ ಪರಮಾತ್ಮನ ಆರಾಧನೆ ಹ್ಯಾಗೆ ಮಾಡಬೇಕೋ ಅದನ್ನೂ ದಯಪಾಲಿಸಬೇಕು.' ಎಂದು ಧ್ರುವನು ಬೆಸಗೊಳ್ಳಲು ; ಮಹರ್ಷಿಗಳು 'ಕೇಳು ಧ್ರುವನೇ, ಮನುಷ್ಯರಿಂದ ವಿಷ್ಣುವಿನ ಆರಾಧನೆ ಹ್ಯಾಗೆ ಮಾಡಲ್ಪಡಬೇಕೋ ಆ ಪ್ರಕಾರವನ್ನು ನಿನಗೆ ತಿಳಿಯ ಹೇಳುವೆವು. ಸಾವಧಾನವಾಗಿ ಕೇಳು. * ಮೊದಲಲ್ಲಿ ಸಕಲವಾದ ಬಾಹ್ಯಾರ್ಥಗಳನ್ನು ಬಿಟ್ಟು ಚಿತ್ತವನ್ನು ಸಮಾಧಾನಪಡಿಸಿ, ಜಗದ್ಧಾಮನಾದ ಪರಮಾತ್ಮನಾವ

---

* ಹಿಂಸೆ ಅನೃತ ಇವೇ ಮೊದಲಾದ ನಿಷಿದ್ಧವಾದ ಬುದ್ಧಿಕಾರ್ಯಗಳನ್ನು ಪ್ರಥಮದಲ್ಲಿ ತ್ಯಜಿಸಿ, ಅನಂತರ ಯಮನಿಯಮಪ್ರಾಣಾಯಾಮಪೂರ್ವಕ ಮನಸ್ಸಿನ ಚಾಂಚಲ್ಯವನ್ನು ಹೋಗಲಾಡಿಸಿ, ಭಗವಂತನಲ್ಲಿ ಮನಸ್ಸನ್ನಿಟ್ಟು ಜಪವಮಾಡಬೇಕೆಂದು ತಾತ್ಪರ್ಯ.

ನಾರಾಯಣನಲ್ಲಿ ಮನಸ್ಸನ್ನಿಟ್ಟು, ಏಕಾಗ್ರಚಿತ್ತನಾಗಿ, ತದ್ಗತಮನಸ್ಕನಾಗಿ,

ಹಿರಣ್ಯಗರ್ಭಪುರುಷಪ್ರಧಾನಾವ್ಯಕ್ತರೂಪಿಣೇ॥
ಓಂನಮೋವಾಸುದೇವಾಯ ಶುದ್ಧಜ್ಞಾನಸ್ವಭಾವಿನೇ॥

ಎಂಬ ಮಂತ್ರವನ್ನು ಜಪಿಸಬೇಕು. ಎಲೈ, ಪಾರ್ಥಿವನಂದನನೇ, ಈ ಮಂತ್ರವನ್ನು ನಿನ್ನ ಪಿತಾಮಹನಾದ ಸ್ವಾಯಂಭುವಮನುವು ನಿಷ್ಠೆಯಿಂದ ಜಪಿಸಲು, ಸ್ವಾಮಿಯು ಪ್ರಸನ್ನನಾಗಿ ಆತನಿಗೆ ಇಚ್ಛೈಸಿದ ಸಂಪತ್ತೆಲ್ಲವನ್ನು ಕೊಟ್ಟನು. ಹಾಗೆಯೇ, ಈ ಮಂತ್ರವನ್ನು ನೀನೂ ಸದಾ ಜಪಿಸುತ್ತಾ ಪರಮಾತ್ಮನಾದ ನಾರಾಯಣನನ್ನು ಸಂತೋಷಿಸು." ಎಂದು ಸಪ್ತರ್ಷಿಗಳು ಹೇಳಿದರು."

ಎಂದು ಶ್ರೀಪರಾಶರರು ಮೈತ್ರೇಯರಿಗೆ ನಿರೂಪಿಸಿದರು.

ಎಂಬ ಬಳಿಗೆ ವಿಷ್ಣುಪುರಾಣದಲ್ಲಿ ಪ್ರಥಮಾಂಶದ
ಏಕಾದಶಾಧ್ಯಾಯ ಸಮಾಪ್ತ.

## ಹನ್ನೆರಡನೆ – ಅಧ್ಯಾಯ.

ಶ್ರೀ ಪರಾಶರರು ಹೇಳುತ್ತಾರೆ:—

"ಕೇಳು ಮೈತ್ರೇಯ, ಆ ಬಳಿಕ ಅತ್ರಿಮೊದಲಾದ ಸಪ್ತರ್ಷಿಗಳ ಹಿತೋಪದೇಶವನ್ನು ಕೇಳಿ, ರಾಯನ ಕುಮಾರನಾದ ಧ್ರುವನು ಆ ಋಷಿಗಳಿಗೆ ನಮಸ್ಕಾರಪೂರ್ವಕ ಅಭಿವಾದನ ಮಾಡಿ, ಆ ವನದಿಂದ ಹೊರಟು ತಾನು ಈಗ ಕೃತಕೃತ್ಯನಾದನೆಂದು ವಿಭಾವಿಸಿಕೊಂಡು, ಮಧುವನವೆಂದು ಪ್ರಸಿದ್ಧವಾಗಿಯೂ ಪಾಪವಿಮೋಚಕವಾಗಿಯೂ, ಪುಣ್ಯಕರವಾಗಿಯೂ ಇರುವ ಯಮುನಾನದೀ ತೀರವನ್ನೈದಿ, ಯಾವ ಸ್ಥಳಕ್ಕೆ ಪೂರ್ವದಲ್ಲಿ ಮಧುವೆಂಬ ರಾಕ್ಷಸನು ವಾಸವಾಗಿದ್ದ ಕಾರಣ ಭೂಮಿಯಲ್ಲಿ ಮಧುವನವೆಂದು ಹೆಸರಾಯಿತೋ, ಎಲ್ಲಿ ಶತ್ರುಘ್ನನು ಮಹಾಬಲಿಷ್ಠನಾದ ಮಧುಪುತ್ರನಾದ ಲವಣಾಸುರನನ್ನು ಸಂಹರಿಸಿ ಮಧುರಾಪಟ್ಟಣವೆನಿಸಿದನೋ, ಎಲ್ಲಿ ದೇವದೇವನಾಗಿ ಸರ್ವಪಾಪಹಾರಿಯಾದ ಸ್ವಾಮಿಯ ಸಾನ್ನಿಧ್ಯ ಉಂಟಾಯಿತೋ, ಅಂಥಾ ಪಾಪವಿಮೋಚಕವಾದ ಕ್ಷೇತ್ರದ ತೀರದಲ್ಲಿ ತಪಸ್ಸನ್ನು ಮಾಡಿದವನಾದನು.

ಮೊದಲು ಮರೀಚಿಮೊದಲಾದ ಋಷಿಗಳು ಹೇಳಿದಪ್ರಕಾರದಲ್ಲಿ ತನ್ನ ಮನಸ್ಸಿನಲ್ಲಿ ಅಶೇಷಜಗತ್ಪತಿಯಾದ ವಿಷ್ಣುವನ್ನು ಧ್ಯಾನಮಾಡಿದನು. ಅನ್ಯತ್ರ ಮನಸ್ಸಿಲ್ಲದೆ ತದೇಕನಿಷ್ಠನಾಗಿ ಧ್ಯಾನಿಸುತ್ತಿದ್ದ ಧ್ರುವನಿಗೆ ಸಮಸ್ತಭೂತಗತನಾದ ಭಗವಂತನಾದ ಹರಿಯು ಧ್ಯಾನಗೋಚರನಾದನು. ಸರ್ವವ್ಯಾಪಕನಾದ ನಾರಾಯಣನು ಈತನ ಮನಸ್ಸಿನಲ್ಲಿ ನಿಲಕಡೆಯಾಗುತ್ತಿರಲಾಗಿ, ಭೂತಾಧಾರೆಯಾದ ಭೂದೇವಿಯು ಭಾರವನ್ನು ಸಹಿಸಲಾರದೆ ಹೋದಳು. ಧ್ರುವನು ವಾಮಪಾದನ್ಯಾಸ ಮಾತ್ರದಿಂದ ನಿಂತು ಧ್ಯಾನಗತನಾಗಲಾಗಿ, ಆ ಪಾರ್ಶ್ವದಲ್ಲಿ ಭೂಮಿಯು ತಗ್ಗಿದ್ದಾಯಿತು. ಉಳಿದ ದಕ್ಷಿಣಪಾರ್ಶ್ವವು ಕೂಡಲೇ ಮೇಲಕ್ಕೆ ಎದ್ದಿತು. ಆಗ ಸಕಲ ನದಿಗಳೂ, ನದಗಳೂ, ಸಮುದ್ರಗಳೂ ಅತ್ಯಂತ ಸಂಕ್ಷೋಭಪನ್ನೈದಿದವು. ಅದರಿಂದ ದೇವತೆಗಳಿಗೂ ಸಂಕ್ಷೋಭೆಹುಟ್ಟಿತು. ಆ ಸಮಯದಲ್ಲಿ ಸಕಲ ದೇವತೆಗಳೂ ವ್ಯಾಕುಲಿತರಾಗಿ, ದೇವೇಂದ್ರನೊಡನೆ ಆಲೋಚನೆ ಮಾಡಿ, ನಾನಾವಿಧವಾದ ರೂಪಗಳನ್ನು ತಾಳಿ, ಆತನಿಗೆ ಧ್ಯಾನಭಂಗವನ್ನುಂಟುಮಾಡಬೇಕೆಂದು ಯತ್ನಮಾಡಿದರು. ಆಗ ತಾಯಿಯಾದ ಸುನೀತಿಯ ವೇಷವನ್ನು ಧರಿಸಿ, ಕಂಬನಿಗಳನ್ನು ಸುರಿಸುತ್ತಾ, ದೀನೆಯಾಗಿ ಮುಂದೆ ನಿಂತು, ' ಎಲೈ, ಮಗನೆ ಎಂದು ರೋದಿಸುತ್ತಾ, ' ಎಲೆ, ಮಗುವೆ, ಈ ತಪಸ್ಸಿನಿಂದ ಸಾಕು: ಹೋಗುವ ಬಾ. ಹೀಗೆ ಕಾಯ ಕ್ಲೇಶಮಾಡುವದರಿಂದೇನು? ಅನೇಕ ಆಶೆಗಳನ್ನಿಟ್ಟುಕೊಂಡು, ನಿನ್ನ ಪಡೆದನು. ದೀನೆಯಾದ ನನ್ನನ್ನು ಹೀಗೆ ಅನಾಥೆಯಾಗಿ ಬಿಡತಕ್ಕದ್ದಲ್ಲ. ಸವತಿಯ ನಿಷ್ಠುರೋಕ್ತಿಗಳನ್ನು ಕೇಳಿ ದಿಕ್ಕಿಲ್ಲದೆ ಬಂದ ನನಿಗೆ ನೀನೇ ದಿಕ್ಕು. ನಿನ್ನನ್ನು ನೋಡಿ ನನ್ನ ದುಃಖವನ್ನು ಕಳೆದುಕೊಳ್ಳುವೆನೆಂದು ಬಂದೆ. ನಿನ್ನ ಐದುವರುಷದ ಹಸುಳೆತನ ವೆತ್ತಣದು? ಈ ಕಠಿಣವಾದ ತಪಸ್ಸೆತ್ತಣದು? ವ್ಯರ್ಥವಾದ ಈ ಕಷ್ಟತಪಸ್ಸಿನಿಂದ ಮನಸ್ಸನ್ನು ತಿರಿಗಿಸಿ, ಸಾಕುಮಾಡು. ಬಾಲ್ಯದಲ್ಲಿ ಕೆಲವು ದಿನ ಮಕ್ಕಳಾಟಿಕೆ. ಆಮೇಲೆ ಅಧ್ಯಯನ ಮುಂತಾದ ವಿದ್ಯಾಭ್ಯಾಸ. ಅನಂತರ ವಿವಾಹಾದಿ ಭೋಗಕಾಲ. ಆ ತರುವಾಯ ತಪಸ್ಸು. ಹೀಗೆ ನಡಿಸುವದು ಉಚಿತವು: ಈಗ ನಿನಗೆ ಆ

ಡುವಕಾಲ. ಈ ಕಾಲದಲ್ಲಿಯೂ ಕೂಡ ಉಗ್ರತಪಸ್ಸನ್ನು ಮಾಡಿ ದೇಹತ್ಯಾಗಮಾಡುತ್ತಲಿದ್ದೀಯೆ? ಕೇಳು ಮಗನೆ. ನಿನ್ನ ವಯಸ್ಸಿಗೂ ಅವಸ್ಥೆಗೂ ತಕ್ಕಂತೆ ನಡೆದು ನನಗೆ ಪ್ರೀತಿಯನ್ನುಂಟುಮಾಡುವದು ಶ್ರೇಷ್ಠವಾದ ಧರ್ಮವು. ಆಜ್ಞೋಲ್ಲಂಘನರೂಪವಾದ ಅಧರ್ಮವನ್ನು ಬಿಟ್ಟು ನಾನು ಹೇಳಿದಂತೆ ಮಾಡು. ಈ ಅಧರ್ಮರೂಪವಾದ ತಪಸ್ಸನ್ನು ಬಿಡದೆ, ನನ್ನ ಪ್ರೀತಿಯನ್ನು ಸಲಿಸದೆ ಇದ್ದರೆ, ನಿನ್ನ ಮುಂದೆ ನನ್ನ ಪ್ರಾಣಗಳನ್ನು ತ್ಯಜಿಸುವೆನು.' ಎಂದು ಹೇಳಿದಾಗ್ಯೂ ಪರಮಾತ್ಮನಾದ ಶ್ರೀಮನ್ನಾರಾಯಣನ ಧ್ಯಾನದಲ್ಲಿದ್ದರಿಂದ ಧ್ರುವನು ನೋಡಲಿಲ್ಲವಾಗಿ, ತಿರಿಗಿ ಮಾಯಾಸುನೀತಿಯು 'ಎಲೆ, ಸಣ್ಣವನೆ, ಈ ವನದಲ್ಲಿ ಭಯಂಕರರಾದ ರಾಕ್ಷಸರು ಆಯುಧಗಳೊಡನೆ ನಿನ್ನ ಹಿಂಸಿಸುವದಕ್ಕೆ ಕವಿಯುವರು. ಶೀಘ್ರದಲ್ಲಿ ಹೋಗು, ಹೋಗು.' ಎಂದು ಕೂಗಿ ಹೇಳಿ ಮರೆಯಾದನಂತರದಲ್ಲಿ ರಾಕ್ಷಸರು ಬಂದು ಈತನನ್ನು ಬೆದರಿಸಿದರು. ಕೆಲವರು ಭಯಂಕರವಾದ ಜ್ವಾಲಾಸಮೂಹವುಳ್ಳ ಮುಖಗಳನ್ನು ಮಾಡಿಕೊಂಡು, ತೀಕ್ಷ್ಣಗಳಾದ ಶಸ್ತ್ರಗಳನ್ನು ಕೈಯಲ್ಲಿ ತಾಳ್ದು, ಧ್ರುವನ ಮುಂದೆ ನಿಂತು, ಭೀಕರವಾದ ಧ್ವನಿಯಿಂದ ಅಟ್ಟಹಾಸಂಗೈದು, ಆ ಶಸ್ತ್ರಗಳನ್ನು ತಿರಿಗಿಸಿ ಬಿಟ್ಟಂಥವರಾದರು. ಮತ್ತೆ ಕೆಲವರು ಸಿಂಹೋಷ್ಟ್ರ ಮಕರಗಳಂತೆ ಮುಖಗಳನ್ನು ಮಾಡಿಕೊಂಡು ಆತನನ್ನು ಕಂಗೆಡಿಸಬೇಕೆಂದು ಬೊಬ್ಬಿಟ್ಟರು. ಆಮೇಲೆ ಮಾಯಾರೂಪಿಗಳಾದ ನರಿಗಳು ಜ್ವಾಲಾಕಬಳಗಳಿಂದ ಸಹಿತವಾದ ಮುಖಗಳೊಡನೆ ಚೀರಿದವು. ಈತನನ್ನು ಕಂಗೆಡಿಸಬೇಕೆಂದು ರಾಕ್ಷಸರು ಆಗಾಗ್ಯೆ ಬಂದು, 'ಈ ಬಾಲಕನ್ನು ಸಂಹರಿಸಿ, ಸಂಹರಿಸಿ; ಛೇದಿಸಿ, ಛೇದಿಸಿ; ಭಕ್ಷಿಸಿ, ಭಕ್ಷಿಸಿ.' ಎಂದು ಕೂಗುತ್ತಾ, ಸಿಂಹೋಷ್ಟ್ರ ಮಕರ ಮುಖವುಳ್ಳವರಾಗಿ ನಾನಾಪ್ರಕಾರದಿಂದ ಭಯಂಕರವಾದ ಕೂಗುಗಳನ್ನು ಕೂಗಿದವರಾದರು. ಈ ರಾಕ್ಷಸರು ನಾನಾ ರೂಪಗಳನ್ನು ಧರಿಸಿ ಮಾಡಿದ ಕೃತ್ಯಗಳೂ, ಭಯಂಕರವಾದ ನಾದಗಳೂ, ನಾನಾವಿಧಾಯುಧಗಳು, ಇವೆಲ್ಲವೂ ಸಹ ಗೋವಿಂದಾಸಕ್ತಮನಸ್ಕರನಾದ ಧ್ರುವನ ಚಕ್ಷುರಾಹೀಂದ್ರಿಯಗಳಿಗೆ ಗೋಚರವಾಗಲಿಲ್ಲವು. ಏಕಾಗ್ರ

ಚಿತ್ತನಾಗಿ, ಸಕಲೇಂದ್ರಿಯಗಳಿಗೂ ವಿಷಯವಾಗಿ ವಿಷ್ಣುವನ್ನೇ ಧ್ಯಾನಿಸುತ್ತಲಿದ್ದ ಧ್ರುವನಿಗೆ ವಿಷ್ಣುವಲ್ಲದೆ ಮತ್ತೊಂದು ವಿಷಯವೂ ಕಾಣಿಸಲಿಲ್ಲ. ಆ ಮಾಯೆಗಳೆಲ್ಲವೂ ವ್ಯರ್ಥವಾಗಿ ಹೋಗಲಾಗಿ, ದೇವತೆಗಳು ಧ್ರುವನಿಂದ ತಮಗೆ ಪರಾಭವವುಂಟಾಗುವದೆಂದು ಭಯಪಟ್ಟು ಸಂಕ್ಷೋಭವನ್ನು ಹೊಂದಿದವರಾದರು. ಆಮೇಲೆ ಉತ್ಪತ್ತಿ ವಿನಾಶರಹಿತನಾಗಿರುವ ಶರಣ್ಯನಾದ ನಾರಾಯಣನನ್ನು ಶರಣು ಹೊಕ್ಕು, ಆತನನ್ನು ಕುರಿತು ' ಎಲೈ, ಬ್ರಹ್ಮರುದ್ರಾದಿಗಳಿಗೂ ಸ್ವಾಮಿಯಾಗಿ, ಜಗನ್ನಿಯಂತ್ರನಾಗಿ ಪರೇಶನಾದ ಪುರುಷೋತ್ತಮನೇ! ರಾಜಕುಮಾರನಾದ ಧ್ರುವನ ತಪಸ್ಸಿನಿಂದ ತಪಿಸಲ್ಪಟ್ಟವರಾಗಿ, ನಿನ್ನನ್ನು ಶರಣುಹೊಕ್ಕೆವು. ಧ್ರುವನು ಪ್ರತಿದಿನದಲ್ಲಿಯೂ ಕಲಾಭಾಗಗಳಿಂದ ಅಭಿವೃದ್ಧಿಯನ್ನು ಹೊಂದುವ ಚಂದ್ರನಂತೆ ತನ್ನ ತಪಸ್ಸಿನಿಂದ ವೃದ್ಧಿಯನ್ನು ಹೊಂದುತ್ತಾ ಬರುವನು ಉತ್ತಾನಪಾದರಾಯನ ಪುತ್ರನ ತಪಸ್ಸಿನಿಂದ ಈ ಪ್ರಕಾರವಾಗಿ ಭಯವನ್ನು ಹೊಂದಿ ನಿನ್ನ ಶರಣವನ್ನು ಹೊಕ್ಕಿರುವಕಾರಣ ಆತನನ್ನು ತಪಸ್ಸಿನಿಂದ ನಿವರ್ತಿಸು. ಈತನು ಇಂದ್ರಪದವಿಯನ್ನು ಅಪೇಕ್ಷಿಸುವನೋ, ಅಥವಾ ಸೂರ್ಯಕುಬೇರ ವರುಣಚಂದ್ರರುಗಳ ಪದವಿಗಳನ್ನು ಅಪೇಕ್ಷಿಸುವನೋ ನಾವರಿಯೆವು. ಈ ಪ್ರಕಾರದಲ್ಲಿ ಕಂಗೆಟ್ಟ ನಮ್ಮಲ್ಲಿ ಪ್ರಸನ್ನನಾಗಿ, ಈ ಹೃದಯಶಲ್ಯವನ್ನು ಪರಿಹರಿಸು. ಉತ್ತಾನಪಾದರಾಯನ ಪುತ್ರನ ತಪಸ್ಸನ್ನು ಸಾಕುಮಾಡಿಸು. ' ಎಂದು ಪ್ರಾರ್ಥಿಸಲಾಗಿ; ಸ್ವಾಮಿಯು ದೇವತೆಗಳನ್ನು ನೋಡಿ, ' ಎಲೈ, ದೇವತೆಗಳಿರಾ! ಬಾಲಕನಾದ ಧ್ರುವನು ಇಂದ್ರ ಕುಬೇರ ವರುಣಾದಿಗಳ ಪದವಿಯನ್ನು ಪ್ರಾರ್ಥಿಸುವನಲ್ಲ. ಬೇರೆ ಪ್ರಾರ್ಥಿಸುವನು. ಅವನ ಕೋರಿಕೆಯಲ್ಲವನ್ನು ಮಾಡಿಕೊಡುವೆನು. ನೀವು ಭಯವ ಬಿಟ್ಟು, ನಿಮ್ಮ ಸ್ಥಾನಗಳಿಗೆ ಸುಖವಾಗಿಹೋಗಿರಿ. ನಾನು ಆ ಬಾಲಕನ ತಪಸ್ಸನ್ನು ಸಾಕುಮಾಡುವೆನು. ' ಎಂದು ಹೇಳಲಾಗಿ; ಇಂದ್ರಾದಿ ದೇವತೆಗಳು ಸ್ವಾಮಿಗೆ ಪ್ರಣಾಮವಂ ಗೈದು, ತಮ್ಮ ತಮ್ಮ ಆಸ್ಥಾನಗಳಿಗೆ ಹೊರಟು ಹೋದವರಾದರು. ಇತ್ತ ವಿಶ್ವಾತ್ಮಕನಾದ ಚತುರ್ಭುಜನಾದ ಭಗವಂತನು ಆತನ ತಪಸ್ಸಿಗೆ ಸಂತೋಷ ಪಟ್ಟು,

ಆತನಿಗೆ ಪ್ರಸನ್ನನಾಗಿ ಇಂತೆಂದುನುಡಿದನು. 'ಎಲೈ, ಉತ್ತಾನಪಾದರಾಯನ ಮಗನೇ, ನಿನಗೆ ಶುಭವಾಗಲಿ. ನಿನ್ನ ತಪಸ್ಸಿನಿಂದ ಸಂತುಷ್ಟನಾದೆನು. ನೀನು ಬೇಡಿದ ವರವನ್ನು ಕೊಡಲು ಬಂದಿದ್ದೇನೆ. ವರವನ್ನು ಕೇಳು. ಬಾಹ್ಯದಲ್ಲಿ ನಿರಪೇಕ್ಷನಾಗಿ, ನನ್ನಲ್ಲಿ ಚಿತ್ತವನಿಲ್ಲಿಸಿ, ನನ್ನಲ್ಲಿಯೇ ನ್ಯಸ್ತಭರನಾಗಿದ್ದದ್ದರಿಂದ ನಾನು ಪ್ರಸಂನನಾದೆನು. ಆದಕಾರಣ ಶ್ರೇಷ್ಠವಾದ ವರವನ್ನು ಕೇಳು.' ಎಂದು ಶ್ರೀಮನ್ನಾರಾಯಣನು ಹೇಳಿದ್ದನ್ನು ಕೇಳಿ, ಧ್ರುವನು ಕಣ್ತೆರದು ನೋಡುವಲ್ಲಿ ಶಂಖ ಚಕ್ರ ಗದಾ ಖಡ್ಗ ಶಾರ್ಙಗಳೆಂಬ ಪಂಚಾಯುಧಗಳನ್ನು ಧರಿಸಿ, ಕಿರೀಟಾದಿ ದಿವ್ಯಭೂಷಣ ಭೂಷಿತನಾಗಿ ತನ್ನ ಧ್ಯಾನದರ್ಶನಕ್ಕೆ ಸಮಾನಾಕಾರವಾದ ಮೂರ್ತಿಯನುಳ್ಳ ಸ್ವಾಮಿಯನ್ನು ಕಂಡು, ದಂಡಪ್ರಣಾಮವನ್ನು ಮಾಡಿದ್ದಲ್ಲದೆ ಸರ್ವಾವಯಗಳಲ್ಲಿಯೂ ರೋಮಾಂಚವುಳ್ಳವನಾಗಿ, ಭಯಸಂಭ್ರಮವುಳ್ಳವನಾಗಿ, ಸ್ವಾಮಿಯನ್ನು ಸ್ತೋತ್ರಮಾಡಬೇಕೆಂದು ಬಗೆದು, 'ಪರಮಾತ್ಮನ ಸ್ತೋತ್ರವನ್ನು ಏನೆಂದು ಮಾಡಲಿ. ಯಾವನು ಮಾಡಿದ ಸ್ತೋತ್ರವನ್ನು ಜಪಿಸಲಿ.' ಎಂದು ಈ ಪ್ರಕಾರವಾಗಿ ವ್ಯಾಕುಲ ಚಿತ್ತವುಳ್ಳವನಾಗಿ, ಆ ಸ್ವಾಮಿಯಲ್ಲಿ ಶರಣವನ್ನು ಮಾಡಿ, 'ಸ್ವಾಮೀ, ಬಿನ್ನಹಾ. ನನ್ನ ತಪಸ್ಸಿನಿಂದ ನಿಮಗೆ ಸಂತೋಷ ಉಂಟಾಗಿದ್ದಹ್ಯೇ ಆದರೆ, ನಿಮ್ಮನ್ನು ಸ್ತೋತ್ರಮಾಡಬೇಕೆಂಬ ಇಚ್ಛೆಯುಳ್ಳ ನನಗೆ ಅಂಥಾ ಬುದ್ಧಿ ವಿಶೇಷವನ್ನು ಕೊಡಿ. ನಿಮ್ಮ ಪಾದಭಕ್ತಿಯಲ್ಲಿ ಪ್ರವಣವಾದ ಮನಸ್ಸು ನನಗುಂಟಾಗಲಿ!' ಎಂದು ಬೇಡಿಕೊಳ್ಳಲು; ಸ್ವಾಮಿಯು ಕೇಳಿ, ಧ್ರುವನನ್ನು ತನ್ನ ಪಾಂಚಜನ್ಯದಿಂದ ಮುಟ್ಟಿಸಲು ; ಆಕ್ಷಣದಲ್ಲಿಯೇ ಆತನಿಗೆ ಮುಖದಲ್ಲಿ ಪ್ರಸನ್ನತೆಯುಂಟಾಯಿತು. ಬಳಿಕ ಆತನು ಅಚ್ಯುತನಿಗೆ ಪ್ರಣಾಮವಂಗೈದು ಸ್ತೋತ್ರವ ಮಾಡಲಾರಂಭಿಸಿದನು. 'ಪೃಥಿವ್ಯಪ್ತೇಜೋವಾಯುಗಳೂ, ಆಕಾಶವೂ, ಮನಸ್ಸೂ, ಬುದ್ಧಿಯೂ, ಅಹಂಕಾರವೂ, ಪ್ರಧಾನವೂ– ಇವೆಲ್ಲವೂ ಯಾವ ಪರಮಾತ್ಮನ ಸ್ವರೂಪವೋ ಅಂಥಾ ಸ್ವಾಮಿಯೇ! ನಿನಗೆ ನಮಸ್ಕಾರವನ್ನು ಮಾಡುತ್ತೇನೆ. ಮತ್ತು